ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

**ಪಟ್ಟಿ – ೦೪**

**ಒಟ್ಟು ಪ್ರಶ್ನೆಗಳು – ೧೬೨**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತಾರನೇ ಅಧಿವೇಶನ

**ಶುಕ್ರವಾರ, ದಿನಾಂಕ : ೧೨ನೇ ಡಿಸೆಂಬರ್, ೨೦೧೪**

---

## ಸಮೂಹ – V

೧. ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

೩. ವಸತಿ ಸಚಿವರು

೪. ಅಬಕಾರಿ ಸಚಿವರು

೫. ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

---

## ಮಂಜೂರಾದ ಹುದ್ದೆಗಳು ಹಾಗೂ ಅನುದಾನದ ಸೌಲಭ್ಯ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೧೫ (೪೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಇಲಾಖೆಗೆ (ಕೆಆರ್‌ಐಡಿಎಲ್) ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಮತ್ತು ತೆರವಿರುವ ಹುದ್ದೆಗಳೆಷ್ಟು ;

(ಆ) ಈ ಇಲಾಖೆಯ ಕಛೇರಿಗಳ ನಿರ್ವಹಣೆಗೆ ಮತ್ತು ಸಿಬ್ಬಂದಿಗಳ ವೇತನಕ್ಕೆ ತಗಲುವ ವೆಚ್ಚವೆಷ್ಟು; ಈ ವೆಚ್ಚವನ್ನು ಭರಿಸಲು ಇಲಾಖೆಗೆ ಇರುವ ಆದಾಯದ ಮೂಲಗಳು ಯಾವುವು ?

## ಅಕ್ರಮ ಮದ್ಯ ಮಾರಾಟ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೧೬ (೪೨) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಕ್ರಮ ಮದ್ಯ ಮಾರಾಟದಡಿ ಪೊಲೀಸರು ದಾಖಲಿಸಿದ ಪ್ರಕರಣಗಳೆಷ್ಟು; ಅಬಕಾರಿ ಇಲಾಖೆಯ ಅಧಿಕಾರಿಗಳು ದಾಖಲಿಸಿದ ಪ್ರಕರಣಗಳೆಷ್ಟು (ತಾಲ್ಲೂಕುವಾರು, ವರ್ಷವಾರು, ಪ್ರಕರಣವಾರು ವಿವರ ನೀಡುವುದು) ;

(ಆ) ಕರಾವಳಿ ಜಿಲ್ಲೆಗಳಲ್ಲಿ ಮದ್ಯದಂಗಡಿಯ ಸನ್ನದುದಾರರೇ ಹೆಚ್ಚಿನ ಗೂಡುಂಗಡಿಗಳಿಗೆ ಅಕ್ರಮವಾಗಿ ಮದ್ಯ ಸರಬರಾಜು ಮಾಡಿ ಅವರಿಂದ ಮಾರಾಟ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಗ್ರಾಮಕ್ಕೊಂದರಂತೆ ಎಂ.ಎಸ್.ಐ.ಎಲ್. ಮದ್ಯದಂಗಡಿಗಳನ್ನು ತೆರೆಯುವ ಯೋಜನೆ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ, ಇಂತಹ ಅಕ್ರಮ ನಿಯಂತ್ರಿಸಲು ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?



## ಸರ್ಕಾರಿ ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಪ್ರೌಢ ಶಾಲೆಗಳಿಗೆ ಸಿ.ಸಿ. ಕ್ಯಾಮರಾ ಅಳವಡಿಸುವ ಆದೇಶದ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೧೭ (೪೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲು ಸರ್ಕಾರ ಆದೇಶ ಮಾಡಿರುವುದು ನಿಜವೇ, ಇದ್ದಲ್ಲಿ ಆದೇಶದ ಪ್ರತಿ ಒದಗಿಸುವುದು;

(ಆ) ಇದರ ಅಳವಡಿಕೆಗೆ ಅಂದಾಜು ತಗಲುವ ವೆಚ್ಚವೆಷ್ಟು ಮತ್ತು ಆ ವೆಚ್ಚವನ್ನು ಭರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ರಾಜ್ಯದ ಗ್ರಾಮ ಪಂಚಾಯತು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೧೮ (೪೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯತುಗಳು ಒಟ್ಟು ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;

(ಆ) ಟ್ಯಾಂಕರುಗಳ ಮೂಲಕ ಕುಡಿಯುವ ನೀರನ್ನು ಒದಗಿಸಿದ ಗ್ರಾಮ ಪಂಚಾಯತುಗಳು ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಇ) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ರೂಪಿಸುವಾಗ ತಜ್ಞರ ಸಲಹೆ ಇಲ್ಲದೆ ಯೋಜನೆಗಳು ವಿಫಲವಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ಕುಡಿಯುವ ನೀರಿನ ಅಭಾವವನ್ನು ಬಗೆಹರಿಸಲು ತಜ್ಞರ ಸಲಹೆಯೊಂದಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ರೂಪಿಸುವ ಚಿಂತನೆ ಸರ್ಕಾರದ ಮುಂದಿದೆಯೇ ?



## ರಾಜ್ಯದ ಗ್ರಾಮ ಪಂಚಾಯತ್‌ಗಳಿಗಿರುವ ಸ್ವತಂತ್ರ ಅಧಿಕಾರದ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೧೯ (೩೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗ್ರಾಮ ಪಂಚಾಯತುಗಳು ನಿರಾಕ್ಷೇಪಣಾ ಪತ್ರವನ್ನು ಹೊರತುಪಡಿಸಿ ಸ್ವತಂತ್ರವಾಗಿ ಯಾವ ಯಾವ ಸೌಲಭ್ಯಗಳನ್ನು ಗ್ರಾಮಸ್ಥರಿಗೆ ನೀಡಲು ಅವಕಾಶವಿರುತ್ತದೆ.

(ಆ) ಗ್ರಾಮ ಪಂಚಾಯತುಗಳು ನಿರಾಕ್ಷೇಪಣಾ ಪತ್ರವನ್ನು ನೀಡಲು ಪಂಚಾಯತು ಅಭಿವೃದ್ಧಿ ಅಧಿಕಾರಿ, ಲೆಕ್ಕ ಸಹಾಯಕರು, ಕಾರ್ಯದರ್ಶಿ, ಬಿಲ್‌ಕಲೆಕ್ಟರ್, ತಾತ್ಕಾಲಿಕ ಕಂಪ್ಯೂಟರ್ ನಿರ್ವಾಹಕರ ಅವಶ್ಯಕತೆಯನ್ನು ಸರ್ಕಾರ ಗಮನಿಸಿದೆಯೇ;

(ಇ) ರಾಜ್ಯದಲ್ಲಿನ ಗ್ರಾಮ ಪಂಚಾಯತುಗಳ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಮೇಲೆ ನಿಗವಿಡುವ ಸರ್ಕಾರದ ಕ್ರಮಗಳೇನು?

## ಗಡಿ ಭಾಗದ ಶಾಲೆಗಳ ಸಮಸ್ಯೆಗಳು

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೪೨೦ (೫೭೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ ಗಡಿ ಭಾಗಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಶಿಕ್ಷಕರ, ಶೌಚಾಲಯಗಳ, ಕುಡಿಯುವ ನೀರಿನ ಕೊರತೆಯಿರುವುದು; ಕಾಂಪೌಂಡುಗಳು ಇಲ್ಲದೆ, ಸುಣ್ಣ ಬಣ್ಣ ಮತ್ತು ದುರಸ್ತಿ ಕಾಣದ ಕಟ್ಟಡಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಕೊರತೆಗಳನ್ನು ನಿವಾರಿಸಲು ಸರ್ಕಾರ ಯಾವ್ಯಾವ ಕ್ರಮಗಳನ್ನು ಮತ್ತು ಯಾವಾಗ ಕೈಗೊಳ್ಳಲಿದೆ ?

## ಗೋವಾ ಕನ್ನಡಿಗರ ರಕ್ಷಣೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೪೨೧ (೫೭೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗೋವಾದಲ್ಲಿರುವ ಕನ್ನಡಿಗರ ರಕ್ಷಣೆಗೆ ರಾಜ್ಯ ಸರ್ಕಾರದಿಂದ ನೀಡಬಹುದಾದ ಸಕಲ ಸೌಲಭ್ಯಗಳನ್ನು ನೀಡುವುದಾಗಿ ರಾಜ್ಯ ಸರ್ಕಾರದ ಸಚಿವರು ವಹಿಸಿದ್ದ ನೇತೃತ್ವದ ತಂಡ ಭರವಸೆಯನ್ನು ಗೋವಾ ಸರ್ಕಾರಕ್ಕೆ ನೀಡಿ ಬಂದಿದ್ದು ನಿಜವೇ ;

(ಆ) ನೀಡಿದ ಭರವಸೆಯಂತೆ, ಗೋವಾದಲ್ಲಿನ ಕನ್ನಡಿಗರ ರಕ್ಷಣೆಗಾಗಿ ರಾಜ್ಯ ಸರ್ಕಾರ ಈವರೆಗೆ ಯಾವೊಂದು ಸಹಕಾರಗಳನ್ನು ಗೋವಾ ಸರ್ಕಾರಕ್ಕೆ ನೀಡದೆ, ನಿರ್ಲಕ್ಷ್ಯತನ ಪ್ರದರ್ಶಿಸುತ್ತಿರುವುದು ಏಕೆ ;

(ಇ) ಹೊರ ರಾಜ್ಯಗಳಲ್ಲಿ ನೆಲಸಿರುವ ಕನ್ನಡಿಗರ ರಕ್ಷಣೆಗಾಗಿ ಸರ್ಕಾರ ಕಾಳಜಿಗಳನ್ನು ತೆಗೆದುಕೊಳ್ಳದಿರುವುದಕ್ಕೆ ಕಾರಣಗಳೇನು ?

## ಮಹಿಳಾ ವಿಶ್ವವಿದ್ಯಾನಿಲಯ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೪೨೨ (೫೭೭) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ 'ಮಹಿಳಾ ವಿಶ್ವವಿದ್ಯಾಲಯ'ದ ಸ್ಥಾಪನೆ, ಉದ್ದೇಶ, ವ್ಯಾಪ್ತಿ, ವಿದ್ಯಾರ್ಥಿನಿಯರಿಗೆ ಸಿಕ್ಕಿರುವ ಸೌಲಭ್ಯಗಳು,



ಈವರೆಗಿನ ಸಾಧನೆಗಳ ವಿವರಗಳ ಸಂಕ್ಷಿಪ್ತ ಟಿಪ್ಪಣಿಗಳನ್ನು ಒದಗಿಸುವುದು;

(ಆ) ಈ ವಿಶ್ವವಿದ್ಯಾನಿಲಯ ಸಲ್ಲಿಸಿರುವ ಯಾವ್ಯಾವ ಬೇಡಿಕೆಗಳು ಸರ್ಕಾರದ ಮುಂದೆ ಬಾಕಿ ಉಳಿದಿವೆ; ಈಡೇರಿಸಲು ಕೈಗೊಂಡಿರುವ ಕ್ರಮಗಳೇನು?

## ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೪೨೩ (೪೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇತ್ತೀಚೆಗೆ ಖಾಸಗಿ ಶಾಲೆಗಳಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸರ್ಕಾರಿ ಶಾಲೆಗಳಲ್ಲಿ ಪೋಷಕರು ಅಥವಾ ಮಕ್ಕಳ ಸಂಬಂಧಿಕರು ಮುಕ್ತವಾಗಿ ಪ್ರವೇಶಿಸಬಹುದಾಗಿದ್ದು, ಆದರೆ ಖಾಸಗಿ ಶಾಲೆಗಳಲ್ಲಿ ಈ ಪರಿಸ್ಥಿತಿ ಇಲ್ಲದಿರುವುದು ಹಾಗೂ ಇಂತಹ ಹಲವಾರು ಅಂಶಗಳು ಸಹ ಲೈಂಗಿಕ ಪ್ರಕರಣಗಳ ಹೆಚ್ಚಳಕ್ಕೆ ಕಾರಣ ಎಂಬುದು ಸರ್ಕಾರದ ಗಮನದಲ್ಲಿದೆಯೇ;

(ಇ) ಸರ್ಕಾರಿ ಶಾಲೆಗಳಲ್ಲಿ ಪೋಷಕರು ಅಥವಾ ಮಕ್ಕಳ ಸಂಬಂಧಿಕರು ಮುಕ್ತವಾಗಿ ಪ್ರವೇಶಿಸಲು ಅನುಮತಿ ಇರುವಂತೆ, ಖಾಸಗಿ ಶಾಲೆಗಳಿಗೂ ಈ ಅವಕಾಶ ಒದಗಿಸಲು ಸರ್ಕಾರವು ನೀತಿ ನಿಯಮಗಳನ್ನು ರೂಪಿಸಿದೆಯೇ;

(ಈ) ಲೈಂಗಿಕ ದೌರ್ಜನ್ಯ ತಡೆಗೆ ಈಗಾಗಲೇ ಸಾಕಷ್ಟು ಕಾನೂನುಗಳು ಇದ್ದು, ಅವುಗಳ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸಲು ಸರ್ಕಾರ ಯಾವ ರೀತಿಯ ಯೋಜನೆಗಳನ್ನು ರೂಪಿಸಿದೆ ;

(ಉ) ಅತ್ಯಾಚಾರ ಪ್ರಕರಣ ಬೆಳಕಿಗೆ ಬಂದ ಕೂಡಲೇ ಕಾನೂನಿನ ಚೌಕಟ್ಟಿನೊಳಗೆ ಕ್ರಮಕೈಗೊಳ್ಳಬೇಕಾಗಿದ್ದು, ಮಾಧ್ಯಮಗಳಲ್ಲಿ ಈ ಕುರಿತು ಅತ್ಯಂತ ವೈಭವೀಕರಣ ನಡೆಸುವುದರ ಬದಲು ಜಾಗೃತಿ ಮೂಡಿಸಲು ಅತ್ಯಂತ ಕಟ್ಟುನಿಟ್ಟಿನ ನಿಯಮ ರೂಪಿಸಲು ಸರ್ಕಾರ ಮುಂದಾಗುವುದೇ ?

## ಶಾಲಾ–ಕಾಲೇಜುಗಳಲ್ಲಿ ರಂಗ ಶಿಕ್ಷಕರ ನೇಮಕ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೪೨೪ (೭೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಾಲಾ–ಕಾಲೇಜುಗಳಲ್ಲಿ ಮಕ್ಕಳಿಗೆ ಪಾಠ ಮಾಡುವುದರ ಜೊತೆಗೆ ರಂಗಭೂಮಿ ಶಿಕ್ಷಣ ನೀಡುವ ಕುರಿತು ಸರ್ಕಾರ ಯಾವುದಾದರೂ ಯೋಜನೆಗಳನ್ನು ಹಮ್ಮಿಕೊಂಡಿದೆಯೇ ;

(ಆ) ಶಾಲಾ–ಕಾಲೇಜುಗಳ ಪಠ್ಯ ಪುಸ್ತಕದಲ್ಲಿರುವ ನಾಟಕಗಳ ಬಗ್ಗೆ ಪಾಠ ಮಾಡಲಾಗುತ್ತಿದೆಯೇ; ವಿನಹ ಅದರ ಬಗ್ಗೆ ಪ್ರಾಯೋಗಿಕವಾಗಿ ಮಾಡಿ ತೋರಿಸುವ ಸೂಕ್ತವಾದ ಮಾರ್ಗದರ್ಶಕರ ವ್ಯವಸ್ಥೆಯು ಇರುವುದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಶಾಲಾ–ಕಾಲೇಜುಗಳಲ್ಲಿ ರಂಗಶಿಕ್ಷಕರನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳುವುದೇ ?



## ಖಾಯಂ ವಸ್ತು ಪ್ರದರ್ಶನ ಸಂಕೀರ್ಣದ ಕಟ್ಟಡ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೪೨೫ (೫೭೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿಯಲ್ಲಿ ನಿರ್ಮಿಸಿದ ಖಾಯಂ ವಸ್ತು ಪ್ರದರ್ಶನ ಸಂಕೀರ್ಣದ ಕಟ್ಟಡಕ್ಕೆ ಸರ್ಕಾರವು ಮಂಜೂರು ಮಾಡಿದ ಅನುದಾನವೆಷ್ಟು ;

(ಆ) ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ;

(ಇ) ಕಟ್ಟಡ ನಿರ್ಮಾಣಕ್ಕೆ ಈವರೆಗೆ ಎಷ್ಟು ಅನುದಾನವನ್ನು ವಿನಿಯೋಗಿಸಲಾಗಿದೆ ;

(ಈ) ಕಟ್ಟಡ ನಿರ್ಮಾಣ ಯಾವ ಹಂತದಲ್ಲಿದೆ; ನಿರ್ಮಾಣ ಹಂತ ಪೂರ್ಣಗೊಂಡಿದ್ದಲ್ಲಿ ಇಲಾಖೆಗೆ ಹಸ್ತಾಂತರವಾಗಿದೆಯೇ ;

(ಉ) ಇಲಾಖೆಗೆ ಹಸ್ತಾಂತರವಾಗದಿದ್ದಲ್ಲಿ ಕಾರಣಗಳೇನು ;

(ಊ) ಹಸ್ತಾಂತರ ಪಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಯೋಜನೆಯಡಿ ಐದು ವರ್ಷ ಪೂರ್ಣಗೊಳಿಸಿದ ಶಿಕ್ಷಣ ಸಂಸ್ಥೆಗಳು

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೪೨೬ (೫೭೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯೋಜನೆಯಡಿ ಹೊಸದಾಗಿ ಪ್ರಾರಂಭವಾಗಿ, ಅನುದಾನಕ್ಕೊಳಪಟ್ಟು ೫ ವರ್ಷ ಅವಧಿಯನ್ನು ಪೂರ್ಣಗೊಳಿಸಿದ ಸರ್ಕಾರಿ/

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನವನ್ನು ಯೋಜನೆ ಶೀರ್ಷಿಕೆಯಿಂದ ಯೋಜನೇತರ ಶೀರ್ಷಿಕೆಯಡಿ ಭರಿಸಲು ಅನುಮತಿ ನೀಡಿ ಸರ್ಕಾರ ಆದೇಶಿಸಿದ ದಿನಾಂಕ ಯಾವುದು ;

(ಆ) ಸರ್ಕಾರಿ/ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯವರ ವೇತನವನ್ನು ಯೋಜನೆಯಿಂದ ೫–೧೦ ವರ್ಷ ಪೂರ್ಣಗೊಳಸಿದರೂ ಯೋಜನೇತರ ಶೀರ್ಷಿಕೆಗೆ ಮಾರ್ಪಡಿಸದಿರಲು ಕಾರಣಗಳೇನು ;

(ಇ) ಬೆಳಗಾವಿ ವಿಭಾಗದಲ್ಲಿ ಇಂತಹ ಎಷ್ಟು ಪ್ರೌಢ ಶಾಲೆಗಳು/ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ; ಐದು ವರ್ಷಕ್ಕಿಂತ ಮೇಲ್ಪಟ್ಟರೂ ಯೋಜನೆಯಿಂದ ಯೋಜನೇತರಕ್ಕೆ ಮಾರ್ಪಡಿಸದಿರಲು ಸ್ಪಷ್ಟವಾದ ಕಾರಣಗಳೇನು; ಈ ವ್ಯವಸ್ಥೆಯಿಂದ ಶಿಕ್ಷಕರಿಗೆ ಅನೇಕ ತಿಂಗಳುಗಳಿಂದ ವೇತನ ಸಂದಾಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಮತೀಯ/ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ಬಗ್ಗೆ ಹೊರಡಿಸಿದ ಸಂವಿಧಾನ ವಿರೋಧಿ ಆದೇಶ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೪೨೭ (೪೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮತೀಯ/ಭಾಷಾ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಬಗ್ಗೆ ಯಾವುದಾದರೂ ಶಾಸನವನ್ನು ರಚಿಸಲಾಗಿದೆಯೇ;



(ಆ) ಈ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಬಗ್ಗೆ ಸರ್ಕಾರ ಯಾವಾಗ ಹೊಸ ಆದೇಶ ಹೊರಡಿಸಿದೆ ;

(ಇ) ಈ ಆದೇಶವು ಸಂವಿಧಾನದ ಪರಿಚ್ಛೇದ ೩೦ (೧) ಹಾಗೂ ಬಕ್ಲಿ ಪ್ರಾಥಮಿಕ ಶಾಲೆ ವಿರುದ್ಧ ಒಡಿಸಾ ಸರ್ಕಾರದ ಪ್ರಕರಣದಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಶಿಕ್ಷಣ ಆಯೋಗವು ನೀಡಿದ ಆದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಆದೇಶದ ಪ್ರಕಾರ ಮತೀಯ/ಭಾಷಾ ಅಲ್ಪಸಂಖ್ಯಾತರ ಸ್ಥಾನಮಾನ ನಿಗದಿಪಡಿಸಲು ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಬಾರದೆಂದು ಸ್ಪಷ್ಟವಾಗಿ ಹೇಳಿದೆಯೇ ;

(ಉ) ಹಾಗಿದ್ದರೂ, ಸರ್ಕಾರ ಸಂವಿಧಾನದ ಮೂಲತತ್ವಗಳಿಗೆ ವಿರುದ್ಧವಾದ ಆದೇಶವನ್ನು ಹೊರಡಿಸಲು ಇರುವ ಬಲವಾದ ಕಾರಣಗಳೇನು ?

## ನಿವೃತ್ತಿಯಿಂದ ತೆರವಾದ ವೃತ್ತಿ ಶಿಕ್ಷಕರ ಹುದ್ದೆಗಳ ಭರ್ತಿ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೪೨೮ (೪೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ದಿನಾಂಕ:೦೨.೦೨.೨೦೦೦ಕ್ಕಿಂತ ಮೊದಲು ನಿವೃತ್ತಿಯಿಂದ ತೆರವಾದ ಚಿತ್ರಕಲೆ, ಸಂಗೀತ, ಹೊಲಿಗೆ, ತೋಟಗಾರಿಕೆ ಇತ್ಯಾದಿ ಎಷ್ಟು ಹುದ್ದೆಗಳನ್ನು ತುಂಬಬೇಕಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ದಿನಾಂಕ:೦೨.೦೨.೨೦೦೦ಕ್ಕಿಂತ ಮೊದಲು ನಿವೃತ್ತಿಯಿಂದ ತೆರವಾದ ವೃತ್ತಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಈಗ ಅನುಮತಿ ನೀಡಲಾಗುತ್ತಿದೆಯೇ ;

(ಇ) ಇಲ್ಲವಾದಲ್ಲಿ, ವೃತ್ತಿ ಶಿಕ್ಷಕರ ಹುದ್ದೆಗಳನ್ನು ಭರ್ತಿಗೊಳಿಸಲು ಅನುಮತಿ ನೀಡಲು ಏನಾದರೂ ತೊಂದರೆಗಳಿವೆಯೇ ;

(ಈ) ತೊಂದರೆಗಳಿದ್ದಲ್ಲಿ, ಅವುಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನೀಡುತ್ತಿರುವ ಸೇವಾ ಭದ್ರತೆ

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :–**

೪೨೯ (೪೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಸೇವಾ ಭದ್ರತೆ ಹಾಗೂ ಕನಿಷ್ಠ ವೇತನ ಸೌಲಭ್ಯ ನೀಡುವ ಕುರಿತಂತೆ, ಇಲಾಖೆಯು ೨೦೦೬ ರಿಂದ ೨೦೧೩ರವರೆಗೆ ಒಟ್ಟು ೧೪ ಆದೇಶಗಳನ್ನು ಹೊರಡಿಸಿದ್ದರೂ ಸಹ, ರಾಜ್ಯದ ಸುಮಾರು ೨೩೩೬ ಪ್ರಾಥಮಿಕ ಹಾಗೂ ೧೨೫೮ ಪ್ರೌಢ ಶಾಲೆಗಳ ಆಡಳಿತ ಮಂಡಳಿಯವರು ಶಿಕ್ಷಕರುಗಳಿಗೆ ಬ್ಯಾಂಕ್ ಖಾತೆಯ ಮೂಲಕ ಕನಿಷ್ಠ ವೇತನವನ್ನು ನೀಡದಿರುವುದು ಹಾಗೂ ಸೇವಾ ಪುಸ್ತಕವನ್ನು ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಇಂತಹ ಸಂಸ್ಥೆಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದೆಂದು ಜುಲೈ–೨೦೧೩ರಲ್ಲಿ ಸದನದಲ್ಲಿ ಉತ್ತರ ನೀಡಿದ್ದು, ಅಂತಹ ಯಾವ ಯಾವ ಆಡಳಿತ ಮಂಡಳಿಯ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಜಿಲ್ಲಾವಾರು ಸಂಪೂರ್ಣವಾದ ವಿವರಗಳೊಂದಿಗೆ) ;



(ಆ) ಆದೇಶವನ್ನು ಜಾರಿಗೊಳಿಸಲು ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಇ) ತಪ್ಪಿತಸ್ಥ ಅಧಿಕಾರಿಗಳ ಪೈಕಿ ಎಷ್ಟು ಜನ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಂಡಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಈ) ಸರ್ಕಾರ ೨೦೧೪ರ ಅಂತ್ಯದವರೆಗೆ ರಾಜ್ಯದ ಎಲ್ಲ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ಸಿಬ್ಬಂದಿಗಳಿಗೆ ಸೇವಾ ಭದ್ರತೆಯ ಸೌಲಭ್ಯವನ್ನು ಕಡ್ಡಾಯವಾಗಿ ಜಾರಿಗೊಳಿಸಲು ಕ್ರಮ ಜರುಗಿಸುವುದೇ ?

## ನಷ್ಟದಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಪುನಶ್ಚೇತನ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೦ (೮೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಮುದ್ರಣಾಲಯಗಳು ಎಷ್ಟು; ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಮತ್ತು ವಾರ್ಷಿಕ ಇರುವ ಆದಾಯ–ನಷ್ಟದ ಪ್ರಮಾಣ ಎಷ್ಟು (ಪ್ರತ್ಯೇಕ ಮಾಹಿತಿ ಒದಗಿಸುವುದು) ;

(ಆ) ಪ್ರಸ್ತುತ ನಷ್ಟದಲ್ಲಿದ್ದು ಮುಚ್ಚುವ ಹಂತ ತಲುಪಿದ ಮುದ್ರಣಾಲಯಗಳು ಯಾವುವು; ಇದಕ್ಕೆ ಕಾರಣವಾದ ಅಂಶಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ಒದಗಿಸುವುದು ;

(ಇ) ನಷ್ಟದಲ್ಲಿರುವ ಸರ್ಕಾರಿ ಮುದ್ರಣಾಲಯಗಳನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಅವಶ್ಯಕವಾಗಿರುವ ಅಂದಾಜು ಬಂಡವಾಳ ಎಷ್ಟು (ಮಾಹಿತಿ ಒದಗಿಸುವುದು) ;

(ಈ) ತುಮಕೂರು ಸರ್ಕಾರಿ ಮುದ್ರಣಾಲಯವು ನಷ್ಟದಲ್ಲಿರುವುದು ನಿಜವೇ; ಇದರ ಪುನಶ್ಚೇತನಕ್ಕೆ ಸರ್ಕಾರವು ಆಲೋಚಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳು ಏನು (ಮಾಹಿತಿ ಒದಗಿಸುವುದು) ?

## ಬೆಂಗಳೂರು ನಗರದಲ್ಲಿ ಅಳವಡಿಸಿರುವ ಕೇಬಲ್ ಸಂಪರ್ಕ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೧ (೧೭೩) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಟೆಲಿವಿಷನ್ ವೀಕ್ಷಣೆಗಾಗಿ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಖಾಸಗಿಯವರು ಮನೆ/ಕಛೇರಿ ಸೇರಿದಂತೆ ಅಳವಡಿಸಿರುವ ಕೇಬಲ್ ಸಂಪರ್ಕ ಸಂಖ್ಯೆಯ ಅಂದಾಜು ಸರ್ಕಾರಕ್ಕೆ ಇದೆಯೇ; ಹಾಗಿದ್ದಲ್ಲಿ, ವಿವರ ಒದಗಿಸುವುದು ;

(ಆ) ಕೇಬಲ್ ಸಂಪರ್ಕಕ್ಕಾಗಿ ವಿದ್ಯುತ್ ದೂರವಾಣಿ ಕಂಬಗಳ ಮೇಲೆ ಕೇಬಲ್ ವೈರ್‌ಗಳನ್ನು ಹಾಕಲು ಸರ್ಕಾರವು ಅನುಮತಿಸಿರುವುದೇ; ಇಲ್ಲದಿದ್ದಲ್ಲಿ, ಈ ಪ್ರಯೋಜನ ಪಡೆಯುತ್ತಿರುವ ಕೇಬಲ್ ಸಂಸ್ಥೆಗಳಿಂದ ಸರ್ಕಾರಕ್ಕೆ ಆಗುತ್ತಿರುವ ಪ್ರಯೋಜನವೇನು (ವಿವರ ಒದಗಿಸುವುದು) ;

(ಇ) ಖಾಸಗೀ ಕೇಬಲ್ ಸಂಪರ್ಕದ ಬದಲು ಸರ್ಕಾರವೇ ಕೇಬಲ್ ಸೌಲಭ್ಯಗಳನ್ನು ಒದಗಿಸುವ ಆಲೋಚನೆಯಿದೆಯೇ, ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಇದುವರೆಗೆ ಸರ್ಕಾರ ಕೈಗೊಂಡ ಪ್ರಗತಿ ಏನು (ಮಾಹಿತಿ ಒದಗಿಸುವುದು) ?



## ಮನೆಗಳ ನಿರ್ಮಾಣ/ಫಲಾನುಭವಿಗಳಿಗೆ ಹಂಚಿಕೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೨ (೮೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಕೊಳಚೆ ನಿರ್ಮೂಲನಾ ಅಭಿವೃದ್ಧಿ ಮಂಡಳಿಯಿಂದ ಮಂಜೂರಾದ ಮನೆಗಳೆಷ್ಟು (ವಿಧಾನ ಸಭಾವಾರು, ವರ್ಷವಾರು, ವಾರ್ಡ್‌ವಾರು ಮಾಹಿತಿ ನೀಡುವುದು) ;

(ಆ) ಮಂಜೂರಾದ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಪ್ರತಿ ವರ್ಷ ಹೊಂದಲಾದ ಗುರಿ ಎಷ್ಟು; ಹಂಚಿಕೆಯಾಗಿರುವ ಮನೆಗಳೆಷ್ಟು; ಹಂಚಿಕೆಯಾಗದೆ ಉಳಿದಿರುವ ಮನೆಗಳೆಷ್ಟು (ವಿವರ ನೀಡುವುದು) ?

## ಆಶ್ರಯ ಯೋಜನೆಯ ಫಲಾನುಭವಿಗಳು

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೩ (೫೮೧) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇದುವರೆಗೂ (೨೦೧೪–೧೫)ನೇ ಸಾಲಿನಲ್ಲಿ ಆಶ್ರಯ ಯೋಜನೆ, ಇಂದಿರಾಗಾಂಧಿ ಆಶ್ರಯ ಯೋಜನೆಯಡಿ ಮಂಜೂರಾಗಿರುವ ಮನೆಗಳ ಬಗ್ಗೆ ಪೂರ್ಣ ಮಾಹಿತಿ ನೀಡುವುದು ;

(ಆ) ಆಶ್ರಯ ಮನೆ ಯೋಜನೆಯನ್ನು ಫಲಾನುಭವಿಗಳಿಗೆ ಯಾವ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಇ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಆಶ್ರಯ ಯೋಜನೆಯಡಿ ಮನೆಗಳನ್ನು ಹೊಂದಿದ ಫಲಾನುಭವಿಗಳ ಸಂಖ್ಯೆ ಎಷ್ಟು (ಮಾಹಿತಿ ನೀಡುವುದು) ?

## ಶಾಲಾ ಮಕ್ಕಳ ಮೇಲೆ ದೈಹಿಕ ಹಿಂಸೆ/ಲೈಂಗಿಕ ಕಿರುಕುಳ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೪೩೪ (೮೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಾಲಾ ಮಕ್ಕಳ ಮೇಲೆ (ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳ) ದೈಹಿಕ ಹಿಂಸೆ/ಲೈಂಗಿಕ ಕಿರುಕುಳವಾಗಿರುವ ಪ್ರಕರಣಗಳು ಎಷ್ಟು (ವಿವರ ನೀಡುವುದು) ;

(ಆ) ಈ ರೀತಿಯಾಗಿ ದಾಖಲೆಯಾಗಿರುವ ಪ್ರಕರಣಗಳಲ್ಲಿ ಹಿಂಸೆ/ ಕಿರುಕುಳಗಳು ನೀಡುತ್ತಿರುವ ವ್ಯಕ್ತಿ/ಸಂಸ್ಥೆಯ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು);

(ಇ) ಈ ಅನಾರೋಗ್ಯಕರ ಬೆಳವಣಿಗೆಗಳನ್ನು ನಿಯಂತ್ರಿಸಲು ಏನು ಕ್ರಮ ಕೈಗೊಳ್ಳಲಾಗಿದೆ?



## ಅತಿಥಿ ಉಪನ್ಯಾಸಕರಿಗೆ ಸಂಭಾವನೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೪೩೫ (೮೩) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವಲ್ಲಿ ಇರುವ ಯುಜಿಸಿ ಮಾನದಂಡಗಳೇನು;

(ಆ) ಅತಿಥಿ ಉಪನ್ಯಾಸಕರಿಗೆ ನೀಡಬಹುದಾದ ಸಂಭಾವನೆಯ ಕುರಿತಾಗಿ ಯುಜಿಸಿಯಲ್ಲಿರುವ ಮಾನದಂಡಗಳೇನು;

(ಇ) ಅದರಂತೆ ಅತಿಥಿ ಉಪನ್ಯಾಸಕರಿಗೆ ಸಂಭಾವನೆ ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

## ರಾಜ್ಯದಲ್ಲಿ ಶೇ.೭೫ ಕ್ಕಿಂತ ಹೆಚ್ಚು ಅಂಗವಿಕಲತೆ

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೪೩೬ (೮೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಶೇ.೭೫ ಕ್ಕಿಂತ ಹೆಚ್ಚು ಅಂಗವಿಕಲತೆ ಇರುವ ವ್ಯಕ್ತಿಗಳ ಸಂಖ್ಯೆ ಎಷ್ಟು ;

(ಆ) ಶೇ.೭೫ ಕ್ಕಿಂತ ಹೆಚ್ಚು ಅಂಗವಿಕಲತೆ ಇರುವ ವ್ಯಕ್ತಿಗಳಿಗೆ ಮಾಸಿಕ ಸಹಾಯಧನ ನೀಡಲು ಇರುವ ಮಾನದಂಡಗಳೇನು ;

(ಇ) ಶೇ.೭೫ ಕ್ಕಿಂತ ಹೆಚ್ಚು ಅಂಗವಿಕಲತೆ ಇರುವವರ ಸಂಖ್ಯೆ ಕಡಿಮೆ ಇರುವುದರಿಂದ ಹಾಗೂ ಅವರು ಅತ್ಯಂತ ದುಸ್ತರವಾದ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದರಿಂದ ಮಾಸಿಕ ಸಹಾಯಧನ ನೀಡುವಲ್ಲಿ ಆರ್ಥಿಕ ಮಾನದಂಡವನ್ನು ಸಡಿಲಗೊಳಿಸುವ ಕುರಿತಾಗಿ ಸರ್ಕಾರದ ನಿಲುವೇನು ?

## ಕರ್ನಾಟಕ ಕೊಳಚೆ ನಿರ್ಮೂಲನಾ ಅಭಿವೃದ್ಧಿ ಮಂಡಳಿಯ ವಾಹನಗಳು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೪೩೭ (೮೬) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ನಿಯಮದಂತೆ ಕರ್ನಾಟಕ ಕೊಳಚೆ ನಿರ್ಮೂಲನಾ ಅಭಿವೃದ್ಧಿ ಮಂಡಳಿಯಲ್ಲಿ ಯಾವ ವರ್ಗದ ಅಧಿಕಾರಿಗಳಿಗೆ ವಾಹನ ಉಪಯೋಗಿಸಲು ಅವಕಾಶವಿರುತ್ತದೆ; (ಆದೇಶದ ಪ್ರತಿ ಹಾಗೂ ವಿವರ ನೀಡುವುದು) ;

(ಆ) ಮಂಡಳಿಯಲ್ಲಿ ಎಷ್ಟು ಸರ್ಕಾರಿ ವಾಹನಗಳು ಹಾಗೂ ಎಷ್ಟು ಖಾಸಗಿ ವಾಹನಗಳು ಕೆಲಸ ನಿರ್ವಹಿಸುತ್ತಿವೆ ಹಾಗೂ ವಾಹನ ಉಪಯೋಗಿಸುತ್ತಿರುವ ಅಧಿಕಾರಿಗಳ ವಿವರ ತಿಳಿಸುವುದು ;

(ಇ) ವಾರ್ಷಿಕ ವಾಹನ ನಿರ್ವಹಣೆಗೆ ಎಷ್ಟು ಖರ್ಚು ಮಾಡಲಾಗುತ್ತಿದೆ ;

(ಈ) ಖಾಸಗಿ ವಾಹನಗಳನ್ನು ಪಡೆಯಲು ನಿಯಮಾನುಸಾರ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿದೆಯೇ (ಗುತ್ತಿಗೆ ನೀಡಿರುವ ಏಜನ್ಸಿಯವರ ವಿವರ ನೀಡುವುದು) ?



## ಕಿಂಡರ್ ಗಾರ್ಟನ್‌ಗಳ ನಿರ್ವಹಣೆ.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) :–**

೪೩೮ (೮೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿ ಎಷ್ಟು ಶಿಶು ವಿಹಾರಗಳಿವೆ;

(ಆ) ಈ ಸಂಸ್ಥೆಗಳಲ್ಲಿ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಪ್ರವೇಶಾವಕಾಶ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಕಿಂಡರ್ ಗಾರ್ಟನ್ ನಡೆಸಲು ಸರ್ಕಾರವು ಯಾವ ನಿಯಮದ ಅಡಿಯಲ್ಲಿ ಅನುಮತಿ ನೀಡುತ್ತಿದೆ;

(ಈ) ಕಿಂಡರ್ ಗಾರ್ಟನ್ ನಡೆಸಲು ಕನಿಷ್ಠ ಯಾವ ರೀತಿಯ ಸೌಲಭ್ಯಗಳು ಇರಬೇಕು ಎಂಬುದರ ಬಗ್ಗೆ ಸರ್ಕಾರವು ನಿಯಮಾವಳಿಗಳನ್ನು ರೂಪಿಸಿದೆಯೇ; ಇದ್ದಲ್ಲಿ, ಮಾಹಿತಿಯನ್ನು ಒದಗಿಸುವುದು;

(ಉ) ರಾಜ್ಯದಲ್ಲಿ ಅನಧಿಕೃತ ಕಿಂಡರ್ ಗಾರ್ಟನ್‌ಗಳು ಅಸ್ತಿತ್ವದಲ್ಲಿವೆಯೇ? (ಇದ್ದಲ್ಲಿ, ಪೂರ್ಣ ವಿವರ ನೀಡುವುದು)

## ಬೆಂಗಳೂರು ಕಂಠೀರವ ಸ್ಟುಡಿಯೋ ಅಭಿವೃದ್ಧಿ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೯ (೧೬೩) ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ನಗರದಲ್ಲಿರುವ ಕಂಠೀರವ ಸ್ಟುಡಿಯೋ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಕಳೆದ ಮೂರು ವರ್ಷಗಳಲ್ಲಿ ಈ ಸ್ಟುಡಿಯೋ ಅಭಿವೃದ್ಧಿಗೆ ಕೈಗೊಂಡಿರುವ ಕಾಮಗಾರಿಗಳು ಯಾವುವು, ಈ ಕಾಮಗಾರಿಗಳಿಗೆ ಮಂಜೂರು ಮಾಡಿರುವ ಮತ್ತು ಬಿಡುಗಡೆ ಮಾಡಿರುವ ಹಣ ಎಷ್ಟು (ವಿವರ ಒದಗಿಸುವುದು)

(ಆ) ಕಂಠೀರವ ಸ್ಟುಡಿಯೋದಲ್ಲಿ ಕನ್ನಡ ಚಿತ್ರಗಳ ಚಿತ್ರೀಕರಣಕ್ಕೆ ವಿಧಿಸುತ್ತಿರುವ ಫ್ಲೋರ್ ಬಾಡಿಗೆ ಎಷ್ಟು, ಯಾವ ಆಧಾರದ ಮೇಲೆ ಈ ಬಾಡಿಗೆ ನಿಗದಿಪಡಿಸಲಾಗಿದೆ, ಖಾಸಗಿ ಸ್ಟುಡಿಯೋಗಳಿಗಿಂತ ಹೆಚ್ಚಿನ ಬಾಡಿಗೆಯನ್ನು ಕಂಠೀರವ ಸ್ಟುಡಿಯೋದಲ್ಲಿ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಬಾಡಿಗೆಯನ್ನು ಕಡಿಮೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

(ಇ) ಚಲನಚಿತ್ರಗಳ ಚಿತ್ರೀಕರಣಕ್ಕೆ ಸಿಂಗಲ್‌ವಿಂಡೋ ವ್ಯವಸ್ಥೆ ಮೂಲಕ ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗುವುದೇ ?



## ಗ್ರಾಮ ಪಂಚಾಯಿತಿಗಳು.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೦ (೧೬೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ: ಎಷ್ಟು ;

(ಆ) ಹೊಸದಾಗಿ ರಚನೆ ಮಾಡುತ್ತಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು ;

(ಇ) ಈಗಿರುವ ಗ್ರಾಮ ಪಂಚಾಯಿತಿಗಳಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಉನ್ನತ ದರ್ಜೆಗೆ ಏರಿಸಲಾಗುತ್ತಿದೆ ಹಾಗೂ ಆ ಪಂಚಾಯಿತಿಗಳಾವುವು ; (ಜಿಲ್ಲಾವಾರು ವಿವರ ನೀಡುವುದು) ;

(ಈ) ಉನ್ನತೀಕರಿಸಿದ ಪಟ್ಟಣ ಪಂಚಾಯಿತಿಗಳು ಯಾವಾಗಿನಿಂದ ಜಾರಿಗೆ ಬರುತ್ತವೆ ?

## ಪ್ರವಾಸೋದ್ಯಮ ಅಭಿವೃದ್ಧಿ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೧ (೧೧೭) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೊರರಾಜ್ಯಗಳಿಂದ ಬರುವ ಪ್ರವಾಸಿ ಬಸ್‌ಗಳು, ವಿವಿಧ ಬಗೆಯ ಟೆಂಪೋಗಳು, ಟ್ಯಾಕ್ಸಿಗಳಿಗೆ ವಿಧಿಸುತ್ತಿರುವ ಶುಲ್ಕವನ್ನು ಕಡಿಮೆ

ಮಾಡಲು ಪ್ರವಾಸಿ ಹೊಟೇಲ್‌ಗಳ ಮೇಲೆ ವಿಧಿಸುತ್ತಿರುವ ವಿಲಾಸ ತೆರಿಗೆಯಲ್ಲಿ ಕಡಿತ ಪ್ರವಾಸೋದ್ಯಮ ಕೇಂದ್ರಗಳಲ್ಲಿ ಹೊಟೇಲ್‌ಗಳನ್ನು ಆರಂಭಿಸಲು ಸಬ್ಸಿಡಿ, ಸಹಾಯ ಧನದಲ್ಲಿ ಹೆಚ್ಚಳ, ಸ್ಥಳಾವಕಾಶ ಒದಗಿಸುವಿಕೆ, ಮೊದಲಾದ ಪ್ರವಾಸೋದ್ಯಮ ಉತ್ತೇಜನಕಾರಿ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದೇ;

(ಆ) ಪ್ರವಾಸಿ ಕೇಂದ್ರಗಳಿಗೆ ಸುಲಭವಾಗಿ ಹೋಗಿ ಬರುವಂತೆ ಬೆಂಗಳೂರು ಮತ್ತು ಜಿಲ್ಲಾ ಕೇಂದ್ರಗಳಿಂದ ಸಾರಿಗೆ ಸಂಸ್ಥೆ ಬಸ್ ಸೌಲಭ್ಯ ಕಲ್ಪಿಸುವುದು, ಸೂಕ್ತವಾದ ಸರ್ವಋತು ರಸ್ತೆಗಳ ನಿರ್ಮಾಣ, ಪ್ರವಾಸಿಗಳಿಗೆ ಅನುಕೂಲ ಕಲ್ಪಿಸಲು ಮೂಲ ಸೌಲಭ್ಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಪ್ರವಾಸೋದ್ಯಮ ಇಲಾಖೆ, ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಕಂದಾಯ ಇಲಾಖೆ, ಪರಿಸರ ಇಲಾಖೆ, ಪ್ರಾಚ್ಯವಸ್ತು ಇಲಾಖೆಗಳ ಉನ್ನತಾಧಿಕಾರಿಗಳಿಂದ ಕೂಡಿದ ಸಮನ್ವಯ ಸಮಿತಿಯನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ಬೆಂಗಳೂರು–ಮೈಸೂರು ಜೋಡಿ ರೈಲು ಮಾರ್ಗ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೨ (೧೧೮) ಮಾನ್ಯ ಮೂಲಭೂತ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು–ಮೈಸೂರು ಜೋಡಿ ರೈಲು ಮಾರ್ಗದ ಕಾಮಗಾರಿ ಯಾವಾಗ ಮುಕ್ತಾಯವಾಗಬಹುದು; ಬಾಕಿ ಉಳಿದಿರುವ ಕಾಮಗಾರಿಗಳು ಯಾವುವು; ಈ ಕಾಮಗಾರಿಗಳು ವಿಳಂಬವಾಗಲು ಕಾರಣಗಳೇನು;



(ಆ) ಈ ಮಾರ್ಗದ ವಿದ್ಯುದೀಕರಣಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆಯೇ; (ವಿವರ ಒದಗಿಸುವುದು)

(ಇ) ಮೈಸೂರು–ಚಾಮರಾಜನಗರ ರೈಲು ಮಾರ್ಗವನ್ನು ಜೋಡಿ ರೈಲು ಮಾರ್ಗವನ್ನಾಗಿ ಪರಿವರ್ತಿಸುವ ಬಗ್ಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೇ;

(ಈ) ಕೆಂಗೇರಿ–ಕನಕಪುರ–ಕೊಳ್ಳೇಗಾಲ ಚಾಮರಾಜನಗರ ರೈಲು ಮಾರ್ಗದ ಕಾಮಗಾರಿಯನ್ನು ಯಾವಾಗ ಆರಂಭಿಸಲಾಗುವುದು? (ವಿವರ ಒದಗಿಸುವುದು) ?

## ವಿಕಲಚೇತನರಿಗೆ ಸರ್ಕಾರಿ ಉದ್ಯೋಗದ ನೇಮಕಾತಿಯಲ್ಲಿ ಮೀಸಲಾತಿ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):–**

೪೪೩ (೧೬೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಒಟ್ಟು ವಿಕಲಚೇತನರ ಸಂಖ್ಯೆ ಎಷ್ಟು, ಇದರಲ್ಲಿ ಭಾಗಶ: ಹಾಗೂ ಸಂಪೂರ್ಣವಾಗಿ ಮತ್ತೊಬ್ಬರ ಮೇಲೆ ಅವಲಂಬಿಸಿರುವ ವಿಕಲಚೇತನರ ಸಂಖ್ಯೆ ಎಷ್ಟು ;

(ಆ) ವಿಕಲಚೇತನರಿಗೆ ಸರ್ಕಾರಿ ಇಲಾಖೆಯಲ್ಲಿ ನೇರ ನೇಮಕಾತಿ ಸಂದರ್ಭದಲ್ಲಿ ಮೀಸಲಾತಿ ಅನ್ವಯ ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಲಾಗಿದೆ ;

(ಇ) ಮೀಸಲಾತಿಯಡಿಯಲ್ಲಿ ನೇಮಕಾತಿ ಮಾಡಿಕೊಳ್ಳದೆ ಉಳಿದಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು ;

(ಈ) ಅಲ್ಪಸಂಖ್ಯಾತರಿಗೆ ತಂದಿರುವ ಶಾದಿಭಾಗ್ಯ ಯೋಜನೆಯನ್ನು ಸರ್ಕಾರ ವಿಕಲಚೇತನರಿಗೂ ಜಾರಿಗೊಳಿಸಬಾರದೇಕೆ ?

## ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೈಕ್ಷಣಿಕ ಗುಣಮಟ್ಟ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):–**

೪೪೪ (೧೬೪) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆ ಭರ್ತಿಯಾಗದೆ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿರುವುದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಪದವಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಿಂದುಳಿದ ವರ್ಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯ ತೆರೆಯುವ ಬಗ್ಗೆ ಸರ್ಕಾರ ಏನು ಚಿಂತನೆ ನಡೆಸಿದೆ ;

(ಇ) ಅಧ್ಯಾಪಕರಿಗೆ ೨೦೦೬ರ ಯು.ಜಿ.ಸಿ ವೇತನ ಬಾಕಿ ನೀಡಿಲ್ಲವೇಕೆ ?

## ಸರ್ವಶಿಕ್ಷಣ ಅಭಿಯಾನದಡಿ ಬಿಡುಗಡೆಯಾಗಿರುವ ಹಣ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):–**

೪೪೫ (೧೬೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ವ ಶಿಕ್ಷಣ ಅಭಿಯಾನದಡಿ ಇದುವರೆಗೂ ರಾಜ್ಯದಲ್ಲಿ ಖರ್ಚು ಮಾಡಿರುವ ಹಣ ಎಷ್ಟು ಅದರಲ್ಲಿ ಕೇಂದ್ರ ಸರ್ಕಾರದ ಅನುದಾನವೆಷ್ಟು ; ರಾಜ್ಯದ ಅನುದಾನವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;



(ಆ) ಸರ್ವ ಶಿಕ್ಷಣ ಅಭಿಯಾನದಡಿ ಶಿಕ್ಷಣಕ್ಕೆ ಬಿಡುಗಡೆಯಾದ ಹಣದಲ್ಲಿ ಎಷ್ಟು ಹಣ ವಿದ್ಯಾರ್ಥಿಗಳ ಅಭಿವೃದ್ಧಿಗೆ ಖರ್ಚಾಗಿದೆ ; ಶಿಕ್ಷಕರ ಕೌಶಲ್ಯ ತರಬೇತಿಗೆ ಎಷ್ಟು ವಿನಿಯೋಗವಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಇ) ಇದರಲ್ಲಿ ಇದುವರೆಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ, ಅದರಲ್ಲಿ ಎಷ್ಟು ಖರ್ಚು ಮಾಡಲಾಗಿದೆ (ತಾಲ್ಲೂಕುವಾರು ವಿವರ ಒದಗಿಸುವುದು) ?

## ಮಂಜೂರಾದ ಮತ್ತು ರದ್ದುಗೊಂಡ ಮನೆಗಳು.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):–**

೪೪೬ (೧೬೫) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ೨೦೧೦–೧೧ ರಿಂದ ೨೦೧೪–೧೫ನೇ ಸಾಲಿನವರೆಗೆ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಹಾಗೂ ಯೋಜನೆಗಳವಾರು ವಿವರ ನೀಡುವುದು) ;

(ಆ) ಸದರಿ ಮಂಜೂರಾದ ಮನೆಗಳ ಪೈಕಿ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ;

(ಇ) ಹಂಚಿಕೆ ಮಾಡಲಾಗದೇ ರದ್ದುಗೊಳಿಸಿರುವ ಮನೆಗಳ ಸಂಖ್ಯೆ ಎಷ್ಟು ; ರದ್ದುಗೊಳ್ಳಲು ಕಾರಣವೇನು ;

(ಈ) ಮಂಜೂರಾದ ಮನೆಗಳಲ್ಲಿ ಎಷ್ಟು ಮನೆಗಳು ಪೂರ್ಣಗೊಂಡಿವೆ ; (ವಿವರ ತಿಳಿಸುವುದು) ಮತ್ತು ಪೂರ್ಣಗೊಳ್ಳದ ಮನೆಗಳ ಸಂಖ್ಯೆ ಎಷ್ಟು, ಪೂರ್ಣಗೊಳ್ಳದೆ ಇರುವುದಕ್ಕೆ ಕಾರಣಗಳೇನು ?

## ವಿವಿಧ ವಸತಿ ಯೋಜನೆ.

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೪೭ (೫೮೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಯಡಿ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ;

(ಆ) ಇದಕ್ಕಾಗಿ ವೆಚ್ಚ ಮಾಡಲಾದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಣದ ಮೊತ್ತವೆಷ್ಟು ;

(ಇ) ಈ ಅವಧಿಯಲ್ಲಿ ಪ್ರತಿವರ್ಷ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿತ್ತು ; ಈ ಗುರಿಯನ್ನು ಸಾಧಿಸಲಾಗಿದೆಯೇ ; ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ; ಪ್ರಸಕ್ತ ಸಾಲಿನಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿದೆ ; ಇದಕ್ಕಾಗಿ ಇಲ್ಲಿಯವರೆಗೆ ವೆಚ್ಚ ಮಾಡಿರುವ ಹಣವೆಷ್ಟು ?

## ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಗಳು.

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೪೪೮ (೫೮೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯಾದಂದಿನಿಂದ ಇಲ್ಲಿಯವರೆಗೆ ಯೋಜನೆ ಹಾಗೂ ಯೋಜನೇತರ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿದ ಹಣವೆಷ್ಟು ; (ಕಾರ್ಯಕ್ರಮಗಳವಾರು ವಿವರ ಒದಗಿಸುವುದು) ;



(ಆ) ಗಡಿ ಅಭಿವೃದ್ಧಿ ಪ್ರಾಧಿಕಾರ ಇದುವರೆಗೆ ಸಾಧಿಸಿದ ಪ್ರಗತಿ ಏನು ;

(ಇ) ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುವ ಯೋಜನೆಗಳಾವುವು ; ಅವುಗಳ ರೂಪುರೇಷೆಗಳೇನು ; (ಯೋಜನೆವಾರು ವಿವರ ಒದಗಿಸುವುದು) ?

## ಐ.ಐ.ಟಿ. ಸ್ಥಾಪನೆ.

**ಶ್ರೀ ಎನ್. ಎಸ್. ಬೋಸ್‌ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು):–**

೪೪೯ (೫೮೩) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಐ.ಐ.ಟಿ. ಪ್ರಾರಂಭಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆಯೇ ;

(ಆ) ಹಾಗಿದ್ದರೆ, ರಾಜ್ಯದ ಯಾವ ಸ್ಥಳದಲ್ಲಿ ಐ.ಐ.ಟಿ. ಪ್ರಾರಂಭಿಸಲಾಗುವುದು ;

(ಇ) ಈ ಹಿಂದಿನ ಸರ್ಕಾರ ೨೦೧೨–೧೩ರಲ್ಲಿ ಗುಲಬರ್ಗಾದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಡಾ: ಡಿ.ಎಂ. ನಂಜುಂಡಪ್ಪ ವರದಿಯ ಆಧಾರದ ಮೇಲೆ ರಾಯಚೂರು ಜಿಲ್ಲೆಯಲ್ಲಿ ಐ.ಐ.ಟಿ. ಪ್ರಾರಂಭಿಸಲು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಈ) ಹಾಗಿದ್ದರೆ, ರಾಜ್ಯ ಸರ್ಕಾರವು ರಾಯಚೂರಿನಲ್ಲಿ ಐ.ಐ.ಟಿ ಪ್ರಾರಂಭಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವುದೆ ;

(ಉ) ರಾಯಚೂರಿನಲ್ಲಿ ಐ.ಐ.ಟಿ ಪ್ರಾರಂಭಿಸಲು ನಿಯೋಗವನ್ನು ಕೇಂದ್ರಕ್ಕೆ ಒಯ್ಯಲಾಗುವುದೆ ; ಯಾವಾಗ (ವಿವರ ನೀಡುವುದು) ?

## ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):–**

೪೫೦ (೫೮೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು ;

(ಆ) ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು ;

(ಇ) ಪ್ರತಿ ಗ್ರಾಮ ಪಂಚಾಯತಿಗೊಬ್ಬರು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅವಶ್ಯಕತೆ ಇದೆಯೇ ;

(ಈ) ಹಾಗಿದ್ದಲ್ಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ ಕಡಿಮೆ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಡಿಮೆ ಇದ್ದಲ್ಲಿ ಅದನ್ನು ಯಾವಾಗ ಸರಿಪಡಿಸಲಾಗುವುದು ?

## ಪಂಚಾಯತ್ ಸದಸ್ಯರುಗಳಿಗೆ ಗೌರವ ಧನ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):–**

೪೫೧ (೫೮೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಸದಸ್ಯರಿಗೆ ಗೌರವ ಧನ ಕೊಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಸದಸ್ಯರಿಗೆ



(ಪ್ರತ್ಯೇಕ ಪಂಚಾಯತ್‌ವಾರು) ಕೊಡತಕ್ಕಂತಹ ಗೌರವ ಧನದ ಮೊತ್ತವೆಷ್ಟು ;

(ಆ) ಕಳೆದ ಐದು ವರ್ಷಗಳಿಂದ ರಾಜ್ಯದಲ್ಲಿನ ಈ ಮೂರು ಹಂತದ ಸ್ಥಳೀಯ ಸಂಸ್ಥೆಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಒಟ್ಟು ಗೌರವ ಧನದ ಮೊತ್ತವೆಷ್ಟು ;

(ಇ) ಬಿಡುಗಡೆಯಾಗದಿದ್ದಲ್ಲಿ, ಅದಕ್ಕೆ ಕಾರಣವೇನು ?

## ಘಟಪ್ರಭಾ ನದಿಯಿಂದ ಕುಡಿಯುವ ನೀರು ಪೂರೈಕೆ.

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೨ (೬೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ನಗರದಲ್ಲಿನ ನಾಗರಿಕರು ಕುಡಿಯುವ ನೀರಿನ ಕೊರತೆಯಿಂದಾಗಿ ತೊಂದರೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ನಗರಕ್ಕೆ ಕುಡಿಯುವ ನೀರಿನ ಹೆಚ್ಚಿನ ಸರಬರಾಜು ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ;

(ಇ) ಘಟಪ್ರಭಾ ನದಿಯಿಂದ ಇನ್ನೊಂದು ಕೊಳವೆಯನ್ನು ಅಳವಡಿಸುವ ಮೂಲಕ ಕುಡಿಯುವ ನೀರಿನ ಕೊರತೆಯನ್ನು ನಿವಾರಿಸಲಾಗುವುದೇ ?

## ಪ್ರವಾಸೋದ್ಯಮದ ಅಭಿವೃದ್ಧಿ.

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೩ (೫೮೭) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ಜಿಲ್ಲೆಯ ಪ್ರೇಕ್ಷಣೀಯ ಪ್ರವಾಸಿ ಸ್ಥಳಗಳನ್ನು ಹೊಂದಿದ್ದು, ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ನಗರದಲ್ಲಿ ಎಲ್ಲಾ ಪ್ರವಾಸಿ ಸೌಲಭ್ಯಗಳನ್ನು ಹೊಂದಿದ ಪ್ರವಾಸಿ ಕೇಂದ್ರವನ್ನು ನಿರ್ಮಿಸಲಾಗುವುದೇ ;

(ಇ) ಶಿಗ್ಗಾಂವ "ಉತ್ಸವ ರಾಕ್ ಗಾರ್ಡನ್ " ಮಾದರಿಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣರವರ ಸಂಪೂರ್ಣ ಇತಿಹಾಸ ಪ್ರತಿಬಿಂಬಿಸುವ ಮಾದರಿಗಳನ್ನು ಕಿತ್ತೂರು ಕೋಟೆ ಆವರಣದೊಳಗೆ ಸ್ಥಾಪಿಸುವ ಮೂಲಕ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದೆ ?

## ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವುದು.

**ಡಾ: ಮತ್ತಿಕಟ್ಟಿ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೪ (೫೮೬) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಳಗಾವಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಮೂಲಕ ಹೆಚ್ಚಿನ ವೈಮಾನಿಕ ಸೇವೆಗಳನ್ನು ಒದಗಿಸಲು ಸರ್ಕಾರ ಕ್ರಮಗಳನ್ನು ಕೈಗೊಳ್ಳುವುದೇ ;



(ಆ) ಬೆಳಗಾವಿ ವಿಮಾನ ನಿಲ್ದಾಣದಿಂದ ಸುವರ್ಣಸೌಧಕ್ಕೆ ನೇರ ರಸ್ತೆ ಸಂಪರ್ಕ ಕಲ್ಪಿಸಲಾಗುವುದೇ ; ಹಾಗಿದ್ದಲ್ಲಿ, ಯಾವಾಗ ?

## ಗ್ರಾಮ ಪಂಚಾಯಿತಿಗಳ ಪರಿವರ್ತನೆ.

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೫೫ (೫೯೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿನ ವಿವಿಧ ಗ್ರಾಮಗಳಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಗ್ರಾಮ ಪಂಚಾಯಿತಿಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಇತ್ತೀಚೆಗೆ ಸಮಿತಿಯು ಸರ್ಕಾರಕ್ಕೆ ಸಲ್ಲಿಸಲಾದ ವರದಿಯಲ್ಲಿ ಪ್ರಸ್ತಾಪಗೊಂಡಿರುವ ಗ್ರಾಮಗಳ ವಿವರಗಳನ್ನು ನೀಡುವುದು ;

(ಇ) ಹೊಸದಾಗಿ ಗ್ರಾಮ ಪಂಚಾಯಿತಿಗಳಾಗಿ ಪ್ರಸ್ತಾಪಿಸಲಾಗಿರುವ ಗ್ರಾಮಗಳ ಜನಸಂಖ್ಯೆ, ಮನೆಗಳ ಸಂಖ್ಯೆ, ಕುಟುಂಬಗಳ ಸಂಖ್ಯೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗಗಳ ಜನಸಂಖ್ಯೆಗಳ ಸಂಪೂರ್ಣ ಮಾಹಿತಿ ನೀಡುವುದು;

(ಈ) ಹೊಸದಾಗಿ ಪರಿವರ್ತನೆಗೊಳ್ಳಲಿರುವ ಗ್ರಾಮ ಪಂಚಾಯಿತಿಗಳಿಗೆ ಒದಗಿಸಲುದ್ದೇಶಿಸಿರುವ ಮೂಲಭೂತ ಸೌಲಭ್ಯಗಳು, ನಿಗದಿಪಡಿಸಲಾಗಿರುವ ಅನುದಾನ ಹಾಗೂ ಅಗತ್ಯ ಸಿಬ್ಬಂದಿಗಳ ವೃಂದವಾರು ಮಾಹಿತಿಯುನ್ನು ನೀಡಲಾಗಿವುದೇ (ವಿವರಗಳೊಂದಿಗೆ) ?

## ಚಲ್ಲೇಶ್ವರ ದೇವಾಲಯ ಮತ್ತು ಕಲ್ಯಾಣಿಯ ಅಭಿವೃದ್ಧಿ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೫೬ (೫೯೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಆತಕೂರು ಗ್ರಾಮವು ಇತಿಹಾಸ ಪ್ರಸಿದ್ದ ಗ್ರಾಮವಾಗಿದ್ದು, ಇಲ್ಲಿರುವ ಪ್ರಾಚೀನ ಚಲ್ಲೇಶ್ವರ ದೇವಾಲಯವನ್ನು ಅಭಿವೃದ್ಧಿಪಡಿಸಿ, ದೇವಾಲಯದ ಮುಂದಿರುವ ಕಲ್ಯಾಣಿಯನ್ನು ಜೀರ್ಣೋದ್ಧಾರ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ;

(ಆ) ಈ ದೇವಾಲಯದ ಬಳಿ ಇದ್ದ ಇತಿಹಾಸ ಪ್ರಸಿದ್ಧ ಗಂಗರು/ ರಾಷ್ಟ್ರಕೂಟರು/ಚೋಳರು/ಸಗರ ವಂಶದವರಿಗೆ ಕ್ರಿ.ಶ.೮೦೦ರ ಮೂಲ ಶಿಲಾಶಾಸನವು, ಬೆಂಗಳೂರಿನ ಮ್ಯೂಸಿಯಂನಲ್ಲಿದ್ದು; ಇದರ ಒಂದು ಪ್ರತಿಕೃತಿಯನ್ನು ತಯಾರಿಸಿ ಅದನ್ನು ಆತಕೂರಿನಲ್ಲಿ ದೇವಾಲಯದ ಮುಂದೆ ಸ್ಥಾಪಿಸಲು ಕ್ರಮ ತೆಗೆದುಕೊಳ್ಳಲಾಗುವುದೇ;

(ಇ) ಇದೇ ತಾಲ್ಲೂಕಿನ ಅರೆ ತಿಪ್ಪೂರು ಗ್ರಾಮದ ದೊಡ್ಡ ಬೆಟ್ಟದ ಮೇಲೆ ಇರುವ ಗೊಮ್ಮಟೇಶ್ವರನ ಮೂರ್ತಿಯ ಸುತ್ತ ಹಾಗೂ ಚಿಕ್ಕಬೆಟ್ಟದಲ್ಲಿ ಬಿದ್ದುಹೋಗಿರುವ ಪ್ರಾಚೀನ ಬಸದಿಯ ಸುತ್ತ ಮುತ್ತ ಅಭಿವೃದ್ಧಿ ಕಾರ್ಯ ಕೈಗೊಂಡು ಸಂರಕ್ಷಣೆ ಮಾಡಲು ಹಾಗೂ ಗೊಮ್ಮಟೇಶ್ವರನ ಮೂರ್ತಿ ಇರುವ ದೊಡ್ಡ ಬೆಟ್ಟಕ್ಕೆ ಹೋಗಲು ಇರುವ ಕಚ್ಚಾ ರಸ್ತೆಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಲಾಗುವುದೇ;



(ಈ) ತಾಲ್ಲೂಕಿನ ಅರುವನಹಳ್ಳಿಯಲ್ಲಿ ಹತ್ತಾರು ಪ್ರಾಚೀನ ಶಾಸನಗಳು, ಅತ್ಯಂತ ವಿಶಿಷ್ಟವಾದ ವೀರಗಲ್ಲು, ಮಾಸ್ತಿಗಲ್ಲುಗಳಿದ್ದು, ಇವುಗಳನ್ನು ಸಂರಕ್ಷಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

## ಉತ್ತರ ಕರ್ನಾಟಕದಲ್ಲಿ ಕುಡಿಯುವ ನೀರಿಗೆ ಹಾಹಾಕಾರ.

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ) :–**

೪೫೭ (೫೯೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಉತ್ತರ ಕರ್ನಾಟಕ ಮತ್ತು ಹೈದರಾಬಾದ್–ಕರ್ನಾಟಕ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಮತ್ತು ಶೌಚಾಲಯ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪರಿಹಾರ ಕೈಕೊಂಡಿರುವ ಕ್ರಮಗಳೇನು (ಜಿಲ್ಲಾವಾರು ವಿವರ ನೀಡುವುದು) ;

(ಇ) ಈ ಜಿಲ್ಲೆಗಳ ಎಷ್ಟು ಗ್ರಾಮೀಣ ಪ್ರದೇಶಗಳಲ್ಲಿ "ಶುದ್ಧ ನೀರು ಘಟಕ" ಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಲಾಗಿದೆ (ಜಿಲ್ಲಾವಾರು ಪ್ರಗತಿಯ ವಿವರಗಳನ್ನು ನೀಡುವುದು) ?

## ಕಲಾವಿದರಿಗೆ ಮಾಸಾಶನ.

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ) :–**

೪೫೮ (೫೯೪) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಚಲನಚಿತ್ರ, ಕಿರುತೆರೆ, ರಂಗಭೂಮಿ ಕ್ಷೇತ್ರಗಳಲ್ಲಿನ ಎಷ್ಟು ಕಲಾವಿದರಿಗೆ/ತಾಂತ್ರಿಕ ವರ್ಗದವರಿಗೆ ಮಾಸಾಶನ ನೀಡಲಾಗುತ್ತಿದೆ ; (ಜಿಲ್ಲಾವಾರು ವಿವರಗಳನ್ನು ನೀಡುವುದು) ;

(ಆ) ಮಾಸಾಶನ ಮಂಜೂರಾತಿಗೆ ನಿಗದಿಪಡಿಸಿರುವ ಮಾನದಂಡಗಳೇನು ;

(ಇ) ಮಾಸಾಶನ ಮಂಜೂರಾತಿಗಾಗಿ ಬಾಕಿ ಇರುವ ಅರ್ಜಿಗಳು ಎಷ್ಟು ?

## ಬಿಸಿ ಊಟ ಅಡುಗೆ ಸಹಾಯಕರ ವೇತನ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೫೯ (೫೯೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿಸಿ ಊಟ ಅಡುಗೆ ಸಹಾಯಕರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು) ;

(ಆ) ಬಿಸಿ ಊಟ ಅಡುಗೆ ಸಹಾಯಕರಿಗೆ ನಿಗದಿಪಡಿಸಿದ ವೇತನ ಎಷ್ಟು; ಈಗ ಕೊಡುತ್ತಿರುವ ವೇತನ ತೀರಾ ಕನಿಷ್ಟ ಎನಿಸುವುದಿಲ್ಲವೇ;

(ಇ) ಹಾಗಿದ್ದರೆ, ವೇತನವನ್ನು ಹೆಚ್ಚಿಗೆ ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ; ಇದ್ದರೆ ಯಾವಗ ಕ್ರಮ ಕೈಗೊಳ್ಳಲಾಗುವುದು ?



## ರೈಲ್ವೆ ಮಾರ್ಗ ನಿರ್ಮಾಣ.

**ಶ್ರೀ ಜಿ.ಎಸ್. ನ್ಯಾಮಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೬೦ (೫೯೬) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಾಗಲಕೋಟೆ–ಕುಡಚಿ ರೈಲ್ವೆ ಮಾರ್ಗ ನಿರ್ಮಾಣಕ್ಕೆ ವಶಪಡಿಸಿಕೊಳ್ಳಬೇಕಾದ ಭೂಮಿ ಎಷ್ಟು ಮತ್ತು ಯಾವ ಯಾವ ತಾಲ್ಲೂಕಿನ ಎಷ್ಟೆಷ್ಟು ಭೂಮಿಯನ್ನು ವಶಪಡಿಸಿಕೊಳ್ಳಬೇಕಾಗುತ್ತದೆ ; ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ವಿವರಣೆ ನೀಡುವುದು ;

(ಆ) ಈ ರೈಲ್ವೆ ಮಾರ್ಗ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಭರಿಸಬೇಕಾದ ತನ್ನ ಪಾಲಿನ ಒಟ್ಟು ಹಣ ಎಷ್ಟು ; ಅದರಲ್ಲಿ ಈಗಾಗಲೇ ಎಷ್ಟು ಹಣ ಭರಿಸಿದೆ (ಪ್ರಗತಿಯ ಹಂತಗಳ ವಿವರಣೆ ನೀಡುವುದು) ?

## ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ಮಾನ.

**ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೬೧ (೬೧೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ಮಾನ ದೊರಕಿದ ನಂತರ ನಿಯುಕ್ತಿಗೊಂಡಿರುವ ಯೋಜನೆ ನಿರ್ದೇಶಕರು ಯಾರು ; ಯಾವಾಗ ನೇಮಕಗೊಂಡರು ;

(ಆ) ಶಾಸ್ತ್ರೀಯ ಸ್ಥಾನಮಾನ ಅಭಿವೃದ್ಧಿಗಾಗಿ ಯೋಜನಾ ಕೇಂದ್ರಕ್ಕೆ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ; ಬಿಡುಗಡೆ ಮಾಡಿದ

ಹಣದಲ್ಲಿ ಕೈಗೊಂಡ ಯೋಜನೆಗಳೇನು ; ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ?

## ರಾಷ್ಟ್ರೀಯ ಗ್ರಾಮೀಣ ಜೀವನ ನಿರ್ವಹಣೆ .

**ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೪೬೨ (೫೯೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಷ್ಟ್ರೀಯ ಗ್ರಾಮೀಣ ಜೀವನ ನಿರ್ವಹಣೆ (NRLM) ಯಡಿ ಯಾವ ರೀತಿ ಹಣವನ್ನು ವಿನಿಯೋಗಿಸಲಾಗುತ್ತಿದೆ ಮತ್ತು ಇದರ ಉಪಯೋಗವನ್ನು ಯಾರು ಯಾರು ಪಡೆದುಕೊಳ್ಳಬಹುದು; ಅರ್ಹತೆ ಹಾಗೂ ಮಾನದಂಡವೇನು;

(ಆ) ಈ ಯೋಜನೆಯಡಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಾರ್ಷಿಕ ದೊರೆಯುತ್ತಿರುವ ಅನುದಾನವೆಷ್ಟು;

(ಇ) ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಈ ಯೋಜನೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ?

## ಬಸವ ವಸತಿ ಯೋಜನೆ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೩ (೬೦೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಸವ ವಸತಿ ಯೋಜನೆಯಡಿ ಮನೆಯನ್ನು ನಿರ್ಮಿಸಿಕೊಳ್ಳಲು ಸರ್ಕಾರ ನೀಡುವ ಹಣವೆಷ್ಟು ;



(ಆ) ಸರ್ಕಾರ ನೀಡುವ ಗರಿಷ್ಠ ಮೊತ್ತವನ್ನು ಫಲಾನುಭವಿ ಪಡೆಯುವ ವಿಧಾನವೇನು ;

(ಇ) ಪ್ರಸಕ್ತ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ ( ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಈ) ಈ ಯೋಜನೆಯಡಿ ಯಾವ ಯಾವ ತಾಲ್ಲೂಕುಗಳಿಗೆ ಮನೆಗಳು ಮಂಜೂರಾಗಿಲ್ಲ; ಕಾರಣವೇನು; ಯಾವಾಗ ಮಂಜೂರು ಮಾಡಲಾಗುತ್ತದೆ ;

(ಉ) ೨೦೧೪–೧೫ನೇ ಸಾಲಿನಲ್ಲಿ ಯಾವ ಯಾವ ಯೋಜನೆಯಡಿ ಮನೆಗಳನ್ನು ಹಂಚಿಕೆ ಮಾಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ?

## ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕಟ್ಟಡ ಕಾಮಗಾರಿ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೪ (೫೯೯) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕಟ್ಟಡ ಕಾಮಗಾರಿ ಪ್ರಕ್ರಿಯೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; ಇದರ ಅಂದಾಜು ವೆಚ್ಚ ಎಷ್ಟು ;

(ಆ) ಈ ವಿಶ್ವವಿದ್ಯಾಲಯದ ಕಟ್ಟಡ ಯಾವ ಸ್ಥಳದಲ್ಲಿ ನಿರ್ಮಾಣಗೊಳ್ಳುತ್ತಿದೆ ; ಕಟ್ಟಡ ಕಾಮಗಾರಿ ಯಾವಾಗ ಪ್ರಾರಂಭವಾಗಿದೆ; ಯಾವಾಗ ಮುಕ್ತಾಯಗೊಳ್ಳಲಿದೆ (ಸದ್ಯ ಪ್ರಗತಿಯಲ್ಲಿರುವ ಭಾವಚಿತ್ರವನ್ನು ನೀಡುವುದು) ?

## ಅಂಗನವಾಡಿ ಕೇಂದ್ರಗಳಿಗೆ ಆಹಾರಧಾನ್ಯ ಪೂರೈಕೆ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೬೫ (೬೦೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯ ಅಂಗನವಾಡಿ ಕೇಂದ್ರಗಳಿಗೆ ಯಾವ ಯಾವ ಆಹಾರ ಪೂರೈಸಲಾಗುತ್ತಿದೆ ;

(ಆ) ಪ್ರತಿ ತಾಲ್ಲೂಕಿಗೆ ಯಾವ ಯಾವ ಆಹಾರಧಾನ್ಯ ಎಷ್ಟು ಪ್ರಮಾಣದಲ್ಲಿ ಪೂರೈಸಲಾಗುತ್ತಿದೆ ;

(ಇ) ಆಹಾರ ಧಾನ್ಯವನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆಯೇ ಅಥವಾ ಖಾಸಗಿ ಸಂಸ್ಥೆಗಳ ಮೂಲಕ ಪೂರೈಸಲಾಗುತ್ತಿದೆಯೇ ;

(ಈ) ಖಾಸಗಿ ಸಂಸ್ಥೆ ಆಗಿದ್ದಲ್ಲಿ ಅದು ಯಾವುದು; ಅದು ಕಳೆದ ಎಷ್ಟು ವರ್ಷಗಳಿಂದ ಪೂರೈಸುತ್ತಿದೆ ?

## ಉದ್ಯೋಗ ಖಾತ್ರಿ ಯೋಜನೆ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೪೬೬ (೬೦೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ವರ್ಷ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಬಳ್ಳಾರಿ ಜಿಲ್ಲೆಗೆ ಮಂಜೂರಾದ ಮತ್ತು ಬಿಡುಗಡೆಯಾದ ಹಣದ ಮೊತ್ತವೆಷ್ಟು (ತಾಲ್ಲೂಕುವಾರು ಮತ್ತು ಪಂಚಾಯುತ್‌ವಾರು ವಿವರ ನೀಡುವುದು) ;



(ಆ) ಈ ಯೋಜನೆಯಡಿ ಬಿಡುಗಡೆಯಾದ ಹಣವನ್ನು ಸಮರ್ಪಕವಾಗಿ ಖರ್ಚು ಮಾಡಲಾಗಿದೆಯೇ (ವಿವರ ಒದಗಿಸುವುದು) ;

(ಇ) ಹಣ ಮಂಜೂರಾಗಿ, ಬಿಡುಗಡೆಯಾಗದಿರಲು ಕಾರಣಗಳೇನು; ಇದಕ್ಕೆ ಹೊಣೆಗಾರರು ಯಾರು?

## M.G.N.R.I.G.A. (ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ) ಯೋಜನೆಯಡಿ ಕಾಮಗಾರಿ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೪೬೭ (೬೦೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ನೇ ಸಾಲಿನಲ್ಲಿ ಬರಪೀಡಿತ ತಾಲ್ಲೂಕುಗಳಿಗೆ M.G.N.R.I.G.A (ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ) ಯೋಜನೆಯಡಿ ಉದ್ಯೋಗದ ದಿನಗಳನ್ನು ೧೦೦ ರಿಂದ ೧೫೦ ದಿನಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆಯೇ ; ಹಾಗಿದ್ದರೆ, ಎಷ್ಟು ಕುಟುಂಬಗಳಿಗೆ ಅನುಕೂಲವಾಗಿದೆ ಜಿಲ್ಲಾವಾರು ವಿವರ ನೀಡುವುದು ;

(ಆ) ಎಲ್ಲಾ ಜಿಲ್ಲೆಗಳಲ್ಲೂ ದಿನಾಂಕ: ೨೮.೦೨.೨೦೧೪ ರಂದು M.G.N.R.I.G.A (ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ) ಯೋಜನೆಯಡಿ ಕೈಗೊಳ್ಳುವ ಕಾಮಗಾರಿಯ ಎನ್‌ಎಂಆರ್‌ಗಳನ್ನು ತೆಗೆಯದಂತೆ ಲಾಕ್ ಮಾಡಲಾಗಿದ್ದು, ಇಲ್ಲಿಯವರೆಗೂ ಲಾಕ್ ತೆರವುಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಎಲ್ಲಾ ಜಿಲ್ಲೆಗಳಲ್ಲೂ ಅಂದಾಜು ಪಟ್ಟಿಗೆ ಈಗ ಅನುಮೋದನೆ ನೀಡುತ್ತಿದ್ದು, ದಿ: ೨೮.೦೨.೨೦೧೫ಕ್ಕೆ N.M.R.ಲಾಕ್ ಆಗುತ್ತಿದ್ದು ಉಳಿದ ೨ ತಿಂಗಳಲ್ಲಿ M.G.N.R.I.G.A ಯೋಜನೆಯಡಿ ವರ್ಷದ ಎಲ್ಲಾ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆಯೇ ; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ (ಮಾಹಿತಿ ನೀಡುವುದು) ;

(ಈ) End to End ತತ್ರಾಂಶದಲ್ಲಿ ಎಲ್ಲಾ ಉದ್ಯೋಗ ಚೀಟಿಗಳು ಮತ್ತು ಬಾಕಿ ಕಾಮಗಾರಿಗಳು ಅಪ್‌ಲೋಡ್ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಏನು ಕ್ರಮಕೈಗೊಳ್ಳಲಾಗಿದೆ ;

(ಉ) M.G.N.R.I.G.A(ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ) ಯೋಜನೆಯು ರೈತರಿಗೆ ಅತಿ ಉತ್ತಮ ಯೋಜನೆಯಾಗಿದ್ದು, ಇದು ಜನಸ್ನೇಹಿ/ರೈತಸ್ನೇಹಿ ಯೋಜನೆಯಾಗಿರದೆ ಬರೀ ಡಾಟಾ ಎಂಟ್ರಿ, ಅಂದಾಜು ಪಟ್ಟಿ ಅನುಮೋದನೆಯಾಗಿ ಕಡತಗಳಲ್ಲೇ ಉಳಿದಿರುವುದನ್ನು ಸರ್ಕಾರ ಗಮನಿಸಿದೆಯೇ, ಹಾಗಿದ್ದರೆ ಏನು ಕ್ರಮ ಕೈಗೊಳ್ಳಲಾಗಿದೆ ?

## ಬಿ.ಆರ್.ಸಿ./ಸಿ.ಆರ್.ಸಿ. ನೇಮಕಾತಿ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೪೬೮ (೭೧೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೧–೧೨ನೇ ಸಾಲಿನಲ್ಲಿ ಎನ್.ಆರ್.ಡಿ.ಡಬ್ಲ್ಯೂ.ಪಿ. ಯೋಜನೆಯಡಿ ಬಿ.ಆರ್.ಸಿ/ಸಿ.ಆರ್.ಸಿ.ಗಳನ್ನು ಇಲಾಖಾ ಪರೀಕ್ಷೆ ನಡೆಸಿ ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;



(ಆ) ಸದರಿಯವರ ಸೇವೆಯನ್ನು ಎನ್.ಆರ್.ಡಿ.ಡಬ್ಲ್ಯೂ.ಪಿ. ಯೋಜನೆ ಇರುವವರೆಗೂ ಮುಂದುವರೆಸಬೇಕೆಂದು ಮಾನ್ಯ ಉಚ್ಚನ್ಯಾಯಾಲಯದ ಆದೇಶ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗಿದೆ ;

(ಇ) ಮೆ, ೨೦೧೨ ಕ್ಕೆ ಬಿ.ಆರ್.ಸಿ/ಸಿ.ಆರ್.ಸಿ.ಗಳ ಸೇವೆಯನ್ನು ಮುಕ್ತಾಯಗೊಳಿಸಿ ಇವರ ಸೇವೆಯನ್ನು ಎನ್.ಜಿ.ಓ.ಗಳಿಂದ ಪಡೆದುಕೊಳ್ಳಲು ಆದೇಶಿಸಿದ್ದು, ಇಲ್ಲಿಯವರೆಗೂ ಯಾವ ಎನ್.ಜಿ.ಓ/ಸಂಸ್ಥೆಗಳು ಯಾವ ಯಾವ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ, ಅವುಗಳಿಗೆ ಎಷ್ಟು ಹಣ ನೀಡಲಾಗಿದೆ (ವರ್ಷವಾರು ಮತ್ತು ಜಿಲ್ಲಾವಾರು ವಿವರ ನೀಡುವುದು) ;

(ಈ) ಸರ್ಕಾರವು ದಿನಾಂಕ: ೧೫.೦೮.೨೦೧೪ ರಂದು ಹೊಸದಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯನ್ನು ಸೃಜನೆ ಮಾಡಿದ್ದು, ಇದರ ವೃಂದ ನಿಯಮಗಳಲ್ಲಿ ಬಿ.ಆರ್.ಸಿ/ ಸಿ.ಆರ್.ಸಿ. ಗಳನ್ನು ಸೇರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಇವರಿಗೆ ಯಾವ ರೀತಿ ನ್ಯಾಯ ಒದಗಿಸಲಾಗುವುದು ;

(ಉ) ೨೦೧೨ ರಿಂದ ಬಿ.ಆರ್.ಸಿ/ಸಿ.ಆರ್.ಸಿ. ವೇತನ ಎಂದು ಇಲ್ಲಿಯವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; ಅದನ್ನು ಯಾವ ಕೆಲಸಕ್ಕೆ ಉಪಯೋಗಿಸಲಾಗಿದೆ (ವರ್ಷವಾರು, ಜಿಲ್ಲಾಪಂಚಾಯ್ತಿವಾರು ವಿವರ ನೀಡುವುದು) ;

(ಊ) ಲೇಸಿನ್ ಪ್ರತಿಷ್ಠಾನ ಎಂಬ ಸಂಸ್ಥೆ ಯಾವ ಯಾವ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಪರೀಕ್ಷೆ ಕೈಗೊಂಡಿದೆ, ಅಲ್ಲಿ ಕೆಲಸ ನಿರ್ವಹಿಸಿದ ಸಿಬ್ಬಂದಿವರ್ಗ ಯಾರು, ಇಲ್ಲಿಯವರೆಗೂ ಸರ್ಕಾರದಿಂದ ಎಷ್ಟು ಹಣ ಪಡೆದಿದೆ ; ಎಷ್ಟು ಬಾಕಿ ಇದೆ (ವಿವರ ನೀಡುವುದು) ?

## ನೌಕರರ ನೇಮಕಾತಿ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೪೬೯ (೬೦೫) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವನ್ನು (ಕೆ.ಎಸ್.ಟಿ.ಡಿ.ಸಿ)ಯಾವಾಗ ಸ್ಥಾಪಿಸಲಾಯಿತು, ಇದರ ಧ್ಯೇಯೋದ್ದೇಶಗಳೇನು, ಇದರ ಕೇಂದ್ರ ಕಚೇರಿ ಮತ್ತು ವಾಹನ ಕಾರ್ಯಾಗಾರ ಕಚೇರಿ ಎಲ್ಲಿದೆ ;

(ಆ) ನಿಗಮದ ವೃಂದ ಮತ್ತು ನೇಮಕಾತಿ ನಿಯಮಗಳು (ಸಿ ಮತ್ತು ಆರ್) ಮತ್ತು ಇತರ ತಿದ್ದುಪಡಿಗಳು ಒಳಗೊಂಡಂತೆ ವಿವರ ನೀಡುವುದು, ೨೦೦೪ ರಿಂದ ಇಲ್ಲಿಯವರೆಗೆ ನಿಗಮದಿಂದ ಎಷ್ಟು ಜನ ನೌಕರರು ನಿವೃತ್ತರಾಗಿರುತ್ತಾರೆ ; (ವಿವರ ನೀಡುವುದು) ಎಷ್ಟು ಖಾಲಿ ಹುದ್ದೆಗಳಿವೆ, ಅನುಕಂಪದ ಆಧಾರದ ಮೇಲೆ ಕೆಲಸ ಕೋರಿ ಬಾಕಿ ಇರುವ ಅರ್ಜಿಗಳೆಷ್ಟು (ವಿವರ ನೀಡುವುದು) ;



## ನಿರುದ್ಯೋಗಿಗಳಿಗೆ ಪ್ರವಾಸಿ ಟ್ಯಾಕ್ಸಿ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೪೭೦ (೬೦೪) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರವಾಸೋದ್ಯಮ ಇಲಾಖೆಯಿಂದ ನಿರುದ್ಯೋಗಿಗಳಿಗೆ ಪ್ರವಾಸಿ ಟ್ಯಾಕ್ಸಿ ಕೊಳ್ಳಲು ೨,೦೦,೦೦೦ ಲಕ್ಷ ರೂ.ಗಳ ಸಹಾಯಧನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಜೊತೆಗೆ ಹಿಂದುಳಿದ ಅಭ್ಯರ್ಥಿಗಳಿಗೆ ನೀಡುತ್ತಿರುವುದು ತುಂಬಾ ಉತ್ತಮ ಯೋಜನೆಯಾಗಿದ್ದು, ೨೦೧೩–೧೪ ಮತ್ತು ೨೦೧೪–೧೫ನೇ ಸಾಲುಗಳಲ್ಲಿ ಎಷ್ಟು ಅಭ್ಯರ್ಥಿಗಳಿಗೆ ಸಹಾಯಧನ ಮಂಜೂರು ಮಾಡಿ ವಿತರಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಆ) ಪ್ರವಾಸೋದ್ಯಮ ಮೂಲ ಸೌಕರ್ಯ ಅಭಿವೃದ್ಧಿ ಅನುದಾನದಲ್ಲಿ ೨೦೧೩–೧೪ ಮತ್ತು ೨೦೧೪–೧೫ನೇ ಸಾಲುಗಳ ಯಾವ ಯಾವ ಪ್ರವಾಸಿ ಸ್ಥಳಗಳ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

(ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಸ್ಥಾಪನೆಯಾದಾಗಿನಿಂದ ಇಲ್ಲಿಯವರೆಗೆ ನಿಗಮದ ಹೋಟೆಲ್, ಚಿರಾಸ್ತಿ, ಇತರೆ ಸ್ವತ್ತುಗಳನ್ನು ಯಾವ ವರ್ಷದಂದು ಯಾರಿಗೆ ಅಥವಾ ಯಾವ ಸಂಸ್ಥೆಗೆ ಭೋಗ್ಯ, ಬಾಡಿಗೆ, ಕ್ರಯಕ್ಕೆ ನೀಡಲಾಗಿದೆ (ವಿವರ ನೀಡುವುದು ಹಾಗೂ ಪ್ರವಾಸೋದ್ಯಮ ನೀತಿಯ ಮಾಹಿತಿ ಒದಗಿಸುವುದು) ?

## ೧೯೭೧ರಲ್ಲಿ ನೇಮಕವಾದ ಅನುದಾನಿತ ಕಾಲೇಜು ಉಪನ್ಯಾಸಕರು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ):–**

೪೭೧ (೬೯೮) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾಲೇಜು ಶಿಕ್ಷಣ ಇಲಾಖೆಯು ೧೯೬೪ರ ಜುಲೈ ೩೦ರ ನಿಯಮಗಳ ಪ್ರಕಾರ ಉಪನ್ಯಾಸಕರ ಹುದ್ದೆಗೆ ನಿಗದಿಪಡಿಸಿದ್ದ ವಿದ್ಯಾರ್ಹತೆಗಳೇನು (ವಿವರ ನೀಡುವುದು) (Mysore Education Department Service Rule 30 July 1964) ;

(ಆ) ದಿನಾಂಕ:೧೩.೦೧.೧೯೭೧ಕ್ಕೂ ಮೊದಲು ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಗೆ ಬರುವ ಖಾಸಗಿ ಅನುದಾನಿತ ಕಾಲೇಜುಗಳು ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಎಷ್ಟು ಉಪನ್ಯಾಸಕರನ್ನು ಯಾವ ವಿದ್ಯಾರ್ಹತೆಗೆ ಅನುಸಾರವಾಗಿ ನೇಮಕಾತಿ ಮಾಡಲಾಗಿತ್ತು; ಸರ್ಕಾರದಲ್ಲಿ ಅಂತಹ ಉಪನ್ಯಾಸಕರ ನೇಮಕಾತಿ ಹಾಗೂ ಬಡ್ತಿಗೆ ಯಾವ ರೀತಿ ಪರಿಗಣಿಸಲಾಗಿತ್ತು; ಎಷ್ಟು ಜನ ನಿವೃತ್ತಿ ಹೊಂದಿದ್ದಾರೆ (ವಿವರ ನೀಡುವುದು) ;

(ಇ) ದಿನಾಂಕ:೧೩.೦೧.೧೯೭೧ರ ನಂತರ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಬರುವ ಖಾಸಗಿ ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಎಷ್ಟು ಉಪನ್ಯಾಸಕರುಗಳು ಪಾಸ್ ಕ್ಲಾಸ್ ಸ್ನಾತಕೋತ್ತರ ಪದವಿ ಪಡೆದು ಉಪನ್ಯಾಸಕರಾಗಿ ನೇಮಕಗೊಂಡಿದ್ದರು (ವಿವರ ನೀಡುವುದು) ;

(ಈ) ಸರ್ಕಾರದಲ್ಲಿ ಅಂತಹ ಉಪನ್ಯಾಸಕರುಗಳ ಹುದ್ದೆಯನ್ನು ಯಾವ ರೀತಿ ಯಾವಾಗ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ (ವಿವರ ನೀಡುವುದು) ?



## ಅಂಗನವಾಡಿ ಕೇಂದ್ರಗಳು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೨ (೭೦೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲಾ ವ್ಯಾಪ್ತಿಯ ಯಾವ ಯಾವ ಗ್ರಾಮದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ ; ಅವುಗಳಲ್ಲಿ ಸ್ವಂತ ಕಟ್ಟಡದ ಹಾಗೂ ಬಾಡಿಗೆ ಕಟ್ಟಡ ಹೊಂದಿರುವ ಕೇಂದ್ರಗಳು ಯಾವುವು ; ಅವುಗಳ ತಿಂಗಳ ಬಾಡಿಗೆ ಎಷ್ಟು (ಗ್ರಾಮಗಳವಾರು, ಕೇಂದ್ರಗಳವಾರು, ವಿಧಾನಸಭಾ ಮತ ಕ್ಷೇತ್ರವಾರು ಮಾಹಿತಿ ನೀಡುವುದು) ;

(ಆ) ಇತ್ತೀಚೆಗೆ ಅಂಗನವಾಡಿ ಕೇಂದ್ರಗಳಿಗೆ ಕಳಪೆ ಮಟ್ಟದ ಆಹಾರ ಪೂರೈಕೆಯಾಗುತ್ತಿರುವುದು ಹಾಗೂ ಕಟ್ಟಡಗಳು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಗ್ರಾಮದಲ್ಲಿನ ಯಾವ ಕೇಂದ್ರದ ಕಟ್ಟಡ ಶಿಥಿಲಗೊಂಡಿದೆ ; ಶಿಥಿಲಗೊಂಡಿರುವ ಕೇಂದ್ರಗಳ ಸುಧಾರಣೆಗೆ ಕೈಗೊಂಡಿರುವ ಕ್ರಮಗಳೇನು ; ಕೈಗೊಳ್ಳದೇ ಇದ್ದಲ್ಲಿ, ಯಾವಾಗ ಕೈಗೊಳ್ಳಲಾಗುವುದು ; ಏನಾದರೂ ಅನಾಹುತವಾದಲ್ಲಿ ಅದಕ್ಕೆ ಜವಾಬ್ದಾರರು ಯಾರು ;

(ಇ) ೨೦೧೨–೧೩, ೨೦೧೩–೧೪ರ ಅವಧಿಯಲ್ಲಿ ಈ ಕೇಂದ್ರಗಳ ದುರಸ್ತಿಗೆಂದು ಬಿಡುಗಡೆಗೊಂಡಿರುವ ಅನುದಾನ ಎಷ್ಟು; ದುರಸ್ತಿಗೊಳಪಟ್ಟಿರುವ ಕೇಂದ್ರಗಳು ಯಾವುವು; ಯಾವ ಕೇಂದ್ರಕ್ಕೆ

ಯಾವ ಕಾಮಗಾರಿಗೆ ಎಷ್ಟು ಮೊತ್ತವನ್ನು ವ್ಯಯಿಸಲಾಗಿದೆ. ಅದು ತೃಪ್ತಿಕರವಾಗಿದೆಯೇ; ಮತ್ತು ಯಾವ ಕೇಂದ್ರಕ್ಕೆ ಒದಗಿಸಿರುವುದಿಲ್ಲ; ಒದಗಿಸದೇ ಇರುವುದಕ್ಕೆ ಕಾರಣಗಳೇನು (ಗ್ರಾಮಗಳವಾರು, ಕೇಂದ್ರವಾರು, ವಿಧಾನಸಭಾ ಮತಕ್ಷೇತ್ರವಾರು ವಾಹಿತಿ ನೀಡುವುದು) ;

(ಈ) ರಾಜ್ಯದಲ್ಲಿ ಅಂಗನವಾಡಿ ಕೇಂದ್ರಗಳ ಕಟ್ಟಡ ದುರಸ್ತಿಗಾಗಿ ಮತ್ತು ಹೊಸದಾಗಿ ನಿರ್ಮಿಸುವ ಯೋಜನೆಯು ಸರ್ಕಾರದ ಮುಂದಿದೆಯೇ; ಇದ್ದಲ್ಲಿ. ೨೦೧೪–೧೫ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಯಾವ ಯಾವ ಕೇಂದ್ರಗಳನ್ನು ಅಳವಡಿಸಲಾಗಿದೆ; ಯಾವ ಕೇಂದ್ರಕ್ಕೆ ಯಾವ ಕಾಮಗಾರಿಯನ್ನು ಶಿಫಾರಸ್ಸು ಮಾಡಿದೆ; ಅಂದಾಜು ಮೊತ್ತವೆಷ್ಟು (ಗ್ರಾಮಗಳವಾರು, ಕೇಂದ್ರವಾರು, ವಿಧಾನಸಭಾ ಮತಕ್ಷೇತ್ರವಾರು ಮಾಹಿತಿ ಒದಗಿಸುವುದು) ?

## ನಿರ್ಮಿತಿ ಕೇಂದ್ರಗಳು

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೩ (೬೦೯) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ;

(ಅ) ಹಾವೇರಿ ಜಿಲ್ಲೆಯಲ್ಲಿ ನಿರ್ಮಿತಿ ಕೇಂದ್ರದಿಂದ ನಿರ್ಮಾಣಗೊಂಡ ಅನೇಕ ಕಾಮಗಾರಿಗಳು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಯಾವ ಕಾವಗಾರಿಗಳು ಕಳಪೆಯಾಗಿವೆ (ತಾಲ್ಲೂಕುವಾರು ವಿವರ ಒದಗಿಸುವುದು) ;

(ಆ) ಸಂಬಂಧಪಟ್ಟವರ ಮೇಲೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ ;



(ಇ) ಇಂತಹ ಕಾಮಗಾರಿ ನಿರ್ವಹಿಸಿದ ನಿರ್ಮಿತಿ ಕೇಂದ್ರಕ್ಕೆ ಇನ್ನು ಮುಂದೆ ಕಾಮಗಾರಿಗಳನ್ನು ಕೊಡಬಾರದೆಂದು ಸರ್ಕಾರ ಗಮನಹರಿಸಿದೆಯೇ ?

## ವಸತಿ ರಹಿತರು ಮತ್ತು ನಿವೇಶನ ರಹಿತರು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೪ (೬೧೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಸತಿ ಇಲಾಖೆಯಲ್ಲಿ ರಾಜ್ಯದ ಒಟ್ಟು ಜನ ಸಂಖ್ಯೆಯಲ್ಲಿ ವಸತಿ ರಹಿತ ಹಾಗೂ ನಿವೇಶನ ರಹಿತರ ಪಟ್ಟಿ ಮಾಡಲಾಗಿದೆಯೇ ;

(ಆ) ಮಾಡಿದ್ದಲ್ಲಿ, ವಸತಿ ರಹಿತರ/ನಿವೇಶನ ರಹಿತರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಇ) ಈ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದವರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ?

## ಭಾಗ್ಯಲಕ್ಷ್ಮಿ ಯೋಜನೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೫ (೬೧೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಿಂದಿನ ಸರ್ಕಾರ ಜಾರಿಗೊಳಿಸಿದ್ದ ಭಾಗ್ಯಲಕ್ಷ್ಮಿ ಯೋಜನೆ ಜಾರಿಯಲ್ಲಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಯಲ್ಲಿ ಎಷ್ಟು ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಸೌಲಭ್ಯ ನೀಡಲಾಗಿದೆ ;

(ಇ) ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಫಲಾನುಭವಿಗಳಿಗೆ ಸೌಲಭ್ಯ ನೀಡಲಾಗಿದೆ ?

## ಕುಡಿಯುವ ನೀರಿಗಾಗಿ ಕೊರೆದ ಕೊಳವೆ ಬಾವಿಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೬ (೬೧೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ಜಿಲ್ಲೆಯಲ್ಲಿ ೨೦೧೪–೧೫ನೇ ಸಾಲಿನಲ್ಲಿ ಇದುವರೆಗೆ ಕುಡಿಯುವ ನೀರಿಗಾಗಿ ಕೊರೆದ ಕೊಳವೆ ಬಾವಿಗಳೆಷ್ಟು ;

(ಆ) ಎಷ್ಟು ಬಾವಿಗಳಲ್ಲಿ ನೀರು ಸಿಕ್ಕಿರುವುದಿಲ್ಲ ;

(ಇ) ಕೊಳವೆ ಬಾವಿಗಳಲ್ಲಿ ವಿಷಪೂರಿತ ನೀರು ಉಳ್ಳ ಬಾವಿಗಳೆಷ್ಟು, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

## ಸಿ.ಎಲ್–೨ ಪರವಾನಗಿ ವಿತರಣೆ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೭ (೬೧೨) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಅಬಕಾರಿ ಇಲಾಖೆಯಲ್ಲಿ ನೀಡಲಾಗಿರುವ ಸಿ.ಎಲ್–೨ ಒಟ್ಟು ಪರವಾನಗಿ ಎಷ್ಟು ;

(ಆ) ಈ ಸಿ.ಎಲ್–೨ ಪರವಾನಗಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ನೀಡಲಾಗಿರುವ ಸಂಖ್ಯೆ ಎಷ್ಟು ;



(ಇ) ಈ ಹಿಂದೆ ಅಬಕಾರಿ ಸಚಿವರು ಸಿ.ಎಲ್–೨ ಪರವಾನಗಿ ನೀಡುವಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ಮೀಸಲಾತಿ ನೀಡಲು ಸದನದಲ್ಲಿ ಒಪ್ಪಿಗೆ ನೀಡಿರುವರೆ ;

(ಈ) ಈ ನಿಟ್ಟಿನಲ್ಲಿ, ಇದುವರೆಗೂ ಸರ್ಕಾರ ಕೈಗೊಂಡ ಕ್ರಮ ಏನು ?

## ಶಿಕ್ಷಕರ ನೇಮಕಾತಿಯಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಕಡ್ಡಾಯ

**ಶ್ರೀ ಅಮರನಾಥ ಪಾಟೀಲ (ಪದವೀಧರರ ಕ್ಷೇತ್ರ) :–**

೪೭೮ (೬೧೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆಗಿಂತ ಪೂರ್ವದಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿ.ಇ.ಟಿ) ಕಡ್ಡಾಯವಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಆದೇಶ ಜಾರಿಗೊಳಿಸಿರುವುದು ಯಾವಾಗ (ಮಾಹಿತಿ ನೀಡುವುದು) ;

(ಆ) ಶಿಕ್ಷಕರ ಅರ್ಹತಾ ಪರೀಕ್ಷೆ ನಡೆಸಿರುವುದು ಯಾವಾಗ ಹಾಗೂ ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ ಎಷ್ಟು; ಪತ್ರಿಕೆ–೧ ಮತ್ತು ಪತ್ರಿಕೆ–೨ರ ಮಾಹಿತಿ ಜಿಲ್ಲಾವಾರು ನೀಡುವುದು ;

(ಇ) ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ) ನಡೆಸುವುದು ಯಾವಾಗ, ಹಾಗೂ ಅದಕ್ಕೆ ನಿಗಧಿಪಡಿಸಿರುವ ಪಠ್ಯಕ್ರಮವೇನು ;

(ಈ) ರಾಜ್ಯದಲ್ಲಿ ಶಿಕ್ಷಕರ ನೇಮಕಾತಿಗಾಗಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ವಯೋಮಿತಿ ಮೀರುತ್ತಿರುವುದು ಸರ್ಕಾರದ

ಗಮನಕ್ಕೆ ಇದೆಯೇ, ಇದ್ದರೆ, ಸರ್ಕಾರವು ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ) ನಡೆಸಲು ವಿಳಂಬ ಮಾಡಲು ಕಾರಣವೇನು ;

(ಉ) ಶಿಕ್ಷಕರಾಗಿ ನೇಮಕಾತಿಗೊಳ್ಳಬೇಕಾದರೆ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಇಂಗ್ಲೀಷ್ ಹಾಗೂ ಕಂಪ್ಯೂಟರ್ ವಿಷಯಗಳನ್ನು ಕಡ್ಡಾಯವಾಗಿ ಉತ್ತೀರ್ಣರಾಗಬೇಕು ಎಂದು ನಿಯಮಗಳಲ್ಲಿ ತಿದ್ದುಪಡಿ ಮಾಡಲಾಗುತ್ತಿರುವುದು ನಿಜವೇ; ಹಾಗಿದ್ದರೆ, ಯಾವ ಕಾಲಮಿತಿಯೊಳಗೆ ತಿದ್ದುಪಡಿ ಮಾಡಲಾಗುವುದು?

## ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ವಿಷಯ ಬೋಧನೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೪೭೯ (೬೧೫) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಹಿಳಾ ಅಧ್ಯಯನ ವಿಷಯವನ್ನು ಬೋಧಿಸುತ್ತಿರುವ ವಿಶ್ವವಿದ್ಯಾಲಯಗಳು ಯಾವುವು (ವಿಶ್ವವಿದ್ಯಾಲಯಗಳವಾರು ಮಾಹಿತಿ ನೀಡುವುದು) ;

(ಆ) ಮಹಿಳಾ ಅಧ್ಯಯನ ಸ್ನಾತಕೋತ್ತರ ಪೂರ್ಣಗೊಳಿಸಿದ ಪದವೀಧರರಿಗೆ ಇರುವಂತಹ ಅವಕಾಶಗಳು ಯಾವುವು, ಸರ್ಕಾರಿ ಇಲಾಖಾವಾರು, ಹುದ್ದೆವಾರು ಮಾಹಿತಿ ನೀಡುವುದು ;

(ಇ) ಮಹಿಳಾ ಅಧ್ಯಯನ ಪೂರ್ಣಗೊಳಿಸಿದ ಪದವೀಧರರಿಗೆ ಹಲವಾರು ಸರ್ಕಾರಿ/ಅರೆ ಸರ್ಕಾರಿ ಹುದ್ದೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ನಿಟ್ಟಿನಲ್ಲಿ ನ್ಯೂನ್ಯತೆಯನ್ನು ಸರಿಪಡಿಸಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ



ತಂದು ಈ ಪದವೀಧರರಿಗೆ ನ್ಯಾಯ ಒದಗಿಸುವಲ್ಲಿ ಸರ್ಕಾರವು ಕ್ರಮವಹಿಸುವುದೇ (ವಿವರ ನೀಡುವುದು) ;

(ಈ) ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ಕೇಂದ್ರಕ್ಕೆ ನೇಮಕಾತಿಯಲ್ಲಿ ಆದ ನಿಯಮ ಉಲ್ಲಂಘನೆಗಳು ಹಾಗೂ ಹಗರಣಗಳಿಂದ ಮಹಿಳಾ ಅಧ್ಯಯನ ಪದವೀಧರರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದರೆ, ವಿಶ್ವವಿದ್ಯಾಲಯಗಳವಾರು ಮಾಹಿತಿಗಳನ್ನು ನೀಡಿ, ಇದನ್ನು ಸರಿಪಡಿಸಿ ಮಹಿಳಾ ಅಧ್ಯಯನ ಪದವೀಧರರಿಗೆ ನ್ಯಾಯಯುತವಾಗಿ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು ?

## ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹಾಗೂ ಬೋಧಕೇತರರು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೪೮೦ (೬೧೪) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ಒಟ್ಟು ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು, ವಿಶ್ವವಿದ್ಯಾಲಯದಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಎಷ್ಟು (ವಿವರ ನೀಡುವುದು) ;

(ಆ) ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ೨೦೧೨–೧೩ ರಿಂದ ೨೦೧೪–೧೫ನೇ ಸಾಲಿನವರೆಗೆ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿ ಮಾಡಿಕೊಳ್ಳಲಾಗಿದೆಯೇ, ಹಾಗಿದ್ದಲ್ಲಿ, ಹೈ.ಕ.ಪ್ರದೇಶಕ್ಕೆ

೩೭೧ (ಜೆ) ಕಲಂ ರನ್ವಯ ಮೀಸಲಾತಿ ಕಲ್ಪಿಸಿ ನೇಮಕಾತಿ ಮಾಡಲಾಗಿದೆಯೇ; ಮಾಡಿದ್ದರೆ, ರಾಜ್ಯ ವೃಂದ ಮತ್ತು ಹೈ.ಕ. ಪ್ರದೇಶದ ೩೭೧(ಜೆ) ಪ್ರಕಾರ ಮೀಸಲಾತಿಯ ಪ್ರತ್ಯೇಕ ಪಟ್ಟಿಯ ವಿವರ ನೀಡುವುದು ;

(ಇ) ರಾಜ್ಯದ ಹಲವು ವಿಶ್ವವಿದ್ಯಾಲಯಗಳು ೩೭೧(ಜೆ) ಮೀಸಲಾತಿ ಕಲ್ಲಿಸದೆ, ಕಾನೂನು ಬಾಹಿರವಾಗಿ ನೇಮಕಾತಿ ಪ್ರಕ್ರಿಯೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದರೆ, ವಿವರ ನೀಡುವುದು ;

(ಈ) ಈ ಕಾನೂನು ಬಾಹಿರ ನೇಮಕಾತಿಗಳನ್ನು ತಡೆಹಿಡಿದು, ಹೈ.ಕ.ಪ್ರದೇಶಕ್ಕೆ ನೀಡಿದ ಮೀಸಲಾತಿ ಒದಗಿಸಲು ಸರ್ಕಾರದ ಮುಂದಿರುವ ಕ್ರಮಗಳೇನು (ವಿವರ ನೀಡುವುದು) ?

## ವಿಶ್ವವಿದ್ಯಾಲಯಗಳಲ್ಲಿ ನಡೆದಿರುವ ಭ್ರಷ್ಟಾಚಾರ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೪೮೧ (೬೧೬) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವ ವಿಶ್ವವಿದ್ಯಾಲಯಗಳು ಯಾವುವು, ಅವು ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿವೆ (ವಿವರ ನೀಡುವುದು) ;

(ಆ) ಹಲವು ವಿಶ್ವವಿದ್ಯಾಲಯಗಳಲ್ಲಿ ಕಾನೂನು ಉಲ್ಲಂಘನೆ ಪ್ರಕರಣಗಳು, ಭ್ರಷ್ಟಾಚಾರಗಳು ಮತ್ತು ಸ್ವಜನಪಕ್ಷಪಾತ ಪ್ರಕರಣಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಯಾವ ಯಾವ ಪ್ರಕರಣಗಳು ಮತ್ತು ಭಾಗಿಯಾದ ಅಧಿಕಾರಿಗಳ ಹುದ್ದೆವಾರು, ವಿಶ್ವವಿದ್ಯಾಲಯವಾರು ವಿವರ ನೀಡುವುದು ;



(ಇ) ಇಂತಹ ಪ್ರಕರಣಗಳ ಕುರಿತು ಮತ್ತು ಭಾಗಿಯಾದ ಅಧಿಕಾರಿಗಳ ಮೇಲೆ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು) ;

(ಈ) ಇಂತಹ ಪ್ರಕರಣಗಳಿಂದ ಉನ್ನತ ವ್ಯಾಸಂಗ ನೀಡುವ ಸಂಸ್ಥೆಗಳ ಘನತೆಗೆ ಧಕ್ಕೆಯಾಗಿದ್ದು, ಈ ಸಂಸ್ಥೆಗಳ ಗುಣಮಟ್ಟ ಕಾಪಾಡುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳೇನು ?

## ಪತಿ–ಪತ್ನಿ ಪ್ರಕರಣ ಅಡಿಯಲ್ಲಿ ವರ್ಗಾವಣೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೪೮೨ (೬೨೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಪತಿ–ಪತ್ನಿ ಪ್ರಕರಣ ಮತ್ತು ವೈದ್ಯಕೀಯ ಅನಾರೋಗ್ಯ ಪ್ರಕರಣಗಳ ಅಡಿಯಲ್ಲಿ ಮತ್ತು ಸಾಮಾನ್ಯ ವರ್ಗದಲ್ಲಿ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ವಿಭಾಗಗಳ ಶಿಕ್ಷಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

(ಆ) ಕಳೆದ ಮೂರು ವರ್ಷಗಳಲ್ಲಿ ಪತಿ–ಪತ್ನಿ, ವೈದ್ಯಕೀಯ ಮತ್ತು ಸಾಮಾನ್ಯ ವರ್ಗ ಪ್ರಕರಣಗಳ ಅಡಿಯಲ್ಲಿ ವರ್ಗಾವಣೆ ಹೊಂದಿದ ಶಿಕ್ಷಕರ ಸಂಖ್ಯೆ ಎಷ್ಟು ; ಈ ಮೂರು ವಿಭಾಗಗಳ ಜಿಲ್ಲಾವಾರು ವಿವರ ನೀಡುವುದು ;

(ಇ) ಸದರಿ ವರ್ಗಾವಣೆಗೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಪ್ರಮುಖ ಅಂಶಗಳೇನು?

(ಈ) ಮೇಲ್ಕಂಡ ವರ್ಗಾವಣೆ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರದ ಯೋಜನೆಗಳೇನು ?

## ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೪೮೩ (೬೨೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯಾದ್ಯಂತ ಗ್ರಾಮೀಣಾಭಿವೃದ್ಧಿ ಇಲಾಖೆಯ ಅಡಿಯಲ್ಲಿ ಎಷ್ಟು ಶುದ್ಧ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ (ಜಿಲ್ಲಾವಾರು, ತಾಲ್ಲೂಕುವಾರು ಗ್ರಾಮಗಳ ಹೆಸರನ್ನು ನೀಡುವುದು) ;

(ಆ) ಈ ಯೋಜನೆಗೆ ಕಳೆದ ಎರಡು ವರ್ಷಗಳಲ್ಲಿ ಖರ್ಚು ಮಾಡಿರುವ ಮೊತ್ತದ ವಿವರ ನೀಡುವುದು (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) ;

(ಇ) ರಾಜ್ಯದಲ್ಲಿ ಯಾವ ಯಾವ ಗ್ರಾಮಗಳಿಗೆ ಸಂಚಾರಿ ವಾಹನಗಳ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ; ಈ ಯೋಜನೆಯಲ್ಲಿ ಉಪಯೋಗಿಸಲಾಗುತ್ತಿರುವ ವಿವಿಧ ಟ್ರಕ್, ಟ್ರಾಕ್ಟರ್, ಟ್ಯಾಂಕರ್‌ಗಳ ವಿವರ ನೀಡುವುದು ; (ಇಲಾಖೆ ಮತ್ತು ಗುತ್ತಿಗೆ ವಾಹನಗಳ ಪ್ರತ್ಯೇಕ ವಿವರ ನೀಡುವುದು), ಇದಕ್ಕಾಗಿ ಕಳೆದ ಎರಡು ವರ್ಷಗಳಲ್ಲಿ ಖರ್ಚಾದ ಮೊತ್ತವೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ?



## ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬೋಧನಾ ಅವಧಿ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೪೮೪ (೬೧೮) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬೋಧಕ ವರ್ಗದವರಿಗೆ ಹಾಲಿ ಇರುವ ೧೬ ಗಂಟೆಗಳ ಬೋಧನಾ ಅವಧಿಗೆ ಬದಲಾಗಿ ೨೨ ಗಂಟೆಗಳ ಬೋಧನಾ ಅವಧಿಯನ್ನು ಎಂದಿನಿಂದ ಜಾರಿಗೊಳಿಸಲಾಗಿದೆ, ಈ ಆದೇಶಕ್ಕೆ ಕಾರಣವೇನು ;

(ಆ) ಮೇಲ್ಕಂಡ ಯೋಜನೆ ಜಾರಿಗೊಳಿಸಿದಲ್ಲಿ, ಹಾಲಿ ಸೇವೆ ಸಲ್ಲಿಸುತ್ತಿರುವ ಎಷ್ಟು ಜನ ಅತಿಥಿ ಉಪನ್ಯಾಸಕರಿಗೆ ಬೋಧನಾ ಅವಧಿಯ ಕೊರತೆಯಿಂದಾಗಿ ಸೇವೆಯಿಂದ ಮುಕ್ತಗೊಳಿಸಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ (ಜಿಲ್ಲಾವಾರು ವಿವರ ನೀಡುವುದು) ;

(ಇ) ಉನ್ನತ ಶಿಕ್ಷಣ ಇಲಾಖೆಯಲ್ಲಿ ಒಟ್ಟು ಎಷ್ಟು ಬೋಧಕರ ಹುದ್ದೆಗಳು ಖಾಲಿ ಇವೆ ; (ವಿಷಯವಾರು ವಿವರ ನೀಡುವುದು) ಇವುಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಅತಿಥಿ ಉಪನ್ಯಾಸಕರುಗಳಿಗೆ ಹಾಲಿ ನೀಡಲಾಗುತ್ತಿರುವ ಗೌರವ ಸಂಭಾವನೆ ಎಷ್ಟು ; ಇದನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಅಬಕಾರಿ ಪರವಾನಗಿಗಳು ಮತ್ತು ಮಾರಾಟದ ಅನುಪಾತ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :–**

೪೮೫ (೬೨೧) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಕಳೆದ ಮೂರು ವರ್ಷಗಳಲ್ಲಿ, ಪ್ರತ್ಯೇಕವಾಗಿ ವಿವಿಧ ನಮೂನೆಯ ಅಬಕಾರಿ ಪರವಾನಗಿಗಳ ಅಡಿಯಲ್ಲಿ ವ್ಯವಹರಿಸುತ್ತಿರುವವರ (ತಾಲ್ಲೂಕುವಾರು) ಸಂಖ್ಯೆ ನೀಡುವುದು ;

(ಆ) ಕಳೆದ ಮೂರು ವರ್ಷಗಳಲ್ಲಿ ಪ್ರತೀ ವರ್ಷವೂ ಮಾರಾಟವಾದ ವಿವಿಧ ಬ್ರಾಂಡ್‌ಗಳ ಮದ್ಯಗಳ ಪರಿಮಾಣ (ಕಿಲೋ ಲೀಟರ್‌ಗಳಲ್ಲಿ) ಎಷ್ಟು; ಪ್ರತಿ ಬ್ರ್ಯಾಂಡ್‌ಗಳ ತಯಾರಕರ ಡಿಸ್ಟಿಲರಿಗಳ ವಿವರಗಳನ್ನು ನೀಡುವುದು ;

(ಇ) ಕಳೆದ ಮೂರು ವರ್ಷಗಳಲ್ಲಿ ರಾಜ್ಯಾದ್ಯಂತ ಮಾರಾಟ ಅನುಪಾತದ ಲೆಕ್ಕದಿಂದ ಮದ್ಯಪಾನಿಗಳ ಅಂದಾಜು ಸಂಖ್ಯೆಯೆಷ್ಟು (ತಾಲ್ಲೂಕುವಾರು ವಿವರ ನೀಡುವುದು) ?

## ಟಿ.ವಿ. ಕೇಬಲ್ ಅಳವಡಿಕೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೪೮೬ (೬೨೪) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಯಾವ ಯಾವ ಗ್ರಾಮ, ಪಟ್ಟಣ, ನಗರಗಳಲ್ಲಿ ಟಿ.ವಿ.ಕೇಬಲ್ ವ್ಯವಸ್ಥೆ ಒದಗಿಸಲಾಗಿದೆ; ಗ್ರಾಮ, ಪಟ್ಟಣ, ನಗರವಾರು ವಿವರ ನೀಡುವುದು ;

(ಆ) ಟಿ.ವಿ. ಕೇಬಲ್ ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;



(ಇ) ಕೇಬಲ್‌ಗಳು ಭೂಮಿ ಒಳಗಡೆ ಹಾಕಬೇಕೋ ಅಥವಾ ಭೂಮಿ ಮೇಲ್ಭಾಗದಲ್ಲಿ ಹಾಕಬೇಕೊ, ಇದಕ್ಕೆ ಇರುವ ನಿಬಂಧನೆಗಳು ಏನು ಮತ್ತು ಯಾವುವು ;

(ಈ) ಈ ಕೇಬಲ್ ಸಂಪರ್ಕಕ್ಕೆ ದರ ನಿಗದಿಯನ್ನು ಮಾಡಲಾಗಿದೆಯೇ ; ಮಾಡಿದ್ದರೆ, ವಿವರ ನೀಡುವುದು ;

(ಉ) ಇದರಿಂದ ಸರ್ಕಾರಕ್ಕೆ ಲಭ್ಯವಾಗುತ್ತಿರುವ ಆದಾಯವೆಷ್ಟು (ವಿವರ ನೀಡುವುದು) ?

## ಸಿಂದೂರ ಲಕ್ಷ್ಮಣನ ಸ್ಮಾರಕ ನಿರ್ಮಾಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೪೮೭ (೬೨೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕಿನಲ್ಲಿ ಸ್ವಾತಂತ್ರ ವೀರ ಸೇನಾನಿ ವೀರ ಸಿಂದೂರ ಲಕ್ಷ್ಮಣನ ಸ್ಮಾರಕವನ್ನು ಸರ್ಕಾರ ನಿರ್ಮಾಣ ಮಾಡುವುದೇ ;

(ಆ) ಹಾಗಿದ್ದಲ್ಲಿ, ಎಷ್ಟು ವೆಚ್ಚದಲ್ಲಿ ಮಾಡಲಾಗುವುದು ಮತ್ತು ಎಷ್ಟು ಕಾಲಮಿತಿಯಲ್ಲಿ ಮಾಡಲಾಗುವುದು ?

## ರಾಷ್ಟ್ರನಾಯಕರ ಜಯಂತಿ ಆಚರಣೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೪೮೮ (೬೨೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರದಿಂದ ಯಾವ ಯಾವ ರಾಷ್ಟ್ರ ನಾಯಕರ ಜಯಂತಿಯನ್ನು ಅಧಿಕೃತವಾಗಿ ಆಚರಣೆ ಮಾಡಲಾಗುತ್ತಿದೆ ಮತ್ತು ವರ್ಷದ ಯಾವ ಯಾವ ದಿನಾಂಕದಂದು ಮಾಡಲಾಗುತ್ತಿದೆ ;

(ಆ) ಯಾವ ಯಾವ ರಾಷ್ಟ್ರ ನಾಯಕರ ಜಯಂತಿಗೆ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಜಯಂತಿ ಆಚರಿಸಲು ತಗಲುವ ಖರ್ಚು ಎಷ್ಟು ;

(ಇ) ಯಾವ ಯಾವ ಮಹಾಪುರುಷರ ಹೆಸರಿನಲ್ಲಿ ಪ್ರಶಸ್ತಿಗಳನ್ನು ಪ್ರತಿ ವರ್ಷ ನೀಡಲಾಗುತ್ತಿದೆ; ಯಾವ ಯಾವ ಮಹಾಪುರುಷರ ಪ್ರಶಸ್ತಿಗೆ ನಿಗದಿ ಮಾಡಿ ನೀಡುತ್ತಿರುವ ಮೊತ್ತವೆಷ್ಟು ; ಈ ಪ್ರಶಸ್ತಿ ಮೊತ್ತ ನೀಡಲು ಇರುವ ಮಾನ ದಂಡಗಳು ಯಾವುವು ?

## ವಾಲ್ಮೀಕಿ ಪುತ್ಥಳಿ ಸ್ಥಾಪನೆ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೪೮೯ (೬೨೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅಧಿಕೃತವಾಗಿ ರಾಜ್ಯ ಸರ್ಕಾರ ಆಚರಣೆ ಮಾಡಲು ಪ್ರಾರಂಭ ಮಾಡಿ ೪ ವರ್ಷಗಳು



ಕಳೆದಿದ್ದರೂ, ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಮಹರ್ಷಿ ವಾಲ್ಮೀಕಿ ಪುತ್ಥಳಿ ಸ್ಥಾಪನೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಹರ್ಷಿ ವಾಲ್ಮೀಕಿ ಜಯಂತಿಯ ಆಚರಣೆ ಸಂದರ್ಭದಲ್ಲಿ ಸರ್ಕಾರ ಮಹರ್ಷಿ ವಾಲ್ಮೀಕಿ ಪುತ್ಥಳಿಗೆ ಬದಲಾಗಿ ಬೇರೊಬ್ಬ ಮಹಾಪುರುಷರ ಪುತ್ಥಳಿಗೆ ಹಾರ ಹಾಕಿ ಮೆರವಣಿಗೆ ಪ್ರಾರಂಭ ಮಾಡುವುದು ಎಷ್ಟು ಸಮಂಜಸ ; ಇದನ್ನು ಸರಿಪಡಿಸಲು ವಾಲ್ಮೀಕಿ ಪುತ್ಥಳಿಯನ್ನು ವಿಧಾನ ಸೌಧ ಸುತ್ತಮುತ್ತಲಿನಲ್ಲಿ ಯಾವಾಗ ಸ್ಥಾಪಿಸಲಾಗುವುದು; ಯಾವ ಕಡೆ ಸ್ಥಾಪಿಸಲಾಗುವುದು ?

## ಪ್ರವಾಸಿ ತಾಣಗಳ ಅಭಿವೃದ್ಧಿ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :–**

೪೯೦ (೬೨೮) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳು ಎಷ್ಟು; ಅವು ಯಾವುವು ; (ವಿವರ ನೀಡುವುದು) ಆ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲು ೨೦೧೧–೨೦೧೨, ೨೦೧೨–೨೦೧೩ ಹಾಗೂ ೨೦೧೩–೨೦೧೪ನೇ ಸಾಲಿನಲ್ಲಿ ಎಷ್ಟು ಹಣ ವೆಚ್ಚ ಮಾಡಲಾಗಿದೆ (ಪ್ರವಾಸಿ ತಾಣವಾರು ವಿವರ ನೀಡುವುದು) ;

(ಆ) ಜಿಲ್ಲೆಯ ಪಾವಗಡ ತಾಲ್ಲೂಕಿನ ನಿಡಗಲ್ ಸಂಸ್ಥಾನವನ್ನು ಪ್ರವಾಸಿ ತಾಣವಾಗಿ ರೂಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಕ್ರಮ ತೆಗೆದುಕೊಂಡಿದ್ದರೆ, ಅದಕ್ಕೆ ನಿಗದಿ ಮಾಡಿರುವ ಹಣ ಎಷ್ಟು ?

## ವಸತಿ ಯೋಜನೆಗಳಿಗಾಗಿ ಅನುದಾನ ಬಿಡುಗಡೆಯಲ್ಲಿ ವಿಳಂಬ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೯೧ (೬೨೯) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಸತಿ ರಹಿತ ಕಡುಬಡವರಿಗೆ ಸೂರು ಒದಗಿಸಲು ಬಸವ ಸಮಿತಿ ಯೋಜನೆಯಡಿ ೨೦೧೦-೧೧, ೨೦೧೧-೧೨ ಹಾಗೂ ೨೦೧೨-೧೩ನೇ ಸಾಲಿನಲ್ಲಿ ಮನೆಗಳನ್ನು ಮಂಜೂರು ಮಾಡಿರುವುದು ಸರಿಯಷ್ಟೆ ಆದರೆ ಮನೆ ಮಂಜೂರಾದ ಫಲಾನುಭವಿಗಳಿಗೆ ಜಿ.ಪಿ.ಎಸ್. ತಂತ್ರಾಂಶದ ದೋಷದಿಂದಾಗಿ ಹಾಗೂ ಕಾರಣಾಂತರಗಳಿಂದ ಅನುದಾನ ಬಿಡುಗಡೆ ಆಗುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ಎಷ್ಟು ಮನೆಗಳಿಗೆ ಮಂಜೂರಾತಿ ನೀಡಲಾಗಿದೆ ; ಈಗಾಗಲೇ ಪೂರ್ಣಗೊಂಡ ಮನೆಗಳು ಎಷ್ಟು ; ಪ್ರಗತಿಯಲ್ಲಿ ಇರುವ ಮನೆಗಳು ಎಷ್ಟು ; ಪ್ರಾರಂಭಿಸದೆ ಇರುವ ಮನೆಗಳು ಎಷ್ಟು (ತಾಲ್ಲೂಕುವಾರು, ಗ್ರಾಮ ಪಂಚಾಯಿತಿವಾರು ವಿವರಣೆ ನೀಡುವುದು) ;

(ಇ) ಜಿಲ್ಲೆಯಲ್ಲಿ ಪೂರ್ಣಗೊಂಡ ಮನೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು ; ಪ್ರಗತಿಯಲ್ಲಿ ಇರುವ ಮನೆಗಳಿಗೆ ಬಿಡುಗಡೆಯಾದ ಅನುದಾನವೆಷ್ಟು ; ಬಾಕಿ ಉಳಿದಿರುವ ಅನುದಾನವನ್ನು ಫಲಾನುಭವಿಗಳಿಗೆ ಯಾವ ಕಾಲಮಿತಿಯೊಳಗೆ ಸಂದಾಯ ಮಾಡಲಾಗುವುದು ?



## ಶಾಲೆಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವುದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೯೨ (೬೩೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಶಾಲೆಗಳಲ್ಲಿ ಅತ್ಯಾಚಾರ, ಲೈಂಗಿಕ ಕಿರುಕುಳ ಮುಂತಾದ ಪ್ರಕರಣಗಳು ಹೆಚ್ಚಾಗುತ್ತಿವೆ. ಇವುಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ಶಾಲೆಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕ್ರಿಯಾಯೋಜನೆಯನ್ನು ತಯಾರಿಸಿದೆಯೇ ;

(ಇ) ಕ್ರಿಯಾ ಯೋಜನೆ ತಯಾರಿಸಿದ್ದರೆ, ಅದಕ್ಕೆ ತಗಲುವ ವೆಚ್ಚ ಎಷ್ಟು ;

(ಈ) ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲು ಸರ್ಕಾರಿ ಶಾಲೆಗಳಿಗೆ ಎಷ್ಟು ಅನುದಾನ ನಿಗದಿಪಡಿಸಲಾಗಿದೆಯೇ ;

(ಉ) ಅದೇ ರೀತಿ ಖಾಸಗಿ ಶಾಲೆಗಳಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲು ಕ್ರಮ ಜರುಗಿಸಲಾಗಿದೆಯೇ ?

## ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೯೩ (೬೩೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಾರಿ ಇರುವ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯು ಬೆಳಗಾವಿ ಜಿಲ್ಲೆಯಲ್ಲಿ

ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಎಷ್ಟು ಬಹು ಗ್ರಾಮ ಕುಡಿಯುವ ನೀರಿನ ಯೋಜನೆಗಳು ಪೂರ್ಣಗೊಂಡಿದೆ ; ಅಪೂರ್ಣಗೊಂಡ ಯೋಜನೆಗಳು ಎಷ್ಟು ;

(ಇ) ಬೆಳಗಾವಿ ಜಿಲ್ಲೆಗೆ ಈ ಯೋಜನೆಯ ಅನುಷ್ಠಾನಕ್ಕೆ ಎಷ್ಟು ಅನುದಾನ ಮಂಜೂರಾಗಿರುತ್ತದೆ ; ಅನುದಾನ ಮಂಜೂರಾಗಿದ್ದರೂ ಕೂಡ ಯೋಜನೆ ಪೂರ್ಣಗೊಳಿಸಲು ವಿಳಂಬವಾಗುತ್ತಿರುವುದು ಏಕೆ ?

## ಗ್ರಾಮ ಪಂಚಾಯತಿಗಳಿಗೆ ನೀಡುವ ತ್ರೈಮಾಸಿಕ ಅನುದಾನ

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೯೪ (೬೩೨ & ೬೪೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ ಅಭಿವೃದ್ಧಿ ಕಾಮಗಾರಿಗಾಗಿ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡುತ್ತಿರುವುದು ಸರಿಯಷ್ಟೆ. ಆದರೆ ಈ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬವಾಗುತ್ತಿದೆ. ಇದರಿಂದ ಗ್ರಾಮ ಪಂಚಾಯತ್‌ಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಕಳೆದ ಸಾಲಿನಲ್ಲಿ ಅಂದರೆ ೨೦೧೩–೧೪ನೇ ಸಾಲಿನಲ್ಲಿ ಬಿಡುಗಡೆ ಆಗಬೇಕಾಗಿದ್ದ ಅನುದಾನ ಎಷ್ಟು ; ಬಿಡುಗಡೆಗೊಳಿಸಲಾದ ಅನುದಾನ ಎಷ್ಟು ;



(ಈ) ಸರ್ಕಾರವು ಪ್ರಸ್ತಕ ೨೦೧೪–೧೫ನೇ ಸಾಲಿನಲ್ಲಿ ನಿಗದಿಪಡಿಸಿರುವ ಅನುದಾನ ಎಷ್ಟು ; ಬಿಡುಗಡೆ ಮಾಡಿರುವ ಅನುದಾನವೆಷ್ಟು ; ಬಾಕಿ ಉಳಿದಿರುವ ಅನುದಾನ ಎಷ್ಟು ?

## ಅಂಗವಿಕಲ ವೇತನದ ಫಲಾನುಭವಿಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೪೯೫ (೬೩೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೧೨ ರಿಂದ ಇಲ್ಲಿಯವರೆಗೆ ಅಂಗವಿಕಲ ವೇತನವನ್ನು ಪಡೆಯುತ್ತಿರುವ ಅಂಗವಿಕಲರ ಸಂಖ್ಯೆ (ವಾರ್ಷಿಕವಾರು) ಎಷ್ಟು ;

(ಆ) ಇವರಲ್ಲಿ ಮರಣವಾದ ಕಾರಣವನ್ನು ಹೊರತುಪಡಿಸಿ ಅಂಗವಿಕಲ ವೇತನ ತಡೆಹಿಡಿದಿರುವವರ ಸಂಖ್ಯೆ ಎಷ್ಟು ;

(ಇ) ಇದಕ್ಕೆ ಪ್ರಮುಖ ಕಾರಣಗಳೇನು ; ವೇತನ ತಡೆಹಿಡಿಯಲ್ಪಟ್ಟವರ ವಾರ್ಷಿಕವಾರು ಸಂಖ್ಯೆ ನೀಡುವುದು ;

(ಈ) ತಡೆಹಿಡಿದಿರುವ ಬಗ್ಗೆ ಮರು ಪರಿಶೀಲಿಸಲಾಗಿದೆಯೇ ; ಮರು ಪರಿಶೀಲಿಸಿ ಮತ್ತೆ ಅಂಗವಿಕಲ ವೇತನ ಬಿಡುಗಡೆಗೊಳಸಲಾದವರ ಸಂಖ್ಯೆ ಎಷ್ಟು ; ಮರು ಅಂಗವಿಕಲ ವೇತನ ನೀಡಿದ್ದಲ್ಲಿ, ತಡೆಹಿಡಿದಿದ್ದಷ್ಟು ತಿಂಗಳ ಬಾಕಿ ವೇತನವನ್ನು ನೀಡಲಾಗಿದೆಯೇ ; ಇಲ್ಲವಾದಲ್ಲಿ ಕಾರಣವೇನು ;

(ಉ) ಈ ರೀತಿ ತಡೆಹಿಡಿದ ಬಾಕಿ ಅಂಗವಿಕಲ ವೇತನದ ಒಟ್ಟು ಮೊತ್ತವೆಷ್ಟು ?

## ಪೌಷ್ಟಿಕ ಆಹಾರ ಯೋಜನೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೪೯೬ (೬೩೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಸಾಲಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಪೌಷ್ಟಿಕ ಆಹಾರ ಯೋಜನೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು ; ಈ ಯೋಜನೆಯಡಿ ಶೇಕಡಾ ಎಷ್ಟು ಪ್ರಗತಿ ಸಾಧಿಸಲಾಗಿದೆ ;

(ಆ) ಕಡಿಮೆ ತೂಕ ಮತ್ತು ಕಳಪೆ ಗುಣಮಟ್ಟದ ಪೌಷ್ಟಿಕ ಆಹಾರ ಸರಬರಾಜು ಮಾಡಿದ ಕಾರಣದಿಂದಾಗಿ, ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟರೂ ಸಹ ಕಳಪೆ ಗುಣಮಟ್ಟದ ಆಹಾರ ಸರಬರಾಜಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಬಂದಿದ್ದಲ್ಲಿ, ವಿವರ ನೀಡುವುದು) ;

(ಇ) ಈ ಕುರಿತು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ?

## ಮೂಲಸೌಕರ್ಯ ಎದುರಿಸುತ್ತಿರುವ ಗ್ರಾಮಗಳು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) :–**

೪೯೭ (೬೩೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ರಾಮನಾಥಪುರ ಗ್ರಾಮ ಪಂಚಾಯ್ತಿಯು ಹಿಂದುಳಿದಿರುವುದು ಮತ್ತು ಮೂಲಭೂತ ಸೌಕರ್ಯದ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;



(ಆ) ಯಾವ ರೀತಿಯ ಮೂಲಭೂತ ಸೌಕರ್ಯದ ಕೊರತೆ ಸದರಿ ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಕಂಡು ಬಂದಿದೆ (ವಿವರ ನೀಡುವುದು) ;

(ಇ) ಈ ಕೊರತೆಯನ್ನು ನೀಗಲು ಸರ್ಕಾರ ಯಾವ ಯಾವ ಯೋಜನೆಗಳನ್ನು ಸದರಿ ಗ್ರಾಮ ಪಂಚಾಯ್ತಿಯಲ್ಲಿ ಹಮ್ಮಿಕೊಂಡಿದೆ (ವಿವರ ನೀಡುವುದು) ;

(ಈ) ಇಲ್ಲಿ ಶೋಚನೀಯ ಸ್ಥಿತಿಯಲ್ಲಿ ಬದುಕುತ್ತಿರುವ ಆದಿದ್ರಾವಿಡರಿಗೆ ಏನು ಅನುಕೂಲ ಕಲ್ಪಿಸಲಾಗಿದೆ ?

## ನಾಡಗೀತೆಯ ಸಾಲುಗಳು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) :–**

೪೯೮ (೬೩೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಷ್ಟ್ರಕವಿ ಕುವೆಂಪುರವರು ರಚಿಸಿರುವ "ಜಯಭಾರತ ಜನನಿಯ ತನುಜಾತೆ" ನಾಡಗೀತೆಯ ಸಂಪೂರ್ಣ ಸಾಲುಗಳು ಎಷ್ಟು (ಆ ಸಾಲುಗಳ ವಿವರದೊಂದಿಗೆ) ;

(ಆ) ಕುವೆಂಪುರವರು ರಚಿಸಿರುವ ಸಾಲುಗಳನ್ನು ನಾಡಗೀತೆಯಾಗಿ ಹಾಡುವ ಸಂದರ್ಭದಲ್ಲಿ ಮೊಟಕುಗೊಳಿಸಲಾಗಿದೆಯೇ (ವಿವರಗಳೊಂದಿಗೆ) ;

(ಇ) ಪ್ರಸ್ತುತ ಸದರಿ ಕವಿತೆಯನ್ನು ನಾಡಗೀತೆಯಾಗಿ ಹಾಡುವ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಸಾಲುಗಳನ್ನು ಹಾಗೂ ಕ್ರಮಗಳ ವಿವರ ನೀಡುವುದು ;

(ಈ) ನಾಡಗೀತೆಯನ್ನು ಹಾಡುವ ಕುರಿತು ಸಮಿತಿ ರಚಿಸಲಾಗಿದೆಯೇ (ಸಮಿತಿಯ ವರದಿ ಮತ್ತು ಶಿಫಾರಸ್ಸನ್ನು ಕುರಿತು ತಿಳಿಸುವುದು) ?

## ಕನ್ನಡ ಮಾಧ್ಯಮಕ್ಕೆ ಅನುಮತಿ : ಆಂಗ್ಲ ಮಾಧ್ಯಮದಲ್ಲಿ ಬೋಧನೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೪೯೯ (೬೩೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಖಾಸಗಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳನ್ನು ತೆರೆಯಲು ಅನುಮತಿ ನೀಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಅವುಗಳಲ್ಲಿ ಅಧಿಕೃತ ಶಾಲೆಗಳೆಷ್ಟು ; ಅನಧಿಕೃತ ಶಾಲೆಗಳೆಷ್ಟು ;

(ಇ) ಕೆಲವೊಂದು ಖಾಸಗಿ ಶಾಲೆಗಳು ಕನ್ನಡ ಮಾಧ್ಯಮದಲ್ಲಿ ಅನುಮತಿಯನ್ನು ಪಡೆದು, ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣವನ್ನು ಬೋಧಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಇಂಥ ಶಾಲೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

## ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಸೇವೆ ಖಾಯಂ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೫೦೦ (೬೪೦) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎಷ್ಟು ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ ;



(ಆ) ಅದರಲ್ಲಿ ಎಷ್ಟು ಶಿಕ್ಷಕರು ಕಳೆದ ೧೦ ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ ;

(ಇ) ಕಳೆದ ೧೦ ವರ್ಷ ಹಾಗೂ ಅದಕ್ಕಿಂತ ಹೆಚ್ಚಿಗೆ ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ; ಹಾಗೂ ಅವರಿಗೆ ನೀಡುತ್ತಿರುವ ವೇತನ ಈಗ ಅತೀ ಕಡಿಮೆಯಾಗಿದ್ದು, ಅದನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಶಿಕ್ಷಕರ ವರ್ಗಾವಣೆ ನೀತಿಯಲ್ಲಿರುವ ಲೋಪಗಳ ಮಾರ್ಪಾಡು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೫೦೧ (೬೪೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ನೀತಿಯಲ್ಲಿ ಕೆಲವೊಂದು ನ್ಯೂನ್ಯತೆಗಳು ಇರುವುದು ನಿಜವೇ ;

(ಆ) ವಿಶೇಷವಾಗಿ ಪತಿ–ಪತ್ನಿಯವರ ವರ್ಗಾವಣೆಯಲ್ಲಿ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಾದರೆ, ಸದರಿ ವರ್ಗಾವಣೆ ನೀತಿಯಲ್ಲಿ ಕೆಲವೊಂದು ಮಾರ್ಪಾಡು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ;

(ಈ) ವರ್ಗಾವಣೆ ನೀತಿಯ ಮಾರ್ಪಾಡಿಗೆ ಎಷ್ಟು ಸಮಯ ಬೇಕಾಗುತ್ತದೆ ; ಇದು ಎಂದಿನಿಂದ ಜಾರಿಗೆ ಬರಲಿದೆ ?

## ಸಮಗ್ರ ಕೃತಿ ಮತ್ತು ಸಮಗ್ರ ವಚನಗಳ ಮುದ್ರಣ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೫೦೨ (೬೪೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ವಿಧಾನ ಮಂಡಲದ ಎರಡೂ ಸದನಗಳ ಕೆಲವು ಸದಸ್ಯರ ಒತ್ತಾಯದ ಮೇರೆಗೆ, ಶ್ರೀ ಹಾನಗಲ್ ಕುಮಾರಸ್ವಾಮಿಗಳ ಸಮಗ್ರ ಕೃತಿ ಹಾಗೂ ತಾಳೆ ಎಲೆ ಮೇಲೆ ಬರೆದ ಸಮಗ್ರ ವಚನಗಳನ್ನು ಮುದ್ರಣ ಮಾಡಲು ಅಗತ್ಯವಿರುವ ಅನುದಾನಕ್ಕಾಗಿ ೨೦೧೨–೧೩ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಆದೇಶ ಮಾಡಿದ್ದ ಸಂಗತಿ ನಿಜವೇ ; ಇದೇ ಸಾಲಿನ ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ ೩೦ ಲಕ್ಷ ರೂ ಗಳ ಅನುದಾನವನ್ನು ಒದಗಿಸಿದ್ದ ವಿಚಾರ ಸರ್ಕಾರದ ಗಮನದಲ್ಲಿದೆಯೇ ;

(ಆ) ಸದರಿ ಕಾರ್ಯಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಇನ್ನಷ್ಟು ವಿಳಂಬ ಮಾಡದೇ ಅಗತ್ಯ ಕ್ರಮ ಕೈಗೊಳ್ಳುವುದೇ ?



## ಕಿತ್ತೂರು ಚನ್ನಮ್ಮನವರ ಶಾಸನ ಸಂರಕ್ಷಣೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :–**

೫೦೩ (೬೪೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಿತ್ತೂರು ಚನ್ನಮ್ಮನ ಇತಿಹಾಸವನ್ನು ಹಳೆಗನ್ನಡದ ಅಕ್ಷರಗಳಿಂದ ಶಿಲಾಶಾಸನದಲ್ಲಿ ಬರೆದಿದ್ದು ಅದು, ಈಗ ಕಿತ್ತೂರಿನ ಬಸವಣ್ಣನ ಗುಡಿಯ ಮುಂದೆ ಇದ್ದು, ಅದನ್ನು ಸಂರಕ್ಷಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಆ ಶಿಲಾ ಶಾಸನವು ಕ್ರಿ.ಶ. ೧೧೮೮ರ ಶಾಸನವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹೊರದೇಶದಲ್ಲಿರುವ ಚನ್ನಮ್ಮನವರ ಕತ್ತಿಯನ್ನು ವಾಪಸ್ಸು ಪಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಅಮಟೂರು ಬಾಳಪ್ಪನ ಗುಂಡಿನೇಟಿಗೆ ಬ್ರಿಟಿಷ್ ಅಧಿಕಾರಿ ಥ್ಯಾಕರೆ ಬಲಿಯಾಗಿದ್ದು, ಅಮಟೂರು ಬಾಳಪ್ಪನ ಸವಿನೆನಪಿಗಾಗಿ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ ;

(ಉ) ಕಿತ್ತೂರು ಸಂಸ್ಥಾನಕ್ಕೆ ಸೇರಿದ ದೇಶನೂರು ಗ್ರಾಮದಲ್ಲಿರುವ ನಿರಂಜನ ಮಹಲ್ ಹಾಗೂ ದೇಶನೂರು ಪೂಜ್ಯರು ವಾಸಿಸುತ್ತಿರುವ ಮಠವನ್ನು ಸಂರಕ್ಷಣೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

(ಊ) ಬೈಲಹೊಂಗಲದಲ್ಲಿರುವ ಚನ್ನಮ್ಮನವರ ಸಮಾಧಿ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವಾಗಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗಿದೆಯೇ ?

## ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆ ನಿಯಮ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೦೪ (೬೪೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತ್‌ಗಳ ಪಿ.ಡಿ.ಓ.ಗಳ ವರ್ಗಾವಣೆ ಸಂಬಂಧಿಸಿದಂತೆ ಸರ್ಕಾರದ ಮಾರ್ಗಸೂಚಿಯೇನು (ವಿವರಗಳನ್ನು ಒದಗಿಸುವುದು) ;

(ಆ) ನಿಯಮದ ವಿರುದ್ಧವಾಗಿ ಪಿ.ಡಿ.ಓ.ಗಳನ್ನು ರಾಜಕೀಯ ಪ್ರೇರಿತವಾಗಿ ವರ್ಗಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ನಿಯಮ ಬಾಹಿರ ವರ್ಗಾವಣೆಯನ್ನು ರದ್ದು ಮಾಡಿದ ಪ್ರಕರಣಗಳೆಷ್ಟು (ವಿವರಗಳನ್ನು ಒದಗಿಸುವುದು) ?

## ವಿವಿಧ ಯೋಜನೆಗಳಡಿ ಗ್ರಾಮ ಪಂಚಾಯತ್‌ಗಳಿಗೆ ಮಂಜೂರಾದ ಮನೆಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೦೫ (೬೪೭) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಮಂಜೂರಾದ ಮನೆಗಳು ಎಷ್ಟು (ಬಸವ, ಇಂದಿರಾ ಯೋಜನೆಯೂ ಸೇರಿದಂತೆ ವಿವರ ನೀಡುವುದು) ;

(ಆ) ಈ ಸಾಲಿನಲ್ಲಿ ಮಂಜೂರಾದ ಮನೆಗಳು ಯಾವ ಹಂತದಲ್ಲಿದೆ (ಬಸವ, ಇಂದಿರಾ ಯೋಜನೆಯೂ ಸೇರಿದಂತೆ ವಿವರ ನೀಡುವುದು) ;



(ಇ) ಮಂಜೂರಾದ ಮನೆಗಳು, ಹಂತವಾರು ಆಗಿ ಮುಕ್ತಾಯಗೊಂಡಿದ್ದರೂ ಸರಿಯಾದ ಸಮಯದಲ್ಲಿ ಅನುದಾನ ಬಿಡುಗಡೆಯಾಗಿದೆಯೇ ;

(ಈ) ಅಕ್ಷಾಂಶ–ರೇಖಾಂಶಗಳ ಗುರುತಿನ ಪದ್ಧತಿ (Global Position System) ಮಾಡಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತಕ್ಕೆ ಕಳುಹಿಸಿದ ಎಷ್ಟು ದಿನಗಳೊಳಗೆ ಅನುದಾನ ಫಲಾನುಭವಿಗಳಿಗೆ ಬಿಡುಗಡೆಯಾಗುತ್ತದೆ ;

(ಉ) GPS ಮಾಡಿ ಸದರಿ ನಿಗಮಕ್ಕೆ ಕಳುಹಿಸಿದರೂ ಅನುದಾನ ಫಲಾನುಭವಿಗಳಿಗೆ ಬಿಡುಗಡೆಯಾಗದೆ ವಿಳಂಬವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಗಾಂಧಿ ಪುರಸ್ಕಾರ ಯೋಜನೆಯಡಿ ಅನುದಾನ ಬಳಕೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೦೬ (೬೪೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗಾಂಧಿ ಪುರಸ್ಕಾರ ಯೋಜನೆಯಡಿ ರಾಜ್ಯದ ಎಷ್ಟು ಗ್ರಾಮ ಪಂಚಾಯತಿಗೆ ಪುರಸ್ಕಾರ ಲಭಿಸಿದೆ; ಪ್ರಶಸ್ತಿಯ ಮೊತ್ತವೆಷ್ಟು (ವಿವರ ನೀಡುವುದು) ;

(ಆ) ಪ್ರಶಸ್ತಿಯ ಅನುದಾನ ಗ್ರಾಮ ಪಂಚಾಯತಿಗೆ ಬಿಡುಗಡೆಯಾಗಿದೆಯೇ ;

(ಇ) ಬಿಡುಗಡೆಯಾಗಿದ್ದಲ್ಲಿ, ಈ ಮೊತ್ತವನ್ನು ಬಳಕೆ ಮಾಡುವಲ್ಲಿ ಇರುವ ಸರ್ಕಾರದ ಮಾರ್ಗಸೂಚಿಯೇನು (ವಿವರ ನೀಡುವುದು) ;

(ಈ) ಮಾರ್ಗಸೂಚಿಯಿದ್ದರೆ, ಅನುದಾನವು ಮುಕ್ತವಾಗಿರುವುದು ;

(ಉ) ಮುಕ್ತವಾಗಿರದಿದ್ದಲ್ಲಿ, ಗ್ರಾಮ ಪಂಚಾಯಿತಿಯ ಅಭಿವೃದ್ಧಿಗೆ ಮಾರಕವೆನಿಸುವುದಿಲ್ಲವೆ ?

## ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನಿಧಿಯ ಸಮರ್ಪಕ ಅನುದಾನ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೦೭ (೬೪೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪ್ರತಿ ಗ್ರಾಮ ಪಂಚಾಯತ್‌ಗಾಗಿ ೨೦೧೪–೧೫ನೇ ಸಾಲಿನ ಬಜೆಟ್‌ನ ಒಟ್ಟು ಮೊತ್ತದಲ್ಲಿ ಶೇ. ೨೫ ರಷ್ಟನ್ನು ಪಂಚಾಯತ್ ಬಜೆಟ್‌ನಲ್ಲಿ ಮೀಸಲಿರಿಸಲಾಗಿದೆಯೇ (ಪಂಚಾಯತ್‌ವಾರು ವಿವರ ಒದಗಿಸುವುದು) ;

(ಆ) ಮೀಸಲಿರಿಸದಿದ್ದಲ್ಲಿ, ಪ್ರತಿ ಗ್ರಾಮ ಪಂಚಾಯಿತಿಯು ಈ ಲೆಕ್ಕಶೀರ್ಷಿಕೆಯಡಿ ಕ್ರಿಯಾ ಯೋಜನೆಯನ್ನು ತಯಾರಿಸಿದೆಯೇ ;

(ಇ) ತಯಾರಿಸಿದ್ದಲ್ಲಿ ಎಷ್ಟು ಗ್ರಾಮ ಪಂಚಾಯತಿಯು ಅನುದಾನವನ್ನು ಉಪಯೋಗಿಸಿ ಅನುಷ್ಠಾನ ಮಾಡಿದೆ (ಪಂಚಾಯತ್‌ವಾರು ವಿವರ ಒದಗಿಸುವುದು) ;

(ಈ) ಶೇ. ೨೫ರ ಅನುದಾನ ಬಜೆಟ್‌ನಲ್ಲಿ ಮೀಸಲಿರಿಸಿ ಕ್ರಿಯಾ ಯೋಜನೆ ಮಾಡಿಯೂ ಅನುಷ್ಠಾನ ಮಾಡದೇ ಇರುವ ಗ್ರಾಮ ಪಂಚಾಯತ್ ವಿವರಗಳಾವುವು ?



## ಜಿಲ್ಲೆಗೆ ಒಬ್ಬರಂತೆ ಹಿಂದಿ ಪರಿವೀಕ್ಷಕರ ನೇಮಕ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :–**

೫೦೮ (೬೫೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಂದಿ ಭಾಷಾ ಬೋಧನೆಯು ಜಿಲ್ಲಾ ಹಂತದಲ್ಲಿ ಯಾವ ರೀತಿ ಪರಿಶೀಲನೆಗೆ ಒಳಪಡುತ್ತಿದೆ ;

(ಆ) ಉಪನಿರ್ದೇಶಕರ ಕಛೇರಿಯಲ್ಲಿ ಹಿಂದಿ ಭಾಷೆಯ ಪರಿವೀಕ್ಷಕರು ಏಕಿಲ್ಲ ;

(ಇ) ಹಿಂದಿ ಭಾಷೆಯ ಪರಿವೀಕ್ಷಕರ ನೇಮಕಾತಿಗೆ ಸರ್ಕಾರ ಇದುವರೆಗೆ ಏಕೆ ಕ್ರಮ ಕೈಗೊಂಡಿರುವುದಿಲ್ಲ ;

(ಈ) ಪ್ರತಿಯೊಂದು ವಿಷಯಕ್ಕೆ ಪರಿವೀಕ್ಷಕರು ಇರುವಂತೆಯೇ ಹಿಂದಿ ವಿಷಯಕ್ಕೆ ಮಾತ್ರ ಪರಿವೀಕ್ಷಕರು ಇರುವುದಿಲ್ಲ, ಕಾರಣವೇನು ;

(ಉ) ತಕ್ಷಣ ಹಿಂದಿ ಭಾಷಾ ಪರಿವೀಕ್ಷಕರ ನೇಮಕಾತಿಗೆ ಕ್ರಮಕೈಗೊಳ್ಳಲು ಸಾಧ್ಯವೇ ?

## ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :–**

೫೦೯ (೬೫೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಆರ್.ಎಂ.ಎಸ್.ಎ. ಕಾರ್ಯಕ್ರಮದ ಅನುಷ್ಠಾನದ ಗೊಂದಲ ಪೂರ್ಣಗೊಳ್ಳುವುದೆಂದು ;

(ಆ) ಈ ಯೋಜನೆಯಡಿ ಶಾಲಾ ಹಂತಗಳನ್ನು ಬೇರ್ಪಡಿಸಿ ಎಂದಿನಿಂದ ಅನುಷ್ಠಾನಕ್ಕೆ ತರುವ ಸಂಕಲ್ಪ ಮಾಡಲಾಗಿದೆ ;

(ಇ) ಈ ಅಭಿಯಾನದ ಪೂರ್ಣ ಚಟುವಟಿಕೆಗಳ ಅಧ್ಯಯನ ಫಲಿತಾಂಶವೇನು ;

(ಈ) ಅಭಿಯಾನ ಪೂರ್ಣ ಪ್ರಮಾಣದ ಅನುಷ್ಠಾನ ಯಾವ ವರ್ಷದಿಂದ ಪ್ರಾರಂಭಿಸುವ ಗುರಿ ಇದೆ ?

## ಎಸ್.ಡಿ.ಎಂ.ಸಿ ಸದಸ್ಯರ & ಶಿಕ್ಷಕರ ಹೊಂದಾಣಿಕೆ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :–**

೫೧೦ (೬೫೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ ಮತ್ತು ಶಾಲಾ ಆಡಳಿತ ಸಹಕಾರಿಯುತ ಹೊಂದಾಣಿಕೆಯ ಬಗ್ಗೆ ಇಲಾಖೆಯಾಗಲಿ, ಎನ್.ಜಿ.ಓ ದಿಂದಾಗಲಿ ಅಧ್ಯಯನ ಕೈಗೊಂಡಿದ್ದಾರೆಯೇ ;

(ಆ) ಹಾಗಿದ್ದರೆ, ಹೊಂದಾಣಿಕೆ ಮತ್ತು ಹೊಂದಾಣಿಕೆ ರಹಿತ ಪ್ರಮಾಣಗಳು ಎಷ್ಟು ;

(ಇ) ಎಸ್.ಡಿ.ಎಂ.ಸಿ ಸದಸ್ಯರ ವರ್ತನೆಯಿಂದ ಶಾಲೆ ಮತ್ತು ಶಿಕ್ಷಕರಿಗಾದ ನಷ್ಟದ ಬಗ್ಗೆ ಎಸ್.ಡಿ.ಎಂ.ಸಿ ಸದಸ್ಯರನ್ನು ಎಲ್ಲಿಯಾದರೂ ಹೊಣೆಗಾರರನ್ನಾಗಿ ಮಾಡಲಾಗಿದೆಯೇ ;

(ಈ) ಇಂತಹ ಕ್ರಮದಿಂದ ಸದಸ್ಯತ್ವ ಕಳೆದುಕೊಂಡ ಸದಸ್ಯರ ಸಂಖ್ಯೆ ಎಷ್ಟು ;

(ಉ) ಎಸ್.ಡಿ.ಎಂ.ಸಿ ರಚನೆಯ ಗೊಂದಲದ ಬಗ್ಗೆ ಎಷ್ಟು ಪ್ರಕರಣಗಳು ನ್ಯಾಯಾಲಯದಲ್ಲಿವೆ ; ಅವುಗಳ ಸುಸೂತ್ರ ಪರಿಹಾರಕ್ಕೆ ಮಾರ್ಗಸೂಚಿಗಳೇನು ?



## ಶಿಕ್ಷಕರ ಮುಂಬಡ್ತಿಗಿರುವ ಸಮಸ್ಯೆಗಳು

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :–**

೫೧೧ (೬೪೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಮುಂಬಡ್ತಿ ನೀಡುವಾಗ ನಿಯಮ–೩೨ರ ಸ್ವತಂತ್ರ ಪ್ರಭಾರದಲ್ಲಿರಿಸುವುದು ಅನಿವಾರ್ಯವೇ ;

(ಆ) ನಿಯಮ–೩೨ ರನ್ವಯ ಪದೋನ್ನತಿ ಪಡೆದವರಿಗೆ ಸ್ವತಂತ್ರವಾಗಿ ಬಡ್ತಿ ನೀಡಲು ಎಷ್ಟು ವರ್ಷಗಳ ಮಿತಿ ನಿಗದಿಗೊಳಿಸಿದೆ ;

(ಇ) ನಿಯಮ–೩೨ ರನ್ವಯ ಬಡ್ತಿ ನೀಡುವಾಗ ಕಲಿಕಾ ವೇತನ ಶ್ರೇಣಿ ನಿರ್ಧರಿಸುವಾಗ, ಸ್ವತಂತ್ರ ಹುದ್ದೆಗೆ ಬಡ್ತಿ ನೀಡುವಾಗ ಪದೇ ಪದೇ ಅದೆ ದಾಖಲೆಗಳನ್ನು ಕೇಳುವುದು ಸರಿಯೇ ; (ಉದಾ: ಕನ್ನಡ ಭಾಷಾ ವಿನಾಯಿತಿ, ಎಸ್.ಎಸ್.ಎಲ್.ಸಿ ಅಂಕ ಪಟ್ಟಿ ನೇಮಕಾತಿ ಆದೇಶದ ಪ್ರತಿ, ಇಲಾಖಾ ಪರೀಕ್ಷೆ ಪಾಸಾದ ಪ್ರಮಾಣ ಪತ್ರಗಳು) ಪ್ರೊಬೇಷನರಿ ಅವಧಿಯಲ್ಲಿ ದಾಖಲಿಸಿದ್ದು ಸಾಕಾಗುವುದಿಲ್ಲವೇ ;

(ಈ) ಪ್ರಭಾರ ಭತ್ಯೆ, ಮಂಜೂರಿಯಲ್ಲಿ ತಡವಾಗಲು ಕಾರಣಗಳೇನು ; ಇಲಾಖೆಯಲ್ಲಿ ಎಷ್ಟು ಜನರಿಗೆ ಪ್ರಭಾರ ಭತ್ಯೆ ಮಂಜೂರು ಮಾಡಲಾಗಿದೆ ; ನೀಡಿದ ಒಟ್ಟು ಮೊತ್ತವನ್ನು ತಿಳಿಸುವುದು ;

(ಉ) ನಿಯಮ_೩೨ರ ಹುದ್ದೆಯಿಂದ ಖಾಯಂ ಹುದ್ದೆಗೆ ಬಡ್ತಿ ನೀಡುವಲ್ಲಿ ಇರುವ ಪ್ರಕರಣಗಳು ಎಷ್ಟು ಬಾಕಿ ಇವೆ ; ಅವುಗಳನ್ನು ಯಾವಾಗ ಸಕ್ರಮಗೊಳಿಸಲಾಗುವುದು ;

(ಊ) ನಿಯಮ–೩೨ ರ ಹುದ್ದೆಯಲ್ಲಿ ದೀರ್ಘ ಕಾಲ ಕಾರ್ಯನಿರ್ವಹಿಸಿ ನಿವೃತ್ತಿಯಾದವರಿಗೆ ಖಾಯಂ ಮುಂಬಡ್ತಿಯಿಂದ ವಂಚಿತ ರಾಗಿರುತ್ತಾರೆ ; ಇವರಿಗೆ ಸ್ವತಂತ್ರ ಹುದ್ದೆಯ ಸೌಲಭ್ಯಗಳನ್ನು ನಿವೃತ್ತಿ ನಂತರವಾದರೂ ನೀಡಲಾಗುವುದೇ ?

## ದೈಹಿಕ ಶಿಕ್ಷಣ ಮಹಾ ವಿದ್ಯಾಲಯಗಳ ವೇತನ ಅನುದಾನ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :–**

೫೧೨ (೬೫೩) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳೆಷ್ಟು ; ಅವುಗಳು ನೀಡುವ ಪದವಿ ಹಾಗೂ ಡಿಪ್ಲೊಮಾಗಳಾವುವು ; ಈ ಎಲ್ಲಾ ಸಂಸ್ಥೆಗಳು ಎನ್‌ಸಿಟಿಇ ಹಾಗೂ ಸರ್ಕಾರಗಳಿಂದ ಅನುಮತಿಸಲ್ಪಟ್ಟಿವೆಯೇ (ವಿವರ ನೀಡುವುದು) ;

(ಆ) ದೈಹಿಕ ಶಿಕ್ಷಣ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಇರುವ ಷರತ್ತುಗಳೇನು ;

(ಇ) ಈಗ ಇರುವ ದೀರ್ಘ ಕಾಲ ಅನುದಾನ ರಹಿತವಾಗಿ ಕರ್ತವ್ಯ ನಿರ್ವಹಿಸಿದ ಅನುದಾನ ರಹಿತ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಶೀಘ್ರ ಕ್ರಮಕೈಗೊಳ್ಳಲು ಸರ್ಕಾರದ ನಿರ್ಧಾರವೇನು ;

(ಈ) ಸದರಿ ಶಿಕ್ಷಣ ಸಂಸ್ಥೆಗಳು ಕಳೆದ ೨೫ ರಿಂದ ೩೦ ವರ್ಷಗಳಷ್ಟು ಹಿಂದಿನಿಂದ ಕಾರ್ಯನಿರ್ವಹಿಸುತ್ತಿರುವುದು ನಿಜವೇ ; ಈ ಶಿಕ್ಷಣ ಸಂಸ್ಥೆಗಳಿಗೆ ಯಾವ ರೀತಿಯ ಹಾಗೂ ಎಷ್ಟು ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತಿದೆ (ವಿವರ ನೀಡುವುದು) ?



## ವೈದ್ಯಕೀಯ ವೆಚ್ಚ ಮರುಪಾವತಿ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೫೧೩ (೬೫೪) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಿಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವಲ್ಲಿ ತುಂಬಾ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದರಿಂದಾಗಿ ಶಿಕ್ಷಕರಿಗೆ ತುಂಬಾ ಅನಾನುಕೂಲವಾಗುತ್ತಿದ್ದು, ತ್ವರಿತವಾಗಿ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೫೧೪ (೬೫೬) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತಾಂತ್ರಿಕ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಇವುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯ ಸಂಖ್ಯೆ ಎಷ್ಟು (ಸಂಸ್ಥೆವಾರು ಮಾಹಿತಿ ನೀಡುವುದು) ;

(ಇ) ಈ ಸಿಬ್ಬಂದಿಗೆ ವೇತನ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಪ್ರತಿ ತಿಂಗಳು ೧ನೇ ತಾರೀಖಿನಂದು ಈ ಸಿಬ್ಬಂದಿಗೆ ಸಂಬಳ ವಿತರಣೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು (ಮಾಹಿತಿ ನೀಡುವುದು) ?

## ಪ್ರೌಢಶಾಲಾ ಶಿಕ್ಷಕರಾಗಿ ಪದೋನ್ನತಿ ಹೊಂದಿರುವವರು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೫೧೫ (೬೫೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರಾಗಿ ಬಡ್ತಿ ಹೊಂದಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಈ ಶಿಕ್ಷಕರು ೧೦–೧೫–೨೦ ವರ್ಷಗಳ ಕಾಲಮಿತಿ ವೇತನ ಬಡ್ತಿ ಮುಖ್ಯೋಪಾಧ್ಯಾಯರ ಹುದ್ದೆಗೆ ಮುಂಬಡ್ತಿ ಹಾಗೂ ವರ್ಗಾವಣೆ ಪ್ರಕ್ರಿಯೆಯಲ್ಲಿ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ;

(ಇ) ಬಂದಿದ್ದರೆ, ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು) ?

## ರಾಜೀವಗಾಂಧಿ ಸಾಲದ ಯೋಜನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೫೧೬ (೬೫೫) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉನ್ನತ ಶಿಕ್ಷಣ ಇಲಾಖೆಯ ವತಿಯಿಂದ ರಾಜೀವಗಾಂಧಿ ಸಾಲ ರೂಪದ ವಿದ್ಯಾರ್ಥಿ ವೇತನ ಯೋಜನೆ ಜಾರಿಯಲ್ಲಿದೆಯೇ ; ಇದ್ದಲ್ಲಿ ಇದರ ರೂಪುರೇಷೆಗಳೇನು ;



(ಆ) ಈ ಯೋಜನೆ ಇಲ್ಲಿಯವರೆಗೂ ಅನುಷ್ಠಾನಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಸಿ.ಇ.ಟಿ. ಪರೀಕ್ಷೆಯನ್ನು ಸಕಾಲಕ್ಕೆ ನಡೆಸದೇ ಇರುವುದು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :–**

೫೧೭ (೬೫೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಟಿ.ಇ.ಟಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ೨೩ ಸಾವಿರ ಅಭ್ಯರ್ಥಿಗಳಿಗೆ ನವೆಂಬರ್ ಅಂತ್ಯದೊಳಗೆ ಸಿ.ಇ.ಟಿ. ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸಿದ್ದರೂ, ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ಯಾವ ನಿಗದಿತ ಸಮಯದಲ್ಲಿ ಸಿ.ಇ.ಟಿ. ಪರೀಕ್ಷೆ ನಡೆಸಲಾಗುವುದು (ಮಾಹಿತಿ ನೀಡುವುದು) ;

(ಈ) ಈ ವಿಳಂಬಕ್ಕೆ ಕಾರಣಗಳೇನು ?

## ಉರ್ದು ಮಹಿಳಾ ಪದವಿಪೂರ್ವ ಕಾಲೇಜುಗಳ ಸ್ಥಾಪನೆ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೫೧೮ (೬೫೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹೆಣ್ಣು ಮಕ್ಕಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಸ್ಥಾಪಿಸಲಾಗಿರುವ ಉರ್ದು ಮಹಿಳಾ ಪದವಿಪೂರ್ವ ಕಾಲೇಜುಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಇನ್ನೂ ಯಾವ–ಯಾವ ಸ್ಥಳಗಳಲ್ಲಿ ಉರ್ದು ಮಹಿಳಾ ಪದವಿಪೂರ್ವ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ಮಾಹಿತಿ ನೀಡುವುದು) ?

## ಉರ್ದು ಅಂಗನವಾಡಿ ಶಾಲೆಗಳ ಪ್ರಾರಂಭ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೫೧೯ (೬೬೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕಿರಿಯ ಪ್ರಾಥಮಿಕ ಉರ್ದು ಶಾಲೆಗಳಲ್ಲಿ ಉರ್ದು ಅಂಗನವಾಡಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಚಿಂತಿಸಿದೆಯೇ ;

(ಆ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಈಗಾಗಲೇ ಉರ್ದು ಅಂಗನವಾಡಿ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು) ;



(ಇ) ಇಲ್ಲದಿದ್ದಲ್ಲಿ, ಯಾವ ನಿಗದಿತ ಸಮಯದಲ್ಲಿ ಉರ್ದು ಅಂಗನವಾಡಿ ಶಾಲೆಗಳನ್ನು ಪ್ರಾರಂಭಿಸಲಾಗುವುದು (ಮಾಹಿತಿ ನೀಡುವುದು)?

## ಸರ್ಕಾರಿ ಉರ್ದು ಶಾಲೆ ಕಟ್ಟಡಗಳ ನಿರ್ಮಾಣ.

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೫೨೦ (೬೬೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಜಿಲ್ಲೆಗಳಲ್ಲಿರುವ ಎಷ್ಟು ಉರ್ದು ಸರ್ಕಾರಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುತ್ತವೆ (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಇಂತಹ ಕಟ್ಟಡಗಳನ್ನು ಕೆಡವಿ ನೂತನ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಮಾಹಿತಿ ನೀಡುವುದು) ;

(ಇ) ಕಟ್ಟಡಗಳನ್ನು ಕೆಡವಿ ಈಗಾಗಲೇ ನೂತನವಾಗಿ ಕಟ್ಟಿರುವ ಕಟ್ಟಡಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) ?

## ವೇತನಾನುದಾನಕ್ಕೆ ಒಳಪಡಿಸಿರುವ ಅನುದಾನ ರಹಿತ ಶಾಲೆಗಳು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೫೨೧ (೬೬೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೯೯೫ ರಿಂದ ಪ್ರಾರಂಭವಾಗಿರುವ ಎಷ್ಟು ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಸರ್ಕಾರಿ ವೇತನಾನುದಾನಕ್ಕೆ ಒಳಪಡಿಸಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಇಲ್ಲದಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು (ಮಾಹಿತಿ ನೀಡುವುದು) ?

## ಉರ್ದು ಪ್ರಾಥಮಿಕ ಮತ್ತು ಪ್ರೌಢಶಾಲೆಗಳು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮನಿರ್ದೇಶನ ಹೊಂದಿದವರು) :–**

೫೨೨ (೬೬೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಉರ್ದು ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು, ತಾಲ್ಲೂಕುವಾರು, ಮಾಹಿತಿ ನೀಡುವುದು) ;

(ಆ) ಈ ಶಾಲೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಶೌಚಾಲಯ/ಶಾಲಾ ಕಟ್ಟಡಗಳು ಸಮರ್ಪಕವಾಗಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಳೆದ ೩ ವರ್ಷಗಳಿಂದ ರಾಜ್ಯದಲ್ಲಿ ಎಷ್ಟು ಉರ್ದು ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ (ನಿರ್ಮಿಸಲು ವ್ಯಯಿಸಿರುವ ಹಣದ ವಿವರ ನೀಡುವುದು) ;

(ಈ) ಕೊರತೆಯಿರುವ ಶಾಲಾ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?



## ಶಿಕ್ಷಕರ ವರ್ಗಾವಣೆ ಕಾಯ್ದೆಯಲ್ಲಿ ನ್ಯೂನತೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಹಾಗೂ ಶ್ರೀ ಎಸ್.ವ್ಹಿ. ಸಂಕನೂರ್ (ಪದವೀಧರರ ಕ್ಷೇತ್ರ) :–**

೫೨೩ (೬೬೮ & ೬೮೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿಕ್ಷಕರ ವರ್ಗಾವಣೆ ಕಾಯ್ದೆಯಲ್ಲಿ ನ್ಯೂನತೆಗಳಿರುವುದು ಸರ್ಕಾರ ಗಮನಿಸಿದೆಯೇ ; ಹಾಗಾದರೆ ಆ ನ್ಯೂನತೆಗಳು ಯಾವುವು (ವಿವರಗಳೊಡನೆ) ;

(ಆ) ಸದರಿ ವರ್ಗಾವಣೆ ಕಾಯ್ದೆಯ ನ್ಯೂನತೆಗಳಿಂದ ವರ್ಗಾವಣೆ ಬಯಸುವ ಅರ್ಹ ಶಿಕ್ಷಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ವರ್ಗಾವಣೆ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಚಿಂತಿಸಿದೆಯೇ ;

(ಈ) ಹಾಗಾದರೆ, ತಿದ್ದುಪಡಿಯಲ್ಲಿ ಬರುವ ಅಂಶಗಳಾವುವು (ವಿವರಗಳೊಡನೆ) ;

(ಉ) ಯಾವ ಕಾಲಮಿತಿಯಲ್ಲಿ ತಿದ್ದುಪಡಿ ಮಾಡಲಾಗುವುದು ?

## ಬೋಧಕ/ಬೋಧಕೇತರರಿಗೆ ವೈದ್ಯಕೀಯ ಭತ್ಯೆ ನೀಡಿಕೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೫೨೪ (೬೬೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ವೈದ್ಯಕೀಯ ಭತ್ಯೆ ಮತ್ತು

ವೈದ್ಯಕೀಯ ಮರುಪಾವತಿ ಸೌಲಭ್ಯಗಳು ಇಲ್ಲದೆ ನೌಕರರು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಾದರೆ, ಸದರಿ ನೌಕರರಿಗೆ ವೈದ್ಯಕೀಯ ಭತ್ಯೆ ಮತ್ತು ವೈದ್ಯಕೀಯ ಮರುಪಾವತಿ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಈ ಹಿಂದೆ ನೀಡಲಾದ ಭರವಸೆಯಂತೆ, ಯಾವ ಯೋಜನೆ/ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ (ವಿವರಗಳೊಡನೆ) ;

(ಇ) ಯಾವ ಕಾಲಮಿತಿಯಲ್ಲಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು ?

## ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳು

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೫೨೫ (೬೬೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ;

(ಆ) ಸದರಿ ಕಾಲೇಜುಗಳ ಪ್ರೌಢಶಾಲಾ ವಿಭಾಗದಲ್ಲಿ ಹಿರಿಯ ಸಹ ಶಿಕ್ಷಕರು ಎಷ್ಟು ಕಾಲೇಜುಗಳಲ್ಲಿ ಯಾವ ಸಮಯದಿಂದ ಆಡಳಿತ ನಿರ್ವಹಣೆಯನ್ನು ನಿರ್ವಹಿಸುತ್ತಿದ್ದಾರೆ ;

(ಇ) ಇವರಿಗೆ ಯಾವುದೇ ರೀತಿಯ ಹೆಚ್ಚುವರಿ ಆರ್ಥಿಕ ಸೌಲಭ್ಯಗಳನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ಹೆಚ್ಚುವರಿ ಆರ್ಥಿಕ ಸೌಲಭ್ಯಗಳನ್ನು ನೀಡದಿರಲು ಕಾರಣಗಳೇನು ;



(ಉ) ಯಾವ ಕಾಲಮಿತಿಯಲ್ಲಿ ಹೆಚ್ಚುವರಿ ಆರ್ಥಿಕ ಸೌಲಭ್ಯಗಳ ಬಾಕಿಯನ್ನು ನೀಡಲಾಗುವುದು ;

(ಊ) ಸದರಿ ಕಾಲೇಜುಗಳಲ್ಲಿ ಉಪ ಪ್ರಾಂಶುಪಾಲರ ಹುದ್ದೆಗಳನ್ನು ಸೃಜಿಸದೆ ಇರುವುದರಿಂದ ಆಡಳಿತ ಹಾಗೂ ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ಯಾವ ಕಾಲಮಿತಿಯಲ್ಲಿ ಉಪ ಪ್ರಾಂಶುಪಾಲರ ಹುದ್ದೆಗಳನ್ನು ಸೃಜಿಸಲಾಗುವುದು ?

## ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗೆ ಬಡ್ತಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೫೨೬ (೬೬೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳ ಸಂಖ್ಯೆ ಎಷ್ಟು ; ಎಂದಿನಿಂದ ಈ ಹುದ್ದೆಗಳು ಖಾಲಿ ಇವೆ ;

(ಆ) ಪ್ರಾಂಶುಪಾಲರ ಹುದ್ದೆಗಳು ಖಾಲಿ ಇರುವುದರಿಂದ ಕಾಲೇಜಿನ ಆಡಳಿತ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ನಿವೃತ್ತಿ ಅಂಚಿನಲ್ಲಿರುವ ಕೆಲವು ಉಪನ್ಯಾಸಕರು ಪ್ರಾಂಶುಪಾಲರ ಹುದ್ದೆಯ ಬಡ್ತಿಯಿಂದ ವಂಚಿತರಾಗಿ ನಿವೃತ್ತಿಯಾಗಿರುವುದು/ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕಾಲಕಾಲಕ್ಕೆ ಬಡ್ತಿ ನೀಡಲು ಇರುವ ತೊಂದರೆಗಳೇನು ;

(ಉ) ಬಡ್ತಿ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ತುಂಬಲು ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು (ವಿವರಗಳೊಡನೆ) ;

(ಊ) ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು ?

## ಅತಿಥಿ ಉಪನ್ಯಾಸಕರಿಗೆ ಗೌರವ ಸಂಭಾವನೆ ನೀಡಿಕೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) :–**

೫೨೭ (೬೬೭) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

(ಆ) ಅತಿಥಿ ಉಪನ್ಯಾಸಕರಿಗೆ ಇದುವರೆವಿಗೂ ನೀಡಬೇಕಾಗಿರುವ ಗೌರವ ಸಂಭಾವನೆಯ ಬಾಕಿ ಮೊತ್ತವೆಷ್ಟು ; ಯಾವ ಕಾಲಮಿತಿಯಲ್ಲಿ ಬಾಕಿ ಮೊತ್ತ ಬಿಡುಗಡೆಗೊಳಿಸಲಾಗುವುದು ;

(ಇ) ಗೌರವ ಸಂಭಾವನೆಯನ್ನು ಪರಿಷ್ಕರಿಸಲು ಸರ್ಕಾರ ಚಿಂತಿಸಿದೆಯೇ ;

(ಈ) ಹಾಗಾದರೆ, ಯಾವ ಪ್ರಮಾಣದಲ್ಲಿ ಪರಿಷ್ಕರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ (ವಿವರಗಳೊಡನೆ) ;

(ಉ) ೨೦೧೪–೧೫ನೇ ಸಾಲಿಗೆ ಅನ್ವಯಿಸುವಂತೆ ಪರಿಷ್ಕರಣೆ ಮಾಡಲಾಗುವುದೇ ?



## ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೨೮ (೬೭೧) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪದವಿ ಕಾಲೇಜುಗಳಲ್ಲಿರುವ ಉಪನ್ಯಾಸಕ ಬೋಧಕರ ಖಾಲಿ ಹುದ್ದೆ ವಿವರಗಳನ್ನು ವಿಷಯವಾರು ನೀಡುವುದು ; ಈ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಆ) ಇಂತಹ ಉಪನ್ಯಾಸಕರ ಹುದ್ದೆಗೆ ಸಿ.ಇ.ಟಿ. ಮೂಲಕ ನೇಮಕಾತಿ ಮಾಡಲು ಸರ್ಕಾರ ಚಿಂತಿಸಿದೆಯೇ ; ಯಾವಾಗ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು ;

(ಇ) ಅದೇ ರೀತಿ ಅನುದಾನಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರ ಪ್ರವೇಶ ಶುಲ್ಕವನ್ನು ಉಚಿತ ಶಿಕ್ಷಣ ನೀತಿಯಂತೆ ಮರುಪಾವತಿ ಮಾಡಲು ಸರ್ಕಾರ ಚಿಂತಿಸಿದೆಯೇ ;

(ಈ) ಇದು ಯಾವಾಗಿನಿಂದ ಜಾರಿಗೆ ಬರುತ್ತದೆ ; ಇದರಿಂದ ರಾಜ್ಯದ ಎಷ್ಟು ಜನ ವಿದ್ಯಾರ್ಥಿನಿಯರಿಗೆ ಇದರ ಪ್ರಯೋಜನ ಲಭಿಸಿದಂತಾಗುತ್ತದೆ ಹಾಗೂ ಇದಕ್ಕಾಗಿ ಖರ್ಚಾಗುವ ಮೊತ್ತ ಎಷ್ಟು ;

(ಉ) ಇದನ್ನು ಖಾಸಗೀ ಶಾಶ್ವತ ಅನುದಾನ ರಹಿತ ಕಾಲೇಜುಗಳ ವಿದ್ಯಾರ್ಥಿನಿಯರಿಗೂ ವಿಸ್ತರಿಸಲು ಉದ್ದೇಶಿಸಲಾಗಿದೆಯೇ (ವಿವರ ನೀಡುವುದು) ?

## ಬೀದರ್ ಗುಲ್ಬರ್ಗಾ ರೈಲು ಮಾರ್ಗದ ಕಾಮಗಾರಿ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೨೯ (೬೭೩) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್–ಗುಲ್ಬರ್ಗಾ ರೈಲು ಮಾರ್ಗದ ಕಾಮಗಾರಿ ಸಂಪೂರ್ಣವಾಗಿ ಯಾವಾಗ ಮುಕ್ತಾಯಗೊಳ್ಳುವುದು ;

(ಆ) ಪ್ರಸ್ತುತ ಬೀದರ್–ಹುಮನಾಬಾದ್ ಮಧ್ಯೆ ರೈಲು ಸಂಚಾರ ಪ್ರಾರಂಭವಾಗಿದ್ದು ಕಲಬುರಗಿಯವರೆಗೆ ಸಂಚಾರ ಪ್ರಾರಂಭಿಸಲು ಬೇಕಾಗುವ ಕಾಲಾವಧಿ ಎಷ್ಟು ;

(ಇ) ಈ ಸಂಬಂಧ ಕೇಂದ್ರದ ರೈಲ್ವೆ ಸಚಿವಾಲಯದೊಂದಿಗೆ ರಾಜ್ಯ ಸರ್ಕಾರವು ಸತತ ಸಂಪರ್ಕದಲ್ಲಿದೆಯೇ (ವಿವರ ನೀಡುವುದು) ?

## ಸರ್ಕಾರ ಮತ್ತು ಅನುದಾನಿತ ಶಾಲೆಗಳ ಗುಣಮಟ್ಟ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೩೦ (೬೭೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳೆಷ್ಟು ; ಆಯಾ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು (ಜಿಲ್ಲಾ ಮತ್ತು ತಾಲ್ಲೂಕುವಾರು ಆಯಾ ಶಾಲೆಯ ಹೆಸರುಗಳೊಂದಿಗೆ ವಿವರ ನೀಡುವುದು) ;



(ಆ) ನಕಲಿ ಶಿಕ್ಷಕರ ಹೆಸರಿನಲ್ಲಿ ಸುಳ್ಳು ಲೆಕ್ಕ ನೀಡಿ ಎಚ್.ಆರ್.ಎಂ.ಎಸ್. ಮೂಲಕ ವೇತನ ಪಡೆದು ವಂಚಿಸಿರುವ ಪ್ರಕರಣ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇದ್ದಲ್ಲಿ, ಪ್ರಕರಣದ ಪೂರ್ಣ ವಿವರ ನೀಡುವುದು ; ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಆಗಿರುವ ನಷ್ಟ ಎಷ್ಟು ;

(ಈ) ಈ ಪ್ರಕರಣದಲ್ಲಿ ಷಾಮೀಲಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಯಾರು ; ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ;

(ಉ) ಸರ್ಕಾರಕ್ಕೆ ಆಗಿರುವ ನಷ್ಟವನ್ನು ವಸೂಲಿ ಮಾಡಲು ಕೈಗೊಂಡಿರುವ ಕಾರ್ಯಕ್ರಮಗಳೇನು (ಸಂಪೂರ್ಣ ವಿವರ ನೀಡುವುದು) ?

## ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಅನುದಾನ ಬಿಡುಗಡೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೩೧ (೬೬೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದಿಂದ ದಿ: ೦೧–೧೧–೨೦೧೧ ರಿಂದ ೩೧–೧೧–೨೦೧೩ರ ವರೆಗೂ ಯಾವ ಯಾವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ (ವಿವರ ನೀಡುವುದು) ;

(ಆ) ಹಾಗಿದ್ದಲ್ಲಿ, ಗಡಿ ಪ್ರದೇಶದಲ್ಲಿನ ಎಷ್ಟು ಶಾಲೆಗಳಿಗೆ ಹೆಚ್ಚುವರಿ ಕೊಠಡಿ, ಕಂಪ್ಯೂಟರ್ ಕೊಠಡಿ, ಬಯಲು ರಂಗ ಮಂದಿರ ಮುಂತಾದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ (ಪ್ರತ್ಯೇಕ ಕಾಮಗಾರಿವಾರು ವಿವರ ನೀಡುವುದು) ;

(ಇ) ಪ್ರಾಧಿಕಾರದಿಂದ ಮಂಜೂರಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ಅಧಿಕಾರಿಗಳು ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಸಂಪೂರ್ಣ ಮಾಹಿತಿ ನೀಡುವುದು) ;

(ಈ) ೨೦೧೧ ರಿಂದ ೨೦೧೪ನೇ ಸಾಲಿನವರೆಗೆ ಎಷ್ಟು ಕಾಮಗಾರಿಗಳಿಗೆ ಒಂದೇ ಕಂತಿನಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಉ) ಪ್ರಾಧಿಕಾರದಿಂದ ಬೀದರ್ ಜಿಲ್ಲೆಯಲ್ಲಿನ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಅನುದಾನ ನೀಡಲಾಗಿದೆ (ಸಂಪೂರ್ಣ ವಿವರವಾದ ಮಾಹಿತಿ ನೀಡುವುದು) ?

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೩೨ (೬೭೬ ) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯು.ಪಿ.ಎಸ್.ಸಿ.ಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ರಾಜ್ಯ ಸರ್ಕಾರ ಸ್ಥಾಪಿಸಿರುವ ಸ್ಟಡಿ ಸೆಂಟರ್‌ಗಳೆಷ್ಟು ;



(ಆ) ರಾಜ್ಯದ ಬಡ ಪ್ರತಿಭಾನ್ವಿತ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಯು.ಪಿ.ಎಸ್.ಸಿ.ಯಂತಹ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಸರ್ಕಾರದಿಂದ ಸ್ಟಡಿ ಸೆಂಟರ್‌ಗಳನ್ನು ಜಿಲ್ಲಾವಾರು ಪ್ರಾರಂಭಿಸಲು ಯೋಜನೆ ರೂಪಿಸಲಾಗಿದೆಯೆ ;

(ಇ) ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ರಾಜ್ಯದ ಅಭ್ಯರ್ಥಿಗಳ ಸಾಧನೆಯನ್ನು ಇತರೆ ನೆರೆ ರಾಜ್ಯಗಳಾದ ತಮಿಳುನಾಡು, ಕೇರಳಗಳಿಗೆ ಹೋಲಿಸಿದಲ್ಲಿ ಕಡಿಮೆಯಾಗಿದ್ದು ಈ ರಾಜ್ಯ ಸರ್ಕಾರಗಳ ಮಾದರಿಯಲ್ಲಿ ಜಿಲ್ಲಾವಾರು ಸ್ಟಡಿ ಸೆಂಟರ್‌ಗಳನ್ನು ಪ್ರಾರಂಭಿಸಲು ಕೈಗೊಂಡಿರುವ ಕ್ರಮಗಳೇನು ?

## ಸರ್ಕಾರಿ ಶಾಲೆಗಳಲ್ಲಿ ಸುರಕ್ಷತೆ ಮತ್ತು ಮೂಲ ಸೌಕರ್ಯಗಳ ಅಗತ್ಯತೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೩೩ (೬೭೫) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳೆಷ್ಟು ; ಈ ಪೈಕಿ ಎಷ್ಟು ಶಾಲೆಗಳಿಗೆ ಬಾಲಕ–ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಮತ್ತು ಮೂಲ ಭೂತ ಸೌಕರ್ಯ ಒದಗಿಸಲಾಗಿದೆ ;

(ಆ) ಎಷ್ಟು ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸುರಕ್ಷತೆಗೆ ಸಿ.ಸಿ. ಕ್ಯಾಮರಾ ಅಳವಡಿಸಲಾಗಿದೆ ; ಇದಕ್ಕೆ ಒದಗಿಸಿರುವ ಮೊಬಲಗೆಷ್ಟು ;

(ಇ) ಹಾಸನ ಜಿಲ್ಲೆಯಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಶಾಲೆಗಳೆಷ್ಟು ; ಇವುಗಳಲ್ಲಿ ಸರ್ಕಾರದ

ಸುತ್ತೋಲೆಯಂತೆ ಮಕ್ಕಳ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೆ ; ಎಷ್ಟು ಶಾಲೆಗಳು ಇನ್ನೂವರೆಗೂ ಕೈಗೊಂಡಿರುವುದಿಲ್ಲ; ಪಾಲಿಸದ ಶಾಲೆಗಳ ಮೇಲೆ ಕೈಗೊಂಡಿರುವ ಕ್ರಮಗಳೇನು ?

## ಶುದ್ಧ ಕುಡಿಯುವ ನೀರು ಪೂರೈಕೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೩೪ (೬೭೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರದ ಸಮೀಕ್ಷೆಯಂತೆ, ರಾಜ್ಯದ ಅನೇಕ ಜಿಲ್ಲೆಗಳ ಕುಡಿಯುವ ನೀರಿನ ಕೊಳವೆ ಬಾವಿಗಳ ನೀರಿನಲ್ಲಿ ಫ್ಲೋರೈಡ್, ನೈಟ್ರೇಟ್ ಮತ್ತು ಕಬ್ಬಿಣದ ಅಂಶಗಳು ಹೆಚ್ಚಾಗಿದ್ದು ಕುಡಿಯಲು ಯೋಗ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕುಡಿಯುವ ನೀರಿನ ಕೊಳವೆ ಬಾವಿಗಳು ಕಲುಷಿತಗೊಂಡಿರುವ ಜಿಲ್ಲೆಗಳಾವುವು ;

(ಇ) ಇಂತಹ ಜಿಲ್ಲೆಗಳಲ್ಲಿ ಕಲುಷಿತ ಕೊಳವೆ ಬಾವಿಗಳನ್ನು ಗುರುತಿಸಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕೈಗೊಂಡಿರುವ ಕ್ರಮಗಳೇನು ;

(ಈ) ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಶಾಶ್ವತ ಕ್ರಮಗಳೇನು ?



## ರಾಷ್ಟ್ರೀಯ ಕುಡಿಯುವ ನೀರು ಯೋಜನೆಯಡಿ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೩೫ (೬೭೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ನೇ ಸಾಲಿನಲ್ಲಿ ರಾಷ್ಟ್ರೀಯ ಕುಡಿಯುವ ನೀರು ಯೋಜನೆಯಡಿ ಕುಡಿಯುವ ನೀರಿನ ಗುಣಮಟ್ಟ ಪರೀಕ್ಷೆಯಲ್ಲಿ ಅನೇಕ ಜಿಲ್ಲೆಗಳ ಗ್ರಾಮಗಳಲ್ಲಿ ಕುಡಿಯುವ ನೀರಿನ ಗುಣಮಟ್ಟ ಕುಸಿದಿದ್ದು ಇವುಗಳಿಗೆ ಶುದ್ಧ ನೀರು ಒದಗಿಸಲು ಕೈಗೊಂಡಿರುವ ಕ್ರಮಗಳೇನು ;

(ಆ) ಹಾಸನ ನಗರದ ಮತ್ತು ಸುತ್ತಮುತ್ತಲಿನ ಬಹುತೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆಯಿದ್ದು ಇದನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಹೇಮಾವತಿ ಮತ್ತು ಯಗಚಿ ಜಲಾಶಯಗಳಿಂದ ಹಾಸನ ನಗರ ಮತ್ತು ಜಿಲ್ಲೆಯ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಲು ಯೋಜನೆಯನ್ನು ರೂಪಿಸಲಾಗಿದೆಯೆ ;

(ಈ) ಯೋಜನೆ ರೂಪಿಸಿದ್ದಲ್ಲಿ ಅನುಷ್ಠಾನಕ್ಕೆ ಕೈಗೊಂಡಿರುವ ಕ್ರಮಗಳೇನು ?

## ಗ್ರಂಥಾಲಯಗಳ ನಿರ್ವಹಣೆ

**ಶ್ರೀ ಪಟೇಲ್ ಶಿವರಾಂ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೩೬ (೬೭೮) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಜಿಲ್ಲಾ, ತಾಲ್ಲೂಕು ಮತ್ತು ಸಂಚಾರಿ ಗ್ರಂಥಾಲಯಗಳೆಷ್ಟು (ಶಾಖೆಗಳು ಸೇರಿ) ;

(ಆ) ರಾಜ್ಯದ ಗ್ರಂಥಾಲಯಗಳಿಗೆ ಕಳೆದ ೨ ವರ್ಷಗಳಿಂದ ಖರ್ಚುಮಾಡಿರುವ ಮೊಬಲಗೆಷ್ಟು ;

(ಇ) ಸಾರ್ವಜನಿಕ ಜಿಲ್ಲಾ, ತಾಲ್ಲೂಕು ಮತ್ತು ಸಂಚಾರಿ ಗ್ರಂಥಾಲಯಗಳಿಗೆ ಮಂಜೂರಾಗಿರುವ ಒಟ್ಟು ಹುದ್ದೆಗಳೆಷ್ಟು; ಇವುಗಳ ಪೈಕಿ ಖಾಲಿ ಇರುವ ಹುದ್ದೆಗೆಳೆಷ್ಟು; ಇವುಗಳನ್ನು ಭರ್ತಿಮಾಡಲು ಕೈಗೊಂಡಿರುವ ಕ್ರಮಗಳೇನು ;

(ಈ) ಕಳೆದ ಎರಡು ವರ್ಷಗಳಿಂದ ಬಿ.ಬಿ.ಎಂ.ಪಿ. ಸಂಗ್ರಹಿಸಿರುವ ಗ್ರಂಥಾಲಯ ತೆರಿಗೆ ಎಷ್ಟು; ಈ ಪೈಕಿ ಗ್ರಂಥಾಲಯ ಇಲಾಖೆಗೆ ನೀಡಿರುವ ತೆರಿಗೆ ಎಷ್ಟು ;

(ಉ) ಬಿ.ಬಿ.ಎಂ.ಪಿ ಸಂಗ್ರಹಿಸುವ ಗ್ರಂಥಾಲಯ ತೆರಿಗೆಯನ್ನು ನೇರವಾಗಿ ಆ ಇಲಾಖೆಯ ಬ್ಯಾಂಕ್ ಖಾತೆಗೆ ಹೋಗುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅನುಪಾತ

**ಶ್ರೀ ಎಸ್.ವ್ಹಿ. ಸಂಕನೂರ್ (ಪದವೀಧರರ ಕ್ಷೇತ್ರ) :–**

೫೩೭ (೬೮೦) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಇರಬೇಕಿರುವ ಶಿಕ್ಷಕರ ಅನುಪಾತವೆಷ್ಟು ;

(ಆ) ರಾಜ್ಯದಲ್ಲಿ ಸಿ.ಬಿ.ಎಸ್.ಇ. ಸಮಾನಾಂತರ ಪಠ್ಯಕ್ರಮ ತಂದಿರುವ ಹಿನ್ನೆಲೆಯಲ್ಲಿ ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಹಾಲಿ ಇರುವ ಅನುಪಾತವನ್ನು ಕಡಿಮೆ ಮಾಡುವ ಚಿಂತನೆ ಸರ್ಕಾರಕ್ಕೆ ಇದೆಯೇ ?



## ಪದವಿ ಪೂರ್ವ ಕಾಲೇಜುಗಳ ದೈಹಿಕ ಉಪನ್ಯಾಸಕರು

**ಶ್ರೀ ಎಸ್.ವ್ಹಿ. ಸಂಕನೂರ್ (ಪದವೀಧರರ ಕ್ಷೇತ್ರ) :–**

೫೩೮ (೬೮೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು (ಪ್ರತ್ಯೇಕ ಮಾಹಿತಿ ನೀಡುವುದು) ;

(ಆ) ಈ ಕಾಲೇಜುಗಳಲ್ಲಿ ಎಷ್ಟು ದೈಹಿಕ ಉಪನ್ಯಾಸಕರು ಹಾಗೂ ಗ್ರಂಥಪಾಲಕರು ಕಾರ್ಯನಿರ್ವಹಿಸುತ್ತಿದ್ದಾರೆ (ಪ್ರತ್ಯೇಕ ವಿವರ ನೀಡುವುದು) ;

(ಇ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದೈಹಿಕ ಉಪನ್ಯಾಸಕರನ್ನು ಮತ್ತು ಗ್ರಂಥಪಾಲಕರನ್ನು ನೇಮಕ ಮಾಡಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಎಷ್ಟು ದೈಹಿಕ ಉಪನ್ಯಾಸಕರನ್ನು ಮತ್ತು ಗ್ರಂಥ ಪಾಲಕರನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುತ್ತದೆ ;

(ಈ) ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಈ ಹುದ್ದೆಗಳ ಭರ್ತಿಗೆ ಸರ್ಕಾರ ಯಾವಾಗ ಅನುಮತಿ ನೀಡಲಿದೆ ?

## ನಕಲಿ ಪಿ.ಹೆಚ್.ಡಿ. ಪದವಿ ಪ್ರಕರಣಗಳು

**ಶ್ರೀ ಎಸ್.ವ್ಹಿ. ಸಂಕನೂರ್ (ಪದವೀಧರರ ಕ್ಷೇತ್ರ) :–**

೫೩೯ (೬೮೩) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಕಲಿ ಪಿ.ಹೆಚ್.ಡಿ. ಪ್ರಕರಣಗಳು ನಡೆದಿರುವ ರಾಜ್ಯದ ವಿಶ್ವವಿದ್ಯಾಲಯಗಳಾವುವು ;

(ಆ) ನಕಲಿ ಪಿ.ಹೆಚ್.ಡಿ. ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆಯೇ ; ಅಂತಹ ಪ್ರಕರಣಗಳಾವುವು ; ಸಿಕ್ಕಿ ಬಿದ್ದವರು ಯಾರು ;

(ಇ) ಈ ನಕಲಿ ಪಿ.ಹೆಚ್.ಡಿ. ತಡೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇದನ್ನು ಪತ್ತೆ ಮಾಡಿದ್ದು ಹೇಗೆ ;

(ಈ) ಗೌರವ ಡಾಕ್ಟರೇಟ್ ಪದವಿ ನೀಡಲು ಅನುಸರಿಸುವ ಮಾನದಂಡಗಳೇನು ; ಗೌರವ ಡಾಕ್ಟರೇಟ್ ನೀಡುವ ಸಂಖ್ಯೆಗೆ ಗರಿಷ್ಠ ಮಿತಿಯನ್ನು ಹಾಕಲು ನಿರ್ಧರಿಸಿದೆಯೇ ;

(ಉ) ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲು ಉನ್ನತ ಸಮಿತಿ ರಚಿಸಲು ಸರ್ಕಾರ ನಿರ್ಧರಿಸಿದೆಯೇ ?

## ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಪದನ್ನೋತಿ

**ಶ್ರೀ ಎಸ್.ವ್ಹಿ. ಸಂಕನೂರ್ (ಪದವೀಧರರ ಕ್ಷೇತ್ರ) :–**

೫೪೦ (೬೭೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಾಗಿ ಪದೋನ್ನತಿಯನ್ನು ಯಾವ ವರ್ಷ ಮತ್ತು ದಿನಾಂಕದಿಂದ ನೀಡಿಲ್ಲ ;

(ಆ) ಪದೋನ್ನತಿ ನೀಡದೇ ಇರಲು ಕಾರಣವೇನು; ಪದೋನ್ನತಿ ನೀಡಲು ಬಾಕಿ ಇರುವ ಪ್ರಕರಣಗಳ ವಿವರಗಳನ್ನು ವಿಷಯವಾರು ನೀಡುವುದು ;

(ಇ) ಸರ್ಕಾರ ಪದೋನ್ನತಿ ನೀಡುವ ಕುರಿತು ಯಾವಾಗ ಕ್ರಮ ಕೈಗೊಳ್ಳಲಿದೆ ?



## ಸೌರ ವಿದ್ಯುತ್ ದೀಪ ಖರೀದಿಯಲ್ಲಿ ಹಗರಣ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೪೧ (೬೯೦) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೦–೧೧ನೇ ಸಾಲಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಮತ್ತು ವಸತಿ ನಿಲಯಗಳಿಗೆ ಸೌರ ವಿದ್ಯುತ್ ದೀಪ ಮತ್ತು ಸೌರ ವಿದ್ಯುತ್ ಹೀಟರ್ ಖರೀದಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದರೆ, ಸೌರ ವಿದ್ಯುತ್ ದೀಪ ಮತ್ತು ಸೌರ ವಿದ್ಯುತ್ ಹೀಟರ್ ಖರೀದಿಯಲ್ಲಿ ಭ್ರಷ್ಟಾಚಾರ ಮಾಡಿದವರು ಯಾರು; ಅವರ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ;

(ಇ) ಹಗರಣದ ಮೊತ್ತ ಎಷ್ಟು (ವಿವರ ನೀಡುವುದು) ?

## ಅಂಗನವಾಡಿ ಕೇಂದ್ರಗಳು

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೪೨ (೬೯೧) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು, ಮಂಜೂರಾದ ಶಿಕ್ಷಕಿಯರ ಮತ್ತು ಸಹಾಯಕಿಯರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು) ;

(ಆ) ಅಂಗನವಾಡಿ ಶಿಕ್ಷಕಿಯರಿಗೆ ಮತ್ತು ಸಹಾಯಕಿಯರಿಗೆ ನೀಡುತ್ತಿರುವ ವೇತನ ಎಷ್ಟು ;

(ಇ) ಪ್ರಸಕ್ತ ಸಾಲಿನಿಂದ ಇವರಿಗೆ ವೇತನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ (ವಿವರ ನೀಡುವುದು) ?

## ರಂಗಮಂದಿರಗಳ ನಿರ್ಮಾಣ ಹಾಗೂ ನಿರ್ವಹಣೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೪೩ (೬೮೪) ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಜಿಲ್ಲಾ ರಂಗಮಂದಿರಗಳ ಸಂಖ್ಯೆ ಎಷ್ಟು; ಜಿಲ್ಲಾ ಕೇಂದ್ರಗಳಲ್ಲಿ ಅಸ್ತಿತ್ವದಲ್ಲಿರುವ ರಂಗಮಂದಿರಗಳು ಯಾವುವು ;

(ಆ) ಅಸ್ತಿತ್ವದಲ್ಲಿದ್ದರೆ, ಇವುಗಳಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವ ರಂಗಮಂದಿರಗಳು ಎಷ್ಟು ;

(ಇ) ಹೊಸದಾಗಿ ಮಂಜೂರಾಗಿರುವ ರಂಗಮಂದಿರಗಳೆಷ್ಟು; ಇವುಗಳಲ್ಲಿ ಸಮರ್ಪಕವಾಗಿ ನಿರ್ವಹಣೆ ಮಾಡಿಕೊಂಡು ಬರಲಾಗುತ್ತಿದೆಯೇ (ವಿವರ ನೀಡುವುದು) ?

## ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾದ ಅನುದಾನ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೪೪ (೯೮೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿರುವ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಕಳೆದ ೩ ವರ್ಷಗಳಿಂದ ಬಿಡುಗಡೆಯಾದ ಅನುದಾನವೆಷ್ಟು;



(ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದ ಬಗ್ಗೆ ಪ್ರತ್ಯೇಕ ವಿವರ ನೀಡುವುದು) ;

(ಆ) ಇದರಲ್ಲಿ ಕುಡಿಯುವ ನೀರಿಗಾಗಿ ಖರ್ಚು ಮಾಡಿರುವ ಅನುದಾನವೆಷ್ಟು (ಗ್ರಾಮ ಪಂಚಾಯಿತಿ ಅನುಗುಣವಾಗಿ ವಿವರ ನೀಡುವುದು) ;

## ಆಂಗ್ಲ ಮಾಧ್ಯಮ ಶಾಲೆಗಳು

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೫೪೫ (೯೫೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೨ ವರ್ಷಗಳಿಂದ ಅನುಮೋದನೆ ನೀಡಲಾಗಿರುವ ಆಂಗ್ಲ ಮತ್ತು ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಅನುಮೋದನೆ ನೀಡಿದ್ದಲ್ಲಿ, ವಿಧಿಸಲಾಗಿರುವ ಷರತ್ತುಗಳಾವುವು?

## ಶಿಕ್ಷಕರನ್ನು ಬೋಧಕೇತರ ಕಾರ್ಯಕ್ಕೆ ನಿಯೋಜಿಸಿಕೊಂಡಿರುವುದು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೪೬ (೬೮೯) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಶಿಕ್ಷಕರನ್ನು ಬೋಧಕೇತರ ಕಾರ್ಯಕ್ಕೆ ನಿಯೋಜಿಸಿಕೊಂಡಿರುವ ಕುರಿತು ವರದಿ, ದೂರು ಏನಾದರೂ ಸ್ವೀಕೃತವಾಗಿವೆಯೇ (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) ;

(ಆ) ಈ ಕುರಿತು ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಶಿಕ್ಷಕರನ್ನು ಬೋಧಕೇತರ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆಯೇ ;

(ಈ) ಇಲ್ಲವಾದಲ್ಲಿ, ಸದ್ಯ ಬೋಧಕೇತರ ಕಾರ್ಯಕ್ಕೆ ನಿಯೋಜಿತ ಗೊಂಡಂತಹ ಶಿಕ್ಷಕರನ್ನು ಹಿಂಪಡೆಯಲು ಸರ್ಕಾರದ ಮುಂದೆ ಇರುವ ಅಡೆತಡೆಗಳಾದರೂ ಏನು ?

## ಅಂಗನವಾಡಿ ಕೇಂದ್ರಗಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೪೭ (೬೮೬) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಪ್ಪಳ ವುತ್ತು ರಾಂಯುಚೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಆ) ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಮತ್ತು ಹೊಂದದಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ;

(ಇ) ಸ್ವಂತ ಕಟ್ಟಡ ಹೊಂದಿರುವ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ಹೊಂದಿರುವ ಮತ್ತು ಹೊಂದದೆ ಇರುವ ಕೇಂದ್ರಗಳ ವಿವರಗಳನ್ನು ನೀಡುವುದು (ನಗರ ಮತ್ತು ಗ್ರಾಮಾಂತರ ಮಾಹಿತಿಯೊಂದಿಗೆ) ;

(ಈ) ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸರಕಾರದಿಂದ ೨೦೧೧–೧೨ ರಿಂದ ಪ್ರಸಕ್ತ ಸಾಲಿನವರೆಗೂ ಬಿಡುಗಡೆಯಾದ ಅನುದಾನ ಎಷ್ಟು (ಇದರಲ್ಲಿ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ನೀಡುವುದು)?



## ಸುವರ್ಣ ಗ್ರಾಮ ಯೋಜನೆ ಅನುಷ್ಠಾನ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೪೮ (೬೮೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ಸುವರ್ಣ ಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸಿದ ಗ್ರಾಮಗಳು ಯಾವುವು; (ತಾಲ್ಲೂಕುವಾರು ವಿವರಗಳನ್ನು ನೀಡುವುದು) ;

(ಆ) ಸುವರ್ಣ ಗ್ರಾಮ ಯೋಜನೆಯ ಅನುಷ್ಠಾನವನ್ನು ಯಾವ ಇಲಾಖೆ ನಿರ್ವಹಿಸುತ್ತಿದೆ ;

(ಇ) ಸದರಿ ಯೋಜನೆಯಲ್ಲಿ ಕಾಮಗಾರಿ ಸಂಪೂರ್ಣವಾಗಿ ಮುಕ್ತಾಯಗೊಂಡ ಗ್ರಾಮಗಳ ವಿವರಗಳನ್ನು ನೀಡುವುದು ;

(ಈ) ಕಾಮಗಾರಿ ಇದುವರೆಗೂ ಪೂರ್ಣಗೊಳ್ಳದ ಗ್ರಾಮಗಳ ವಿವರಗಳನ್ನು ನೀಡುವುದು; ಹಾಗೂ ವಿಳಂಬಕ್ಕೆ ಕಾರಣಗಳೇನು ;

(ಉ) ಸುವರ್ಣ ಗ್ರಾಮ ಯೋಜನೆಯಲ್ಲಿ ಕಾಮಗಾರಿಯನ್ನು ಇದುವರೆಗೂ ಪ್ರಾರಂಭಿಸದ ಪ್ರಕರಣಗಳು ಇವೆಯೇ? (ಇದ್ದಲ್ಲಿ, ವಿವರಗಳನ್ನು ನೀಡುವುದು) ?

## ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳು

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೪೯ (೬೮೭) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಪ್ಪಳ ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; ಅಪೌಷ್ಠಿಕತೆ ಯಾವ ಯಾವ ಗ್ರಾಮಗಳಲ್ಲಿ ಕಂಡು ಬಂದಿರುತ್ತದೆ; (ತಾಲ್ಲೂಕುವಾರು ಮಾಹಿತಿ ನೀಡುವುದು);

(ಆ) ಅಪೌಷ್ಠಿಕತೆಯಿಂದ ೨೦೧೩-೧೪ ರಿಂದ ಪ್ರಸಕ್ತ ಸಾಲಿನವರೆಗೂ ಮೃತಪಟ್ಟ ತಾಲ್ಲೂಕುವಾರು ಮಕ್ಕಳ ವಿವರಗಳನ್ನು ನೀಡುವುದು;

(ಇ) ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತಿರುವ ಪೌಷ್ಠಿಕ ಆಹಾರದ ವಿವರಗಳನ್ನು ನೀಡುವುದು ;

(ಈ) ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಆಗುತ್ತಿರುವ ಕುರಿತು ದೂರುಗಳು ಬಂದಿರುವುದು ನಿಜವಲ್ಲವೆ ;

(ಉ) ಬಂದಿದ್ದಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?

## ಅನುದಾನಿತ ಶಾಲಾ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):-**

೫೫೦ (೬೯೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಸರ್ಕಾರಿ ಹಾಗೂ ಅನುದಾನಿತ, ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಸ್ತುತ ಖಾಲಿ ಇರುವ ಬೋಧಕ ಮತ್ತು ಬೋಧಕೇತರ (ವಿಷಯವಾರು/ಹುದ್ದೆವಾರು) ಹುದ್ದೆಗಳು ಯಾವುವು (ಶಾಲಾ/ಕಾಲೇಜುವಾರು ಸಂಪೂರ್ಣ ವಿವರ ನೀಡುವುದು)?

## ಪಾಲಿಟೆಕ್ನಿಕ್ ಬೋಧಕ/ಬೋಧಕೇತರರ ವೇತನಾನುದಾನ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):-**

೫೫೧ (೬೯೫) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅನುದಾನಿತ ಪಾಲಿಟೆಕ್ನಿಕ್ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ನೀಡುತ್ತಿರುವ ವೇತನಾನುದಾನದ ನಿಯಮಗಳೇನು (ವಿವರಣೆ ನೀಡುವುದು) ?



## ದೈಹಿಕ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):-**

೫೫೨ (೬೯೬) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವೈದ್ಯನಾಥನ್ ವರದಿ ಜಾರಿಯ ಹಿನ್ನಲೆಯಲ್ಲಿ ಪ್ರೌಢ ಶಾಲಾ ದೈಹಿಕ ಶಿಕ್ಷಕರ ವೃಂದ ಮತ್ತು ನೇಮಕಾತಿ (C&R) ನಿಯಮಾವಳಿಗಳ ರಚನೆ ಕಾರ್ಯ ಈಗ ಯಾವ ಹಂತದಲ್ಲಿದೆ;

(ಆ) ಯಾವ ಕಾಲ ಮಿತಿಯೊಳಗೆ ಪೂರ್ಣಗೊಳಿಸಲಾಗುವುದು;

(ಇ) ಪದವಿ ಪೂರ್ವ ದೈಹಿಕ ಉಪನ್ಯಾಸಕರ ನೇಮಕಾತಿಗೆ ಇರುವ ಅಡೆತಡೆಗಳು ಏನು;

(ಈ) ಪದವಿ ಪೂರ್ವ ದೈಹಿಕ ಉಪನ್ಯಾಸಕರ ನೇಮಕಾತಿಗೆ ಯಾವಾಗ ಕ್ರಮ ಕೈಗೊಳ್ಳಲಾಗುವುದು?

## ಪದವಿ ಕಾಲೇಜುಗಳು

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ ):-**

೫೫೩ (೬೯೪) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿಜಾಪೂರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಇರುವ ಸರ್ಕಾರಿ/ಅನುದಾನಿತ, ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಹುದ್ದೆ ಯಾವುವು, ಎಷ್ಟು; (ಕಾಲೇಜುವಾರು ವಿವರ ನೀಡುವುದು);

(ಆ) ಸದ್ಯ ಈ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ (ಬೋಧಕ/ಬೋಧಕೇತರ ಅತಿಥಿ ಉಪನ್ಯಾಸಕರು/ತಾತ್ಕಾಲಿಕ ಅವಧಿಯ ಉಪನ್ಯಾಸಕರು, ಸಿಬ್ಬಂದಿಗಳು ಯಾರು; (ವಿವರ ನೀಡುವುದು);

(ಇ) ಯುಜಿಸಿ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಹಾಗೂ State Scale ವೇತನದಡಿ ಕಾರ್ಯನಿರ್ವಹಿಸುತ್ತಿರುವವರು ಯಾರು; (ಕಾಲೇಜುವಾರು ಸಂಪೂರ್ಣ ವಿವರ ನೀಡುವುದು) ;

## ಶುಚಿಗಾರರಿಗೆ ನೀಡುತ್ತಿರುವ ಮತ್ತು ಪತ್ರಿಕೆಗಳ ಖರೀದಿ ಹಣದಲ್ಲಿ ಹೆಚ್ಚಳ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೫೪ (೨೦೩) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಗ್ರಂಥಾಲಯಗಳಲ್ಲಿ ಮಾಸಿಕ ವಾರ್ತಾ ಪ್ರತಿಕೆಗಳನ್ನು ಖರೀದಿಸಲು ರೂ.೪೦೦ ನಿಗದಿಪಡಿಸಲಾಗಿದ್ದು, ಈ ವಾರ್ತಾ ಪತ್ರಿಕೆಗಳನ್ನು ಖರೀದಿಸಲು ರೂ.೧೦೦೦ ಗಳಿಗೆ ಹೆಚ್ಚಿಸಲು ಸರ್ಕಾರದ ಪ್ರಸ್ತಾವನೆಯಿದ್ದರೂ, ಇನ್ನೂ ಮಂಜೂರಾತಿ ನೀಡದೇ ಇರುವುದರಿಂದ ಹೆಚ್ಚಿನ ಪತ್ರಿಕೆಗಳನ್ನು ಖರೀದಿಸಲು ಸಾಧ್ಯವಾಗದೇ ಇರುವುದು ಸರ್ಕಾರದ ಗಮನದಲ್ಲಿದೆಯೇ;

(ಆ) ಗ್ರಂಥಾಲಯಗಳನ್ನು ಶುಚಿಗೊಳಿಸಲು ಶುಚಿಗಾರರಿಗೆ ಪ್ರಸ್ತುತ ಮಾಸಿಕ ರೂ.೧೦೦ ಗಳನ್ನು ರೂ.೧೦೦೦ ಗಳಿಗೆ ಹೆಚ್ಚಿಸಲು ಸರ್ಕಾರದ ನಿಲುವೇನು?



## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನಿವೇಶನ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೫೫ (೨೦೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಸತಿ ನಿವೇಶನಗಳ ರಚನೆಗಾಗಿ ಕಳೆದ ಒಂದು ವರ್ಷದಿಂದ ಎಷ್ಟು ಭೂಮಿಯನ್ನು ಖರೀದಿ ಮಾಡಲಾಗಿದೆ;

(ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಾಗೂ ನಿವೇಶನ ರಹಿತರಿಗೆ ವಿವಿಧ ವಸತಿ ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ಪೂರ್ಣಗೊಳಿಸಿ ವಿತರಿಸಲಾಗಿದೆ;

(ಇ) ಹುಡ್ಕೋ ಮತ್ತು ವಾಂಬೆ ವಸತಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಒಟ್ಟು ಎಷ್ಟು ಮೊತ್ತದ ಸಾಲ ಮನ್ನಾ ಮಾಡಲಾಗಿದೆ ?

## ಗ್ರಂಥಾಲಯಗಳಲ್ಲಿನ ನೌಕರರನ್ನು ಖಾಯಂಗೊಳಿಸುವುದು

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೫೬ (೨೦೨) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಗ್ರಂಥಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; ಇದರಲ್ಲಿ ಅರೆಕಾಲಿಕ/ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ;

(ಆ) ಈ ಗ್ರಂಥಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಭರ್ತಿ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು ;

(ಇ) ಪ್ರಸ್ತುತ ಅರೆಕಾಲಿಕ/ಗುತ್ತಿಗೆ ಆಧಾರದಲ್ಲಿ ಸುಮಾರು ವರ್ಷಗಳಿಂದ ಗ್ರಂಥಾಲಯಗಳಲ್ಲೇ ಕೆಲಸ ನಿರ್ವಹಿಸುತ್ತಿರುವ ನೌಕರರನ್ನು ಅಲ್ಲಿಯೇ ಖಾಯಂಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು ?

## ಪ್ರವಾಸಿ ತಾಣಗಳ ಅಭಿವೃದ್ಧಿ

**ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೫೭ (೭೦೧) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆಯಲ್ಲಿ ಕಳೆದ ೦೩ ವರ್ಷಗಳಿಂದ ಯಾವ ಯಾವ ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸಲಾಗಿದೆ ;

(ಆ) ಕಳೆದ ೦೩ ವರ್ಷಗಳಿಂದ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ನೀಡಿರುವ ಅನುದಾನವೆಷ್ಟು (ವಿವರಗಳನ್ನು ನೀಡುವುದು) ;

(ಇ) ಜಿಲ್ಲೆಯಲ್ಲಿ ಕಳೆದ ೦೩ ವರ್ಷಗಳಿಂದ ಎಷ್ಟು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲಾಗಿದೆ ;

(ಈ) ಈ ಸಾಲಿನ ಆಯವ್ಯಯದಲ್ಲಿ ಮೈಸೂರು ಜಿಲ್ಲೆಗೆ ಎಷ್ಟು ಹಣವನ್ನು ಮೀಸಲಿಡಲಾಗಿದೆ ?

## ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಶಿಕ್ಷಣ ಸಂಸ್ಥೆಗಳು.

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೫೫೮ (೭೦೭) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಶಿಕ್ಷಣ ಸಂಸ್ಥೆಗಳಲ್ಲಿ ಶೇ.೨೫ರಷ್ಟು ವಿದ್ಯಾರ್ಥಿಗಳು ಅಲ್ಪಸಂಖ್ಯಾತರು ಆಗಿರಬೇಕೆಂದು ಯಾವ



ಕಾನೂನಿನ ಅಡಿಯಲ್ಲಿ ಸುತ್ತೋಲೆ ಹೊರಡಿಸಲಾಗಿದೆ; (ವಿವರ ನೀಡುವುದು) ಈ ನಿಯಮದಡಿ ಎಷ್ಟು ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ (ವಿವರ ನೀಡುವುದು);

(ಆ) ರಾಜ್ಯದ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿಗೆ ಅವಕಾಶ ಕಲ್ಪಿಸಲಾಗಿದೆಯೇ; ಅನುದಾನಿತ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅವಕಾಶ ನೀಡದೇ ಇರುವುದರಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಾಧನೆ ಮಾಡಲು ಆಗದೇ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಕೈಗೊಂಡ ಕ್ರಮಗಳೇನು ;

(ಇ) ರಾಜ್ಯದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ;

(ಈ) ಮಕ್ಕಳ ಸುರಕ್ಷತೆ ಬಗ್ಗೆ ಸರ್ಕಾರ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಿ.ಸಿ.ಟಿ.ವಿ.ಯನ್ನು ಅಳವಡಿಸಲು ಕಡ್ಡಾಯಗೊಳಿಸುವುದರಿಂದ ಪ್ರತಿ ಶಾಲೆಗೆ ತಗಲುವ ವೆಚ್ಚ ಎಷ್ಟು; ಎಷ್ಟು ಶಾಲೆಗಳಲ್ಲಿ ಈಗಾಗಲೇ ಸಿ.ಸಿ.ಟಿ.ವಿ.ಯನ್ನು ಅಳವಡಿಸಲಾಗಿದೆ ;

(ಉ) ಅನುದಾನಿತ ಶಾಲೆಗಳಲ್ಲಿ ಈ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಎಷ್ಟು ಹಣ ನೀಡಲಾಗಿದೆ (ವಿವರ ನೀಡುವುದು) ;

(ಊ) ವಿದ್ಯಾರ್ಥಿಗಳ ಸಂಖ್ಯೆ ೩೦ ಕ್ಕಿಂತಲೂ ಕಡಿಮೆ ಇರುವ ಶಾಲೆಗಳಲ್ಲಿ ಸಿ.ಸಿ.ಟಿ.ವಿ ಅಳವಡಿಸುವುದು ಅನಿವಾರ್ಯವೇ ?

## ಪ್ರವಾಸೋದ್ಯಮದ ಪ್ರಮುಖ ಯೋಜನೆಗಳು

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು) :–**

೫೫೯ (೭೦೮) ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರವಾಸೋದ್ಯಮ ರಾಜ್ಯವನ್ನಾಗಿ ಬೆಳೆಸಲು ಪ್ರವಾಸೋದ್ಯಮ ಇಲಾಖೆ ಕೈಗೊಂಡ ಪ್ರಮುಖ ಯೋಜನೆಗಳಾವುವು (ವಿವರ ನೀಡುವುದು) ;

(ಆ) ಪ್ರವಾಸೋದ್ಯಮ ಬೆಳವಣಿಗೆಗೆ (೧) ಕೋಸ್ಟಲ್ ಕರ್ನಾಟಕ (೨) ಮೈಸೂರು ಕರ್ನಾಟಕ ಮತ್ತು (೩) ಹೈದರಾಬಾದ್ ಕರ್ನಾಟಕ ಎಂದು ೩ ವಿಭಾಗಗಳಾಗಿ ವಿಂಗಡಿಸಿ ಆಯಾ ವಿಭಾಗಗಳಿಗೆ ಕೈಗೊಳ್ಳಬಹುದಾದ ಪ್ರವಾಸೋದ್ಯಮ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಸರ್ಕಾರದ ಮುಂದಿರುವ ಯೋಜನೆಗಳಾವುವು ;

(ಇ) ಕರಾವಳಿ ಕರ್ನಾಟಕ ಪ್ರವಾಸೋದ್ಯಮಕ್ಕೆ ಅಡ್ಡಿಯಾಗಿರುವ CRZ ನಿಯಮ ಅಳವಡಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಜೊತೆ ಪ್ರಸ್ತಾವನೆ ಮಂಡಿಸಿದೆಯೇ; ಇದ್ದಲ್ಲಿ ಅದು ಯಾವ ಹಂತದಲ್ಲಿದೆ ;

(ಈ) CRZ ಇದರ ಕೇಂದ್ರ ಕಛೇರಿ ಬೆಂಗಳೂರಿನಲ್ಲಿದ್ದು, ಅದನ್ನು ಮಂಗಳೂರು ಅಥವಾ ಉಡುಪಿ ಜಿಲ್ಲೆಗಳಲ್ಲಿ ವರ್ಗಾಯಿಸಿದಲ್ಲಿ ಕೋಸ್ಟಲ್ ಕರ್ನಾಟಕದ ಬಗ್ಗೆ ಮನನ ಮಾಡಲು ಸಾಧ್ಯವಾಗುವುದು ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಪ್ರವಾಸೋದ್ಯಮ ವಿಷಯದಲ್ಲಿ ಪದವಿ ಮಟ್ಟದಲ್ಲಿ ಕೋರ್ಸ್‌ಗಳನ್ನು ನಡೆಸಲು ಇಲಾಖೆಯಿಂದ ವಿಶ್ವವಿದ್ಯಾಲಯಕ್ಕೆ ಏನಾದರೂ ಅನುದಾನ ನೀಡಲಾಗಿದೆಯೇ; ನೀಡಿದ್ದರೆ, ವಿವರ ನೀಡುವುದು ;



(ಊ) ಕೋಸ್ಟಲ್ ಕರಾವಳಿ ಪ್ರವಾಸೋದ್ಯಮ ಬೆಳವಣಿಗೆಗೆ ಐ.ಎ.ಎಸ್., ಮಟ್ಟದ ವಿಶೇಷ ಅಧಿಕಾರಿಯನ್ನು ನೇಮಿಸಿ ಕರಾವಳಿ ಪ್ರದೇಶದ ಪ್ರವಾಸೋದ್ಯಮ ಬೆಳವಣಿಗೆಗೆ ಸಹಕಾರಿಯಾಗಲು ಕ್ರಮಕೈಗೊಳ್ಳುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೇ ?

## ತುಳು ಭಾಷೆ ಮತ್ತು ಕಲಾವಿದರಿಗೆ ಪ್ರೋತ್ಸಾಹ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೫೬೦ (೭೦೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಳು ಭಾಷೆ ಮತ್ತು ಕಲಾವಿದರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ತುಳು ಭಾಷೆಯಲ್ಲಿ ನಿರ್ಮಾಣಗೊಂಡ ಅದರಲ್ಲೂ ಫಿಲ್ಮ್ ಕ್ಯಾಮರಾದ ಮುಖಾಂತರ ನಿರ್ಮಾಣಗೊಂಡ ಎಲ್ಲಾ ಫಿಲ್ಮ್‌ಗಳಿಗೂ ಸಬ್ಸಿಡಿ ನೀಡಲು ರಾಜ್ಯ ಸರ್ಕಾರ ಕ್ರಮಕೈಗೊಳ್ಳುವುದೇ; ಪ್ರಸ್ತುತ ಕೇವಲ ಒಂದು ಫಿಲ್ಮ್‌ಗೆ ಮಾತ್ರ ನೀಡುವ ನಿಯಮ ಇದ್ದು, ಇದರಿಂದ ಇತರರಿಗೂ ಅನ್ಯಾಯವಾಗುದಿಲ್ಲವೇ; ಕಳೆದ ೨೦೧೨ ರಿಂದ ಇಲ್ಲಿಯವರೆಗೆ ತುಳು ಭಾಷೆಯಲ್ಲಿ ಬಿಡುಗಡೆಗೊಂಡ ಫಿಲ್ಮ್ ಕ್ಯಾಮರಾ ಚಿತ್ರಗಳೆಷ್ಟು ;

(ಆ) ತುಳು ಭಾಷೆಯನ್ನು ಸಂವಿಧಾನದ ೮ನೇ ಪರಿಚ್ಛೇದದಲ್ಲಿ ಸೇರಿಸಲು ರಾಜ್ಯ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ;

(ಇ) ತುಳು ಭಾಷೆ ಅಭಿವೃದ್ಧಿಗೆ ಮತ್ತು ವಿಶ್ವಮಟ್ಟದಲ್ಲಿ ತುಳು ಭಾಷಿಕರನ್ನು ಒಗ್ಗೂಡಿಸಲು ಯಾವುದಾದರೂ ಯೋಜನೆ ರಾಜ್ಯ ಸರ್ಕಾರ ಕೈಗೊಂಡಿದೆಯೇ ;

(ಈ) ವಿಶ್ವ ತುಳು ಪರ್‌ಬಾ(ಹಬ್ಬ) ೨೦೧೫ಕ್ಕೆ ರಾಜ್ಯ ಸರ್ಕಾರದಿಂದ ಏನಾದರೂ ಅನುದಾನ ನೀಡಿದೆಯೇ; ತುಳು ಅಕಾಡೆಮಿಯ ನಿರ್ಮಾಣ ಹಂತದಲ್ಲಿರುವ ತುಳು ಭವನ ಯಾವಾಗ ಪೂರ್ಣಗೊಳ್ಳಲಿದೆ ; ಇದಕ್ಕೆ ತಗಲುವ ಒಟ್ಟು ವೆಚ್ಚ ಎಷ್ಟು; ಇದೇ ಮಾದರಿಯಲ್ಲಿ ಬೇರೆ ಅಕಾಡೆಮಿಗಳಿಗೂ ಭವನಗಳನ್ನು ನಿರ್ಮಾಣ ಮಾಡುವ ಆಲೋಚನೆ ಸರ್ಕಾರದ ಮುಂದೆ ಇದೆಯೇ (ವಿವರ ನೀಡುವುದು) ;

(ಉ) ಮಂಗಳೂರು ವಿಶ್ವವಿದ್ಯಾಲಯದಲ್ಲಿ **'ತುಳು ಪೀಠ'** ವೊಂದನ್ನು ರಚನೆ ಮಾಡಬೇಕೆಂಬ ಬೇಡಿಕೆಯು ಸರ್ಕಾರದ ಮುಂದಿದೆಯೇ ; ತುಳು ಅಧ್ಯಯನ ಮಾಡಲು ವಿಶ್ವವಿದ್ಯಾಲಯ ತುಳು ಡಿಪ್ಲೋಮಾ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, ಯಾವ ಹಂತದಲ್ಲಿದೆ ;

(ಊ) ರಾಜ್ಯ ಮಟ್ಟದಲ್ಲಿ ೨೦೧೩-೧೪ನೇ ವರ್ಷದಲ್ಲಿ ತುಳು ಅಕಾಡೆಮಿ ಕೈಗೊಂಡ ಕಾರ್ಯಕ್ರಮಗಳು ಯಾವುವು; ಯಾವ ಸ್ಥಳದಲ್ಲಿ (ವಿವರ ನೀಡುವುದು) ?

## ತುಳು ಭಾಷೆ ಮತ್ತು ಕಲಾವಿದರಿಗೆ ಪ್ರೋತ್ಸಾಹ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):-**

೫೬೧ (೭೦೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಳು ಭಾಷೆ ಮತ್ತು ಕಲಾವಿದರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ತುಳು ಭಾಷೆಯಲ್ಲಿ ನಿರ್ಮಾಣಗೊಂಡ ಅದರಲ್ಲೂ ಫಿಲ್ಮಿ ಕ್ಯಾಮರಾದ ಮುಖಾಂತರ ನಿರ್ಮಾಣಗೊಂಡ ಎಲ್ಲಾ ಫಿಲ್ಮ್‌ಗಳಿಗೂ ಸಬ್ಸಿಡಿ ನೀಡಲು ರಾಜ್ಯ ಸರ್ಕಾರ ಕ್ರಮಕೈಗೊಳ್ಳುವುದೇ; ಪ್ರಸ್ತುತ ಕೇವಲ ತುಳು ಭಾಷೆಯ ಒಂದು ಫಿಲ್ಮಿಗೆ ಮಾತ್ರ ನೀಡುವ ನಿಯಮ ಇದ್ದು, ಇದರಿಂದ ಇತರರಿಗೂ ಅನ್ಯಾಯವಾಗುದಿಲ್ಲವೇ; ಕಳೆದ ೨೦೧೨ ರಿಂದ ಇಲ್ಲಿಯವರೆಗೆ ತುಳು ಭಾಷೆಯಲ್ಲಿ ಬಿಡುಗಡೆಗೊಂಡ ಫಿಲ್ಮಿ ಕ್ಯಾಮರಾ ಚಿತ್ರಗಳೆಷ್ಟು ;



(ಆ) ತುಳು ಭಾಷೆಯನ್ನು ಸಂವಿಧಾನದ ೮ನೇ ಪರಿಚ್ಛೇದದಲ್ಲಿ ಸೇರಿಸಲು ರಾಜ್ಯ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ;

(ಇ) ತುಳು ಭಾಷೆ ಅಭಿವೃದ್ಧಿಗೆ ಮತ್ತು ವಿಶ್ವಮಟ್ಟದಲ್ಲಿ ತುಳು ಭಾಷಿಕರನ್ನು ಒಗ್ಗೂಡಿಸಲು ಯಾವುದಾದರೂ ಯೋಜನೆ ರಾಜ್ಯ ಸರ್ಕಾರ ಕೈಗೊಂಡಿದೆಯೇ ;

(ಈ) ವಿಶ್ವ ತುಳು ಪರ್‌ಬಾ(ಹಬ್ಬ) ೨೦೧೫ಕ್ಕೆ ರಾಜ್ಯ ಸರ್ಕಾರದಿಂದ ಏನಾದರೂ ಅನುದಾನ ನೀಡಿದೆಯೇ; ತುಳು ಅಕಾಡೆಮಿಯ ನಿರ್ಮಾಣ ಹಂತದಲ್ಲಿರುವ ತುಳು ಭವನ ಯಾವಾಗ ಪೂರ್ಣಗೊಳ್ಳಲಿದೆ ; ಇದಕ್ಕೆ ತಗಲುವ ಒಟ್ಟು ವೆಚ್ಚ ಎಷ್ಟು; ಇದೇ ಮಾದರಿಯಲ್ಲಿ ಬೇರೆ ಅಕಾಡೆಮಿಗಳಿಗೂ ಭವನಗಳನ್ನು ನಿರ್ಮಾಣ ಮಾಡುವ ಆಲೋಚನೆ ಸರ್ಕಾರದ ಮುಂದೆ ಇದೆಯೇ (ವಿವರ ನೀಡುವುದು) ;

(ಉ) ಮಂಗಳೂರು ವಿಶ್ವವಿದ್ಯಾಲಯದಲ್ಲಿ **'ತುಳು ಪೀಠ'** ವೊಂದನ್ನು ರಚನೆ ಮಾಡಬೇಕೆಂಬ ಬೇಡಿಕೆಯು ಸರ್ಕಾರದಮುಂದಿದೆಯೇ ; ತುಳು ಅಧ್ಯಯನ ಮಾಡಲು ವಿಶ್ವವಿದ್ಯಾಲಯ ತುಳು ಡಿಪ್ಲೋಮಾ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲಾಗಿದ್ದು, ಯಾವ ಹಂತದಲ್ಲಿದೆ ;

(ಊ) ರಾಜ್ಯ ಮಟ್ಟದಲ್ಲಿ ೨೦೧೩–೧೪ನೇ ವರ್ಷದಲ್ಲಿ ತುಳು ಅಕಾಡೆಮಿ ಕೈಗೊಂಡ ಕಾರ್ಯಕ್ರಮಗಳು ಯಾವುವು; ಅವು ಯಾವ ಸ್ಥಳದಲ್ಲಿ (ವಿವರ ನೀಡುವುದು) ?

## ಪ್ರಾಯೋಗಿಕವಾಗಿ ಶಾಲೆಗಳಲ್ಲಿ ಕೊಂಕಣಿ ಕಲಿಕೆ

**ಶ್ರೀ ಐವನ್ ಡಿ' ಸೋಜಾ (ನಾಮನಿರ್ದೇಶನ ಹೊಂದಿದವರು):–**

೫೬೭ (೭೦೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಶಾಲೆಗಳಲ್ಲಿ ಕೊಂಕಣಿ ಕಲಿಕೆಯನ್ನು ಪ್ರಾರಂಭಿಸಿರುವುದರಿಂದ ಪ್ರಸ್ತುತ ಎಷ್ಟು ವಿದ್ಯಾರ್ಥಿಗಳು ಕೊಂಕಣಿ ಭಾಷೆಯನ್ನು ಐಚ್ಛಿಕವಾಗಿ ತೆಗೆದುಕೊಂಡು ಕಲಿಯುತ್ತಿದ್ದಾರೆ ; ಹಾಗೂ ಯಾವ ಯಾವ ಶಾಲೆಗಳಲ್ಲಿ ಈ ವ್ಯವಸ್ಥೆ ಇದೆ (ವಿವರ ನೀಡುವುದು) ;

(ಆ) ಕೊಂಕಣಿ ಭಾಷೆಯು ೮ನೇ ಪರಿಚ್ಛೇದದಲ್ಲಿ ಮಾನ್ಯತೆ ಪಡೆದಿರುವುದರಿಂದ ಇದನ್ನು ಎಲ್ಲಾ ಜಿಲ್ಲೆಗಳ ಶಾಲೆಗಳಲ್ಲಿ ಅಳವಡಿಸಲು ಸರ್ಕಾರಕ್ಕೆ ಏನಾದರೂ ಅಡ್ಡಿ ಇದೆಯೇ ; ಇದ್ದರೆ, ವಿವರಣೆ ನೀಡುವುದು ;

(ಇ) ಕೊಂಕಣಿ ಅಕಾಡೆಮಿಗೆ ಸ್ವಂತ ಸ್ಥಳ ಮತ್ತು ಕಟ್ಟಡಗಳನ್ನು ಒದಗಿಸಿಕೊಡಲು, ಸರ್ಕಾರದ ಮುಂದೆ ಕೊಂಕಣಿ ಅಕಾಡೆಮಿ ಸಲ್ಲಿಸಿದ ಪ್ರಸ್ತಾವನೆಗೆ ಕ್ರಮಕೈಗೊಳ್ಳಲಾಗಿದೆಯೇ ; ಇತರೆ



ಅಕಾಡೆಮಿಗಳಿಗೆ ಸ್ಥಳ ಮತ್ತು ಕಟ್ಟಡಗಳಿಗೆ ಅನುದಾನ ನೀಡಲಾಗಿದೆಯೇ (ವಿವರ ನೀಡುವುದು) ;

(ಈ) ರಾಜ್ಯದ ಅಕಾಡೆಮಿಗಳ ಸದಸ್ಯರುಗಳಿಗೆ ಮಾಸಿಕ ಗೌರವಧನ ರೂ.೫. ಸಾವಿರ ಬೇಡಿಕೆಗಳನ್ನು ಸರ್ಕಾರ ಗಮನಿಸಿ ಪುರಸ್ಕರಿಸಿದೆಯೇ ; ಕೈಗೊಂಡ ಕ್ರಮದ ಬಗ್ಗೆ ವಿವರ ನೀಡುವುದು ;

(ಉ) ಮಂಗಳೂರು ವಿಶ್ವವಿದ್ಯಾಲಯದಲ್ಲಿ **'ಕೊಂಕಣಿ ಪೀಠ'** ರಚನೆ ಮಾಡಬೇಕೆಂಬ ಕೊಂಕಣಿ ಸಾಹಿತ್ಯ ಅಕಾಡೆಮಿ ನೀಡಿದ ಬೇಡಿಕೆಯನ್ನು ಮುಂದಿನ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗುವುದೆ ;

(ಊ) ಕೊಂಕಣಿ ಭಾಷಿಗರು **'ನಾಟಕ ಅಕಾಡೆಮಿಯೊಂದನ್ನು'** ರಚಿಸಬೇಕೆಂದು ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸಿದ್ದು, ಮುಂದಿನ ದಿನಗಳಲ್ಲಿ ಸರ್ಕಾರ ಅವರ ಬೇಡಿಕೆಗಳ ಬಗ್ಗೆ ಸ್ಪಂದಿಸುವುದೇ (ವಿವರ ನೀಡುವುದು) ?

## ದಿ: ಸಿ ಹೊನ್ನಪ್ಪ ಭಾಗವತರ ಶತಮಾನೋತ್ಸವ ಆಚರಣೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೫೬೩ (೭೧೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಆನೇಕ ರಂಗಗಳಲ್ಲಿ ದುಡಿದ ಹಿರಿಯರಿಗೆ ಗೌರವಸಲ್ಲಿಸಲು ಶತಮಾನೋತ್ಸವ ಆಚರಿಸಲು ಇರುವ ಮಾನದಂಡವೇನು ;

(ಆ) ಕಳೆದ ಐದು ವರ್ಷಗಳಲ್ಲಿ ರಾಜ್ಯದ ಆನೇಕ ಶತಾಯುಷಿಗಳಿಗೆ ಎಷ್ಟು ಹಾಗೂ ಯಾರ್‍ಯಾರಿಗೆ ನೆನಪಿನ ಕಾರ್ಯಕ್ರಮ ಏರ್ಪಡಿಸಲಾಗಿತ್ತು (ಹೆಸರು, ಕಾರ್ಯಕ್ರಮ ನಡೆದ ಸ್ಥಳ ದಿನಾಂಕ, ಕಾರ್ಯಕ್ರಮಕ್ಕೆ ಮಾಡಿರುವ ವೆಚ್ಚ ಇತ್ಯಾದಿ ವಿವರ ಕೊಡುವುದು) ;

(ಇ) ದಿ: ಸಿ. ಹೊನ್ನಪ್ಪ ಭಾಗವತರ್ ಶತಮಾನೋತ್ಸವ ಆಚರಣೆಯನ್ನು ಸರ್ಕಾರ ಯಾವ ದಿನಾಂಕದಂದು ಮಾಡಲು ತೀರ್ಮಾನಿಸಲಾಗಿದೆ ; ಈ ಬಗ್ಗೆ ಇಲಾಖೆ ತೆಗೆದುಕೊಂಡಿರುವ ಕ್ರಮಗಳೇನು ;

(ಈ) ಶತಮಾನೋತ್ಸವ ಕಾರ್ಯಕ್ರಮದಲ್ಲಿ ಯಾವ ಯಾವ ಕಾರ್ಯಕ್ರಮ ಇಟ್ಟುಕೊಳ್ಳಲಾಗುವುದು ;

(ಉ) ಈ ಕಾರ್ಯಕ್ರಮದ ಪೂರ್ವ ತಯಾರಿ ಬಗ್ಗೆ ಸಭೆ ಹಾಗೂ ಇತ್ಯಾದಿ ನಡೆದಿರುವ ಚರ್ಚೆ ಬಗ್ಗೆ ಮಾಹಿತಿ ನೀಡುವುದು ?

## ಗ್ರಾಮೀಣ ರಸ್ತೆಗಳ ಅಭಿವೃದ್ಧಿ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೫೬೪ (೭೧೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಹಲವಾರು ವರ್ಷಗಳಿಂದ ತುರುವೇಕೆರೆ ಕ್ಷೇತ್ರದ ಗ್ರಾಮೀಣ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ ;

(ಆ) ೨೦೧೨–೨೦೧೩, ೨೦೧೩–೨೦೧೪ನೇ ಸಾಲಿನಲ್ಲಿ ತುರುವೇಕೆರೆ ಕ್ಷೇತ್ರಕ್ಕೆ ವಿವಿಧ ಯೋಜನೆಯಡಿ ಗ್ರಾಮೀಣ ರಸ್ತೆಗಳಿಗೆ ಮಂಜೂರಾಗಿರುವ ಮೊತ್ತವೆಷ್ಟು; ಯಾವ ಯಾವ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ ;



(ಇ) ರಸ್ತೆ ಹೊರತುಪಡಿಸಿ ಕೆರೆಕಟ್ಟೆ, ಇನ್ನಿತರೆ ಕಾರ್ಯಕ್ರಮಗಳಿಗೆ ಸರ್ಕಾರ ನೀಡಿರುವ ಮೊತ್ತವೆಷ್ಟು; ಇದರಲ್ಲಿ ಯಾವ ಯಾವ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ (ಪೂರ್ಣ ವಿವರ ನೀಡುವುದು) ?

## ಬಡವರಿಗೆ ಮನೆ ಹಂಚಿಕೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೫೬೫ (೭೧೪) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಿಂದ ತುರುವೇಕೆರೆ ವಿಧಾನ ಸಭೆ ಕ್ಷೇತ್ರದಲ್ಲಿ ವಿವಿಧ ವಸತಿ ಯೋಜನೆ ಅಡಿಯಲ್ಲಿ ಯಾವ ಯಾವ ಗ್ರಾಮದಲ್ಲಿ ಯಾರು ಯಾರಿಗೆ ಮನೆಗಳನ್ನು ಮಂಜೂರು ಮಾಡಲಾಗಿದೆ (ಪಂಚಾಯತಿವಾರು ವಿವರ ನೀಡುವುದು) ;

(ಆ) ಕ್ಷೇತ್ರದ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯಿತಿಗಳೆಷ್ಟು ; ಅವು ಯಾವುವು ;

(ಇ) ಪ್ರತಿ ಪಂಚಾಯಿತಿಗೆ ಯಾವ ಮಾನದಂಡದ ಮೇಲೆ ಎಷ್ಟೆಷ್ಟು ಮನೆಗಳನ್ನು ನೀಡಲಾಗಿದೆ ಹಾಗೂ ಯಾವ ಮಾನದಂಡದಲ್ಲಿ ವಸತಿ ರಹಿತರನ್ನು ಆಯ್ಕೆ ಮಾಡಲಾಗುವುದು ;

(ಈ) ಹಾಗಿದ್ದಲ್ಲಿ, ಸರ್ಕಾರ ನೀಡಿರುವ ಮನೆಗಳನ್ನು ನೀಡಲು ಪ್ರತಿ ಗ್ರಾಮ ಪಂಚಾಯತಿಯಲ್ಲಿ ಯಾವಾಗ, ಎಲ್ಲಿ, ಗ್ರಾಮಸಭೆ

ನಡೆಸಲಾಗಿದೆ; ಗ್ರಾಮಸಭೆಗಳ ದಿನಾಂಕ, ಆಯ್ಕೆ ವಿಧಾನಗಳ ಪೂರ್ಣ ವಿವರ ನೀಡುವುದು; (ಆಯ್ಕೆಯಾಗಿರುವ ಫಲಾನುಭವಿಗಳ ಹೆಸರು ಹಾಗೂ ಗ್ರಾಮದ ಸಮೇತ ವಿವರ ನೀಡುವುದು) ;

(ಉ) ಗ್ರಾಮ ಸಭೆ ನಂತರ ತಾಲ್ಲೂಕು ಆಯ್ಕೆ ಸಮಿತಿಯ ಕರ್ತವ್ಯವೇನು ;

(ಊ) ಬಡವರಿಗೆ ಮನೆ ನೀಡದೆ ಉಳ್ಳವರಿಗೆ ಮನೆ ನೀಡಿ ಅವ್ಯವಹಾರ ಮಾಡಿರುವ ಪ್ರಕರಣಗಳೆಷ್ಟು ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಳ್ಳುವ ಶಿಸ್ತು-ಕ್ರಮಗಳೇನು ?

## ಪತಿ-ಪತ್ನಿ ಶಿಕ್ಷಕರ ವರ್ಗಾವಣೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೫೬೬(೭೧೧) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೆಲವು ವರ್ಷಗಳಿಂದ ಪತಿ-ಪತ್ನಿ ಶಿಕ್ಷಕರ ವರ್ಗಾವಣೆ ಕಾರ್ಯಗತವಾಗದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಪ್ರಕರಣಗಳ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಸರ್ಕಾರ ವರ್ಗಾವಣೆಯ ನೀತಿಯನ್ನು ಮಾರ್ಪಾಡು ಮಾಡಲು ಉದ್ದೇಶ ಹೊಂದಿದೆಯೇ ;

(ಆ) ಈಗಾಗಲೇ ಕಳೆದ ಐದು ವರ್ಷಗಳಿಂದ ಹಲವು ಶಿಕ್ಷಕರು ಪತಿ-ಪತ್ನಿ ಪ್ರಕರಣದ ಅಡಿಯಲ್ಲಿ ವರ್ಗಾವಣೆಯ ಕೌನ್ಸಿಲಿಂಗ್‌ಗೆ ಹಾಜರಾದರೂ, ಅವರು ಆಯ್ದೆಮಾಡಿದ ವಿಷಯದ



ಹುದ್ದೆ, ತಾವು ಬಯಸಿರುವ ತಾಲ್ಲೂಕು/ಜಿಲ್ಲೆಯಲ್ಲಿ ಸ್ಥಳ ಇಲ್ಲದಿರುವುದರಿಂದ ವರ್ಗಾವಣೆ ಸಿಗದೆ ಇರುವಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳಿಗೆ ತಿದ್ದುಪಡಿ ತರಲು ಉದ್ದೇಶಿಸಲಾಗಿದೆಯೇ, ಇದ್ದಲ್ಲಿ ಯಾವಾಗ ತರಲಾಗುವುದು ;

(ಇ) ಶಿಕ್ಷಕಿಯರನ್ನು ತಾಲ್ಲೂಕು ಮಟ್ಟದಿಂದ ದೂರದ ಊರುಗಳಿಗೆ ಬಸ್‌ಸಂಚಾರ ಇಲ್ಲದೆ ೪-೫ ಕಿ.ಮೀ.ನಡೆಯುವ ಹಾಗೆ ಮಾಡಿ ತಾಲ್ಲೂಕು ಶಿಕ್ಷಣ ಅಧಿಕಾರಿಗಳು ವರ್ತಿಸುತ್ತಿರುವುದು ಗಮನಕ್ಕೆ ಬಂದಿದೆಯೇ ;

(ಈ) ಇದನ್ನು ತಪ್ಪಿಸಲು ಸರ್ಕಾರ ತೆಗೆದುಕೊಳ್ಳಲಾಗುವ ಕ್ರಮಗಳೇನು ?

## ಕಲಾವಿದರ ಮಾಸಾಶನ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೫೬೭ (೭೧೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಮಾಸಾಶನ ಪಡೆಯುತ್ತಿರುವ ಸಂಕಷ್ಟದಲ್ಲಿರುವ ಅಶಕ್ತ ಕಲಾವಿದ ಫಲಾನುಭವಿಗಳ ಸಂಖ್ಯೆ ಎಷ್ಟು ;

(ಆ) ಪ್ರಸಕ್ತ ಸಾಲಿನಲ್ಲಿ ಎಷ್ಟು ಕಲಾವಿದರಿಗೆ ಮಾಸಾಶನ ಮಂಜೂರಾತಿ ಮಾಡಲಾಗಿದೆ, ಅನೇಕ ವರ್ಷಗಳಿಂದ ಅರ್ಜಿ ಸಲ್ಲಿಸಿದ್ದು ಮಂಜೂರಾಗದಿರಲು ಕಾರಣವೇನು, ಮಂಜೂರು ಮಾಡಲು ವಿಧಿಸುವ ಮಾನದಂಡವೇನು ;

(ಇ) ಬೆಲೆ ಏರಿಕೆ ಕಾರಣದಿಂದಾಗಿ, ಈಗಿರುವ ಮಾಸಾಶನ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಹಲವಾರು ವರ್ಷಗಳಿಂದ ಮಾಸಾಶನ ಅರ್ಜಿ ಸಲ್ಲಿಸಿ ಇದುವರೆವಿಗೂ ಮಂಜೂರಾಗದೆ ಉಳಿದಿರುವ ಅರ್ಜಿಗಳೆಷ್ಟು, ಇವುಗಳನ್ನು ಯಾವಾಗ ಮಂಜೂರು ಮಾಡಲಾಗುವುದು ?

## ಗ್ರಾಮ ಪಂಚಾಯತ್ ಹಮ್ಮಿಕೊಳ್ಳುವ ಯೋಜನೆಗಳು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೬೮ (೭೧೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮ ಪಂಚಾಯತಿಯಡಿ ಹಮ್ಮಿಕೊಳ್ಳಲಾದ ಯೋಜನೆಗಳು ಯಾವುವು (ಸಂಪೂರ್ಣ ಮಾಹಿತಿ ನೀಡುವುದು) ;

(ಆ) ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಯಾವ ಯಾವ ಯೋಜನೆಗಳಡಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ತಾಲ್ಲೂಕು, ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು) ;

(ಇ) ೨೦೧೩ನೇ ಸಾಲಿನಿಂದ ಇದುವರೆಗೆ ಈ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಚಾಲ್ತಿಯಲ್ಲಿರುವ ಕಾಮಗಾರಿಗಳೆಷ್ಟು ?



## ವಸತಿ ಯೋಜನೆಗಳು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೬೯ (೭೧೯) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ೨೦೧೩ ಮತ್ತು ೨೦೧೪ನೇ ಸಾಲಿನವರೆಗೆ ಮಂಜೂರಾತಿ ನೀಡಿರುವ ಅಂಬೇಡ್ಕರ್, ಬಸವ, ಇಂದಿರಾ ಮನೆಗಳ ಸಂಖ್ಯೆ ಎಷ್ಟು (ಗ್ರಾಮ ಪಂಚಾಯತಿವಾರು ವಿವರ ನೀಡುವುದು) ;

(ಆ) ಮಂಜೂರಾತಿ ನಂತರ ಪ್ರಾರಂಭವಾಗದೇ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು ;

(ಇ) ಪ್ರಾರಂಭವಾಗದೇ ಇರುವ ಮನೆಗಳನ್ನು ಪುನಃ ಪ್ರಾರಂಭಿಸಲು ಸರ್ಕಾರದಿಂದ ತೆಗೆದುಕೊಂಡ ಕ್ರಮಗಳೇನು ;

(ಈ) ಪುನಃ ಪ್ರಾರಂಭಿಸಿದ ಮನೆಗಳಿಗೆ ಸರ್ಕಾರ ನೀಡುವ ಸಹಾಯಧನ ಎಷ್ಟು ?

## ನಿರ್ಮಲ ಭಾರತ ಅಭಿಯಾನ ಯೋಜನೆ

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೭೦ (೭೧೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೩–೧೪ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ನಿರ್ಮಲ ಭಾರತ ಅಭಿಯಾನ ಯೋಜನೆ ಅಡಿ ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ ;

(ಆ) ಇದರಲ್ಲಿ ಶಿಕ್ಷಣ ಇಲಾಖೆ ಸೇರಿದಂತೆ ಯಾವ ಯಾವ ಇಲಾಖೆಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ; ಅನುದಾನವನ್ನು ಉಪಯೋಗಿಸಲಾದ ವಿವರಗಳನ್ನು ನೀಡುವುದು ;

(ಇ) ಐ.ಇ.ಸಿ ಕಾರ್ಯಕ್ರಮಗಳನ್ನು ಯಾವ ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು) ?

## ಬಾಲ್ಯ ವಿವಾಹ ಪ್ರಕರಣಗಳು

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೭೧ (೭೧೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯುಗಳನ್ನು ದಯುವಿಟ್ಟು ತಿಳಿಸುವರೆ :–

(ಅ) ಕಲಬುರ್ಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಿಂದ ನಡೆದಿರುವ ಬಾಲ್ಯ ವಿವಾಹ ಪ್ರಕರಣಗಳೆಷ್ಟು ;

(ಆ) ಇದುವರೆಗೆ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) ;

(ಇ) ಈ ಬಾಲ್ಯ ವಿವಾಹ ನಿಷೇಧ ಕಾಯಿದೆ ಅಡಿ ಈ ಜಿಲ್ಲೆಗಳಲ್ಲಿ ಎಷ್ಟು ಮಕ್ಕಳನ್ನು ರಕ್ಷಿಸಲಾಗಿದೆ; ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?



## ಕಾರವಾರ ಜಿಲ್ಲೆಯಲ್ಲಿ ಇರುವ ಕೋಟೆಗಳನ್ನು ಅಭಿವೃದ್ಧಿಪಡಿಸುವ ಕುರಿತು

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೭೨ (೧೬೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯುಗಳನ್ನು ದಯುವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವ ಐತಿಹಾಸಿಕ ಕೋಟೆಗಳೆಷ್ಟು (ಮಾಹಿತಿ ನೀಡುವುದು) ;

(ಆ) ಈ ಕೋಟೆಗಳ ಸಂರಕ್ಷಣೆಗಾಗಿ ರಾಜ್ಯ ಸರಕಾರ ಕೈಗೊಂಡ ಕ್ರಮಗಳೇನು ;

(ಇ) ಇವುಗಳನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ಯೋಜನೆ ಹಮ್ಮಿಕೊಂಡಿದೆಯೇ (ಸಮಗ್ರ ಮಾಹಿತಿ ನೀಡುವುದು) ?

## ಶಿಶು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅವ್ಯವಹಾರ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೭೩ (೧೭೧) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ವಿಷಯುಗಳನ್ನು ದಯುವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ೧ ವರ್ಷದ ಅವಧಿಯಲ್ಲಿ ಶಿಶು ಅಭಿವೃದ್ಧಿ ಅಧಿಕಾರಿಗಳು ತಮ್ಮ ಅಧೀನದಲ್ಲಿರುವ

ಎಮ್.ಎಸ್.ಪಿ.ಟಿ.ಸಿ (ಸಂಸ್ಥೆ) ಗಳಿಗೆ ಆಹಾರ ಪೂರೈಕೆ ಮಾಡಲು ನೀಡಿದ ಬೇಡಿಕೆ ಪತ್ರ ಹಾಗೂ ಇದಕ್ಕೆ ಎಮ್.ಎಸ್.ಪಿ.ಟಿ.ಸಿ (ಸಂಸ್ಥೆ) ಆಹಾರ ಪೂರೈಕೆ ಮಾಡಿದ ವಿವರ ಹಾಗೂ ಪ್ರತಿ ತಾಲ್ಲೂಕಿನ ಅಂಗನವಾಡಿಗಳಿಗೆ ಶಿಶು ಅಭಿವೃದ್ಧಿ ಅಧಿಕಾರಿಗಳಿಂದ ಆಹಾರ ಪೂರೈಕೆಯಾದ ವಿವರ ನೀಡುವುದು (ತಾಲ್ಲೂಕುವಾರು, ತಿಂಗಳವಾರು ವಿವರ ನೀಡುವುದು) ;

(ಆ) ಈಗಾಗಲೇ ಕೆಲವೊಂದು ತಾಲ್ಲೂಕಿನಲ್ಲಿ ಸದರಿ ಸಂಸ್ಥೆಯ ಸದಸ್ಯರುಗಳ ಅವಧಿ ಮುಗಿದಿರುತ್ತದೆಂದು ತಿಳಿದು ಬಂದಿದ್ದು, ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಮಾತ್ರ ಹೊಸ ಸದಸ್ಯರ ಆಯ್ಕೆ ಆಗಬೇಕಾದ ಪ್ರಕ್ರಿಯೆ ಬಾಕಿ ಇರುತ್ತದೆಂದು ತಿಳಿದು ಬಂದಿರುತ್ತದೆ ಇದು ನಿಜವೇ (ವಿವರ ನೀಡುವುದು) ?

## ಮನೆಗಳ ಹಂಚಿಕೆಯಲ್ಲಿ ಅವ್ಯವಹಾರ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೭೪ (೧೭೦) ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ೨ ವರ್ಷದಿಂದ ವಸತಿ ಇಲಾಖೆ ಹಂಚಿಕೆ ಮಾಡಿರುವ ಮನೆಗಳು ಮತ್ತು ನಿವೇಶನಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು) ;



(ಆ) ಇವುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ನೀಡಿರುವ ಮನೆಗಳು ಮತ್ತು ನಿವೇಶನಗಳ ಸಂಖ್ಯೆ ಎಷ್ಟು; ವಸತಿದಾರರ ಹೆಸರಿನೊಂದಿಗೆ ತಾಲ್ಲೂಕುವಾರು ವಿವರ ನೀಡುವುದು ;

(ಇ) ಸದರಿ ಮನೆಗಳ ಹಂಚಿಕೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ತನಿಖೆ ಕೈಗೊಳ್ಳಲಾಗಿದೆಯೇ ?

## ಗೌರವಧನ ಹೆಚ್ಚಳ

**ಶ್ರೀ ಛಬ್ಬಿ ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೭೫ (೫೯೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:–

ಗ್ರಾಮ ಪಂಚಾಯತ್ ಸದಸ್ಯರುಗಳಿಗೆ ಈಗ ತಿಂಗಳಿಗೆ ಗೌರವಧನ ರೂಪದಲ್ಲಿ ರೂ. ೨೫೦–೦೦ ನೀಡುತ್ತಿದ್ದು, ಗ್ರಾಮ ಪಂಚಾಯತ್ ಆಡಳಿತದಲ್ಲಿ ಪಾರದರ್ಶಕತೆ ಕಂಡು ಬರುತ್ತಿಲ್ಲ. ಆದ್ದರಿಂದ ಅವರಿಗೆ ತಿಂಗಳಿಗೆ ಕನಿಷ್ಠ ರೂ. ೧೦೦೦–೦೦ ಗೌರವಧನ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಗ್ರಾಮ ಪಂಚಾಯತಿಗಳಿಂದ ವಿದ್ಯುತ್ ಬಿಲ್ ಪಾವತಿ

**ಶ್ರೀ ಛಬ್ಬಿ ನಾಗರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೫೭೬ (೫೯೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಗ್ರಾಮ ಪಂಚಾಯತಿಗಳಿಗೆ ನೀಡುವ ಶಾಸನ ಬದ್ಧ ಅನುದಾನದಲ್ಲಿ ಶೇ.೬೦ರಷ್ಟು ಅನುದಾನವನ್ನು ವಿದ್ಯುತ್

ಬಿಲ್ಲು ಎಂದು ಮುರಿದುಕೊಳ್ಳುವುದರಿಂದ ಅಭಿವೃದ್ಧಿ ಕುಂಠಿತವಾಗುವುದಿಲ್ಲವೇ ;

(ಆ) ಪ್ರತಿಯೊಂದು ಗ್ರಾಮ ಪಂಚಾಯತಿಗೆ ಸರ್ಕಾರದಿಂದ ಪ್ರತ್ಯೇಕವಾಗಿ ವಿದ್ಯುತ್ ಬಿಲ್ಲು ಎಂದು ಅನುದಾನ ಬಿಡುಗಡೆ ಮಾಡಲು ಸಾಧ್ಯವಿಲ್ಲವೇ ?

**ವಿ. ಶ್ರೀಶ್**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–59/ಕಾ.ಸೂ. 0 3459/ 1500 ಪ್ರತಿಗಳು/9–12–14